ಪೀಠಿಕೆ:

ಚಿಕ್ಕಮಗಳೂರು ಭೌಗೋಳಿಕವಾಗಿ, ಸಾಂಸ್ಕೃತಿಕವಾಗಿ ವಿಶೇಷತೆಗಳನ್ನು ಹೊಂದಿರುವ ಜಿಲ್ಲೆಯಾಗಿದೆ. ವಿಫುಲವಾದ ನಿಸರ್ಗ ಸಂಪತ್ತಿನಿಂದ ಆವೃತವಾಗಿ ನಿತ್ಯವೂ ಕಂಗೊಳಿಸುತ್ತಿದೆ. ಒಂದು ಭಾಗ ಗಿರಿ–ಶಿಖರಗಳಿಂದ ಕೂಡಿದ ಪಶ್ಚಿಮ ಘಟ್ಟಗಳ ಸಾಲಿನಿಂದ ಆವೃತವಾದ ಮಲೆನಾಡು ಪ್ರದೇಶವಿದ್ದರೆ, ಮತ್ತೊಂದು ಭಾಗ ಬಯಲು ಸೀಮೆಯಿಂದ ಕೂಡಿದ ಮೈದಾನ ಪ್ರದೇಶವಾಗಿದೆ. ಹಸಿರಿನ ತವರೂರು ಮತ್ತು ಕಾಫಿ ನಾಡು ಎಂದು ಪ್ರಸಿದ್ಧಿಯನ್ನು ಪಡೆದಿದೆ. ಚಿಕ್ಕಮಗಳೂರು ಜಿಲ್ಲೆಯು ಕರ್ನಾಟಕದ ಪಶ್ಚಿಮ ಭಾಗದ ಪಶ್ಚಿಮ ಘಟ್ಟಗಳ ಸಾಲಿನಲ್ಲಿದ್ದು, ಒಟ್ಟು 7 ತಾಲ್ಲೂಕುಗಳನ್ನು ಒಳಗೊಂಡಿದೆ. ಅವುಗಳೆಂದರೆ ಚಿಕ್ಕಮಗಳೂರು, ಕಡೂರು, ಕೊಪ್ಪ, ಮೂಡಿಗೆರೆ, ನರಸಿಂಹರಾಜಪುರ, ಶೃಂಗೇರಿ ಮತ್ತು ತರೀಕೆರೆ. ಜಿಲ್ಲೆಯ ಪಶ್ಚಿಮ ಘಟ್ಟಗಳಲ್ಲಿ ಹಲವು ಪ್ರಮುಖ ನದಿಗಳು ಉಗಮಿಸುತ್ತದೆ. ಅವುಗಳೆಂದರೆ ತುಂಗಾ, ಭದ್ರಾ, ವೇದಾವತಿ, ನೇತ್ರಾವತಿ ಮತ್ತು ಯಗಚಿ ನದಿಗಳು. ಇವುಗಳಿಂದಾಗಿ ಜಿಲ್ಲೆಯಲ್ಲಿ ಮತ್ತು ರಾಜ್ಯದಲ್ಲಿ ವಿವಿದುದ್ದೇಶ ನೀರಾವರಿ ಯೋಜನೆಗಳ ಮೂಲಕ ಆರ್ಥಿಕ ಚಟುವಟಿಕೆಗಳಿಗೆ ಕಾರಣವಾಗಿವೆ. ಜಿಲ್ಲೆಯಲ್ಲಿನ ಹಲವು ದೇವಾಲಯಗಳು ಕಲೆ ಮತ್ತು ವಾಸ್ತುಶಿಲ್ಪಕ್ಕೆ ಸಾಕ್ಷಿಯಾಗಿವೆ. ಶಿಲ್ಪ ವೈಭವಕ್ಕೆ ಶೃಂಗೇರಿ ದೇವಾಲಯ, ಅಮೃತಾಪುರ ದೇವಾಲಯ, ಬೆಳವಾಡಿಯ ಪುರಾತನ ದೇವಾಲಯಗಳು ಹೆಸರುವಾಸಿಯಾಗಿವೆ. ಜಿಲ್ಲೆಯಲ್ಲಿ ಅನೇಕ ಗಿರಿಧಾಮಗಳು, ಜಲಪಾತಗಳಿದ್ದು ಜನರನ್ನು ಆಕರ್ಷಿಸುತ್ತಿದೆ. ಕೆಮ್ಮಣ್ಣುಗುಂಡಿ, ಮುಳಯ್ಯನ ಗಿರಿ, ಬಾಬಾಬುಡನ್‌ಗಿರಿ, ದತ್ತಾತ್ರೇಯ ಪೀಠ ಪ್ರಸಿದ್ಧವಾದ ಗಿರಿಧಾಮಗಳಾಗಿವೆ. ಹೆಬ್ಬೆ ಜಲಪಾತ, ಮಾಣಿಕ್ಯಧಾರಾ ಜಲಪಾತ, ಕಲ್ಲತ್ತಿಗಿರಿ ಜಲಪಾತಗಳು ಪ್ರಸಿದ್ಧವಾಗಿವೆ. ಕುದುರೆ ಮುಖ ರಾಷ್ಟ್ರೀಯ ಉದ್ಯಾನವನ, ಭದ್ರ ವನ್ಯಜೀವಿ ಧಾಮಗಳು ಜಿಲ್ಲೆಯಲ್ಲಿವೆ.

ಕರ್ನಾಟಕದ ಮುಕುಟ ಮುಳ್ಳಯ್ಯನಗಿರಿಯು 1925 ಮೀಟರ್ ಎತ್ತರವಿದ್ದು, ಇದು ದಕ್ಷಿಣ ಭಾರತದಲ್ಲೆ ಅತ್ಯುನ್ನತ ಗಿರಿಶಿಖರವಾಗಿದೆ. ಬಾಬಾಬುಡನ್‌ಗಿರಿ (1894 ಮೀಟರ್), ಕುದುರೆಮುಖ (1895 ಮೀಟರ್) ಜಿಲ್ಲೆಯಲ್ಲಿನ ಇತರೆ ಉನ್ನತ ಶಿಖರಗಳಾಗಿವೆ.[1] ಜಿಲ್ಲೆಯ ಪ್ರಾಚೀನ ದೇವಾಲಯಗಳು ವಾಸ್ತುಶಿಲ್ಪಕ್ಕೆ ತನ್ನದೇ ಆದ ಕೊಡುಗೆ ನೀಡಿವೆ. ಶೃಂಗೇರಿಯ ದೇವಸ್ಥಾನ ಆದಿ ಶಂಕರಚಾರ್ಯರಿಂದ ಸ್ಥಾಪಿಸಲ್ಪಟ್ಟು ತುಂಗಾ ನದಿಯ ದಂಡೆಯಲ್ಲಿದೆ. ವಿದ್ಯಾಶಂಕರ ದೇವಸ್ಥಾನ 12 ರಾಶಿ ಮಂಡಲದ ಕಂಬಗಳಿಂದ ನಿರ್ಮಿಸಲ್ಪಟ್ಟು ಒಂದು ನಿರ್ದಿಷ್ಟ ಕಂಬದ ಮೇಲೆ ಸೂರ್ಯನ ಕಿರಣಗಳು ಆಯಾಯ

[1] ಎಸ್. ಜಿ. ರಾಮದಾಸರೆಡ್ಡಿ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಹುಟ್ಟುವ ನದಿಗಳು, ಚಿಕ್ಕಮಗಳೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಸಂ. ಡಾ. ಆರ್. ಗೋಪಾಲ್, ಮೈಸೂರು 2009, ಪುಟ 347.

ರಾಶಿಗನುಗುಣವಾಗಿ ಬೀಳುವಂತೆ ಅದ್ಭುತ ಕೌಶಲ್ಯದಿಂದ ಜೋಡಿಸಲಾಗಿದೆ. ಗತಕಾಲದ ಶಿಲ್ಪ ವೈಭವವನ್ನು ಇಲ್ಲಿ ಕಾಣಬಹುದು.

ಕರ್ನಾಟಕ ಪ್ರದೇಶವನ್ನು ಆಳಿದ ಅನೇಕ ರಾಜ ಮನೆತನಗಳ ಅಧೀನಕ್ಕೆ ಈ ಜಿಲ್ಲೆಯು ಒಳಪಟ್ಟಿತ್ತು. ಹೊಯ್ಸಳರ ನೆಲೆವೀಡು ಎಂದು ಕರೆಸಿಕೊಂಡಿದೆ.[2] ಸಂಸ್ಥಾನದ ಅತ್ಯಂತ ಹಳೆಯ ಕೆಲವೇ ಕೆಲವು ಜಿಲ್ಲೆಗಳಲ್ಲಿ ಚಿಕ್ಕಮಗಳೂರು ಒಂದಾಗಿದೆ. ಮೈಸೂರು ಒಡೆಯರು ಮತ್ತು ಬ್ರಿಟಿಷ್ ವಸಾಹತುಶಾಯಿ ಆಳ್ವಿಕೆ ಕಾಲದಲ್ಲಿ ಚಿಕ್ಕಮಗಳೂರು ಜಿಲ್ಲೆ ನಗರ ವಿಭಾಗದ ಒಂದು ಭಾಗವಾಗಿತ್ತು. ಒಟ್ಟು ಏಳು ತಾಲ್ಲೂಕುಗಳಲ್ಲಿ ನಾಲ್ಕು ತಾಲ್ಲೂಕುಗಳು ಪೂರ್ಣ ಮಲೆನಾಡು ಪ್ರದೇಶಕ್ಕೆ ಸೇರಿದವಾಗಿವೆ. ಉಳಿದ ಒಂದು ಬಯಲು ಸೀಮೆಯಾದರೆ ಮತ್ತೆರಡು ಅರೆಮಲೆನಾಡು ಪ್ರದೇಶವಾಗಿದೆ. ಮಲೆನಾಡು ಹಾಗೂ ಬಯಲುಸೀಮೆ ಪ್ರದೇಶಗಳನ್ನು ಒಳಗೊಂಡಿರುವ ಜಿಲ್ಲೆಯ ಜನರು ಪ್ರಾಚೀನ ಕಾಲದಿಂದ ಕೃಷಿಯನ್ನು ಮುಖ್ಯ ಕಸುಬಾಗಿ ಅವಲಂಬಿಸಿಕೊಂಡು ಬಂದಿದ್ದು, ಇದರಿಂದಾಗಿ ಆಹಾರ ಬೆಳೆಗಳಿಗೆ ಮತ್ತು ತೋಟಗಾರಿಕಾ ಬೆಳೆಗಳಿಗೆ ಜಿಲ್ಲೆ ಪ್ರಸಿದ್ಧಿಯಾಗಿದೆ. ಈ ಮೂಲಕ ಹೆಚ್ಚಿನ ಭೂ ಕಂದಾಯವನ್ನು ಸಲ್ಲಿಸುವುದರ ಮೂಲಕ ಮೈಸೂರು ಸಂಸ್ಥಾನದ ಆರ್ಥಿಕ ಏಳಿಗೆಗೆ ತನ್ನದೆ ಆದ ವಿಶಿಷ್ಟ ಕೊಡುಗೆಗಳನ್ನು ಇತಿಹಾಸ ಕಾಲದಿಂದಲೂ ನೀಡುತ್ತಾ ಬಂದಿದೆ.

ಜಿಲ್ಲೆಯಲ್ಲಿ ಪ್ರಸಿದ್ದವಾದ ಅನೇಕ ನದಿ, ತೊರೆಗಳು ಉಗಮಿಸಿ, ಕೃಷಿ ಚಟುವಟಿಕೆಗೆ ಸಹಾಯಕವಾಗಿದೆ. ಜಿಲ್ಲೆಯ ಕೃಷಿಕರು ಪ್ರಮುಖವಾಗಿ ಆಹಾರ ಧಾನ್ಯಗಳು ಮತ್ತು ತೋಟಗಾರಿಕಾ ಬೆಳೆಗಳನ್ನು ಬೆಳೆಯುತ್ತಿದ್ದು, ನೀರಾವರಿಗಾಗಿ ಮಳೆ ಜೊತೆಗೆ ಕೆರೆ, ಕಾಲುವೆ, ಬಾವಿಗಳನ್ನು ಆಶ್ರಯಿಸಿಕೊಂಡು ಬಂದಿದ್ದಾರೆ. ಜಿಲ್ಲೆಯಲ್ಲಿ ಇತಿಹಾಸ ಪ್ರಸಿದ್ಧವಾದ ಅನೇಕ ದೊಡ್ಡ, ಸಣ್ಣ ಕೆರೆಗಳಿವೆ. ಇವು ಇತಿಹಾಸದ ಬೇರೆ ಬೇರೆ ಕಾಲಘಟ್ಟಗಳಲ್ಲಿ ನಿರ್ಮಾಣವಾಗಿವೆ. ನೀರಾವರಿ ಮೂಲಗಳನ್ನು ಬಳಸಿಕೊಂಡು ಮಲೆನಾಡು ಭಾಗಗಳಲ್ಲಿ ಅಡಿಕೆ, ವಿಳ್ಯೆದೆಲೆ, ಏಲಕ್ಕಿ, ಕಾಳುಮೆಣಸು, ತೆಂಗಿನಕಾಯಿ, ಮುಂತಾದ ವಾಣಿಜ್ಯ ಬೆಳೆಗಳನ್ನು ಹಿಂದಿನ ಕಾಲದಿಂದಲೂ ಬೆಳೆಯುವುದರ ಮೂಲಕ ದೇಶ–ವಿದೇಶಗಳಿಗೆ ರಫ್ತು ಮಾಡಲಾಗುತ್ತಿತ್ತು. ಇವುಗಳಿಗೆ ಬೇಡಿಕೆ ಹೆಚ್ಚು ಇದ್ದುದರಿಂದ ರಾಜ್ಯವು ಒಳ್ಳೆಯ ಲಾಭಗಳಿಸಿ ತನ್ನ ಬೊಕ್ಕಸವನ್ನು ತುಂಬಿಸಿಕೊಳ್ಳುತ್ತಿತ್ತು. ಬ್ರಿಟಿಷ್ ಕಮೀಷನ್ನರ ಆಳ್ವಿಕೆಯಲ್ಲಿ ಹೊಸ ವಾಣಿಜ್ಯ ಬೆಳೆಗಳಾದ ಕಾಫಿ, ಚಹಾ, ರಬ್ಬರ್ ಬೆಳೆಗಳಿಗೆ ನೀಡಿದ ಪ್ರೋತ್ಸಾಹದಿಂದಾಗಿ ಜಿಲ್ಲೆಯು ಮತ್ತಷ್ಟು ಪ್ರಸಿದ್ಧಿ ಪಡೆಯಿತು. ರಾಜ್ಯದ ಮತ್ತು ಜಿಲ್ಲೆಯ ಜನರ ಆರ್ಥಿಕ ಅಭಿವೃದ್ದಿಗೆ ಇದು ಕಾರಣವಾಯಿತು. ಜಿಲ್ಲೆಯ ಬಯಲು ಸೀಮೆ ಪ್ರದೇಶಗಳಲ್ಲಿ ಮುಖ್ಯವಾಗಿ ಮಳೆಗಾಲದ ನೀರನ್ನು

[2] ಕ್ಯಾಂಬೆಲ್ ಡೈರೆಕ್ಟರಿ ಫಾರ್ ಮೈಸೂರ್ ಆಂಡ್ ಬೆಂಗಳೂರು, ಮದ್ರಾಸ್ 1920, ಪುಟ 102.

ಆಶ್ರಯಿಸುವುದರ ಜೊತೆಗೆ ಕೆರೆ, ನಾಲೆಗಳು, ಮತ್ತು ಬಾವಿಗಳ ನೀರನ್ನು ಅವಲಂಬಿಸಿ ಆಹಾರ ಬೆಳೆಗಳಾದ ಭತ್ತ, ರಾಗಿ, ಜೋಳ, ಎಣ್ಣೆಕಾಳುಗಳು, ತರಕಾರಿ ಬೆಳೆಗಳು, ಹೂವು, ಹಣ್ಣುಗಳು, ತೆಂಗು ಮುಂತಾದ ಬೆಳೆಗಳನ್ನು ಬೆಳೆಯುವುದರ ಮೂಲಕ ಸ್ಥಳೀಯ ಅಗತ್ಯತೆ ಜೊತೆಗೆ ಸಂಸ್ಥಾನದ ಇತರೆ ಭಾಗಗಳಿಗೆ ಸರಬರಾಜು ಮಾಡುವುದರ ಮೂಲಕ ಆರ್ಥಿಕ ಚಟುವಟಿಕೆಗಳ ಉತ್ತೇಜನಕ್ಕೆ ಮತ್ತು ಸಂಪತ್ತಿನ ಗಳಿಕೆಗೆ ಕೊಡುಗೆಯನ್ನು ನೀಡುತ್ತಾ ಬಂದಿದೆ.

ಅಧ್ಯಯನದ ಉದ್ದೇಶ ಮತ್ತು ಮಹತ್ವ:

ಪ್ರಾಗೈತಿಹಾಸ ಕಾಲದಿಂದಲೂ ಕೃಷಿಯು ಮಾನವನ ಪ್ರಮುಖ ಉದ್ಯೋಗವಾಗಿ ಬೆಳೆದು ಬಂದಿದೆ. ನಾಗರೀಕತೆಯ ವಿಕಸನದ ಆರಂಭದಲ್ಲಿ ಮಾನವ ಅಲೆಮಾರಿ ಜೀವನವನ್ನು ನಿಧಾನವಾಗಿ ತೊರೆದು ಒಂದು ಕಡೆ ನೆಲೆನಿಂತು ತನ್ನ ಬದುಕಿಗೆ ಅಗತ್ಯವಾದ ಆಹಾರ ಧಾನ್ಯಗಳನ್ನು ತಾನಿರುವಲ್ಲಿಯೇ ಬೆಳೆದು ತನ್ನ ಹಸಿವನ್ನು ನೀಗಿಸಿಕೊಳ್ಳಲು ಪ್ರಯತ್ನಿಸಿದನು. ನಾಗರೀಕತೆಗಳು ವಿಕಾಸವಾದಂತೆ ಬೇರೆ ಬೇರೆ ಕಾಲಘಟ್ಟಗಳಲ್ಲಿ ಆದ ಬದಲಾವಣೆಗಳಿಂದಾಗಿ ಕ್ರಮೇಣ ಆಧುನಿಕತೆಯನ್ನು ಕಂಡುಕೊಂಡನು. ತನ್ನ ಜೀವನಕ್ಕೆ ಪೂರಕವಾಗಿ ಹೊಸ ಹೊಸ ಆವಿಷ್ಕಾರಗಳನ್ನು ಮಾಡುತ್ತಾ ಸಾಗಿದನು. ಸಕಲಜೀವಿಗಳಿಗೆ ಬದಕಲು ಆಹಾರದ ಅವಶ್ಯಕತೆ ಇರುವಂತೆ, ಮಾನವನು ತನ್ನ ಬದುಕಿಗೆ ಮೂಲಧಾರವಾದ ಆಹಾರವನ್ನು ಬೆಳೆಯತೊಡಗಿದನು. ಹೀಗೆ ಪ್ರಾರಂಭವಾದ ಕೃಷಿ ವಿಕಸನ ಹೊಂದುತ್ತಾ ತನ್ನ ವ್ಯಾಪ್ತಿಯನ್ನು ಪ್ರಪಂಚದಾದ್ಯಂತ ವಿಸ್ತರಿಸುತ್ತಾ ಸಾಗಿತು. ಆಹಾರ ಧಾನ್ಯಗಳನ್ನು ಬೆಳೆಯುವುದರ ಮೂಲಕ ಆರಂಭವಾದ ಕೃಷಿ, ತೋಟಗಾರಿಕಾ ಬೆಳೆಗಳು, ವಾಣಿಜ್ಯ ಬೆಳೆಗಳನ್ನು ಬೆಳೆಯುವುದರ ಮೂಲಕ ಇಂದು ಕೃಷಿ ದೊಡ್ಡ ಉದ್ಯಮವಾಗಿ ಬೆಳೆದು ಬಂದಿದೆ. ಈ ಮೂಲಕ ವ್ಯಾಪಾರ, ಕೈಗಾರಿಕೆ, ಸಾರಿಗೆ–ಸಂಪರ್ಕ, ನಗರೀಕರಣ, ಮುಂತಾದ ಪ್ರಮುಖ ಕ್ಷೇತ್ರಗಳು ವಿಸ್ತರಣೆಗೊಳ್ಳುತ್ತಾ ಸಾಗಿದೆ. ಭಾರತವು ಮೂಲತಃ ಕೃಷಿ ಪ್ರಧಾನ ರಾಷ್ಟ್ರವಾಗಿದ್ದು ಕೃಷಿ ಕ್ಷೇತ್ರವು ರಾಷ್ಟ್ರೀಯ ಅರ್ಥವ್ಯವಸ್ಥೆಯ ಮುಖ್ಯ ಆಧಾರವಾಗಿತ್ತು.[3] ಭಾರತವನ್ನು ಹಾಗೂ ರಾಜ್ಯವನ್ನಾಳಿದ ಅನೇಕ ಸಾಮ್ರಾಜ್ಯಗಳ ಆದಾಯದ ಮುಖ್ಯ ಮೂಲ ಕೃಷಿ ಭೂಕಂದಾಯವೇ ಆಗಿತ್ತು. 18, 19 ಮತ್ತು 20ನೇ ಶತಮಾನದಲ್ಲಿಯೂ ರಾಜ್ಯಗಳ ಆದಾಯದ ಮೂಲ ಭೂ ಕಂದಾಯವೇ ಆಗಿತ್ತು. ಕೃಷಿಯು ಅನೇಕ ಶತಮಾನಗಳಿಂದಲೂ ಕೂಡ ಮಾನವನ ಮೂಲ ಉದ್ಯೋಗವಾಗಿದ್ದು, ಕೃಷಿಯಲ್ಲಿ ನಿರತನಾದಂತಹ ರೈತನ ಬದುಕು ವಿವಿಧ ಕಾಲಘಟ್ಟಗಳ ಆಧಾರದಲ್ಲಿ ಅಭ್ಯಸಿಸಿದಾಗ ವಿವಿಧ ಸಮಸ್ಯೆಗಳಿಂದ ಕೂಡಿದ್ದು, ಬದುಕು ತುಂಬ ದಾರುಣವಾಗಿತ್ತು ಎಂಬುದು ತಿಳಿದುಬರುತ್ತದೆ. ಈ ಹಿನ್ನಲೆಯಲ್ಲಿ ರೈತನನ್ನು ಕೇಂದ್ರವಾಗಿರಿಸಿಕೊಂಡು ಕೃಷಿ ಅವಲಂಬನೆ, ರೈತನ ಜೀವನ ಮಟ್ಟ, ಅವನ

[3] ಭಾರತದ ಗೆಜೆಟಿಯರ್, ಅರ್ಥ ವ್ಯವಸ್ಥೆ ಮತ್ತು ಉದ್ಯಮ, ಸಂಪುಟ 3, ಪುಟ 214.

ಸಮಸ್ಯೆಗಳು ಮತ್ತು ರಾಜ್ಯದ ಆದಾಯದಲ್ಲಿ ಭೂ ಕಂದಾಯ ಪ್ರಮಾಣ ಮುಂತಾದ ಅಂಶಗಳನ್ನು ಕೇಂದ್ರವಾಗಿರಿಸಿ ಚಿಕ್ಕಮಗಳೂರು ಜಿಲ್ಲೆಗೆ ಸಂಬಂಧಿಸಿದಂತೆ ಇದುವರೆಗೂ ಸಮಗ್ರವಾದ ಅಧ್ಯಯನಗಳು, ಸಂಶೋಧನೆಗಳು ನಡೆಯದೆ ಇರುವುದು ಕಂಡುಬರುತ್ತದೆ. ಕೃಷಿಗೆ ಸಂಬಂಧಿಸಿದಂತೆ ಮಲೆನಾಡಿಗೆ ಸೀಮಿತಗೊಳಿಸಿ ಮತ್ತು ಚಿಕ್ಕಮಗಳೂರು ಜಿಲ್ಲೆಗೆ ಸಂಬಂಧಿಸಿದಂತೆ ತೋಟಗಾರಿಕಾ ಬೆಳೆಗಳ ಅದರಲ್ಲೂ ವಾಣಿಜ್ಯ ಬೆಳೆಗಳಿಗೆ ಸಂಬಂಧಿಸಿದಂತೆ ಅಧ್ಯಯನಗಳು, ಸಂಶೋಧನಾ ಲೇಖನಗಳು, ಪ್ರಬಂಧಗಳು ಪ್ರಕಟಗೊಂಡಿವೆ. ಆದರೆ ಅವುಗಳು ಸಮಗ್ರವಾಗಿ ಕೃಷಿ ವ್ಯವಸ್ಥೆಯನ್ನು ವಿಶ್ಲೇಷಣೆಗೆ ಒಳಪಡಿಸಿರುವುದಿಲ್ಲ. ಕೇವಲ ಮಾಹಿತಿಯನ್ನು ಮಾತ್ರ ನೀಡುತ್ತವೆ. ಆಧುನಿಕ ಭಾರತದ (1799–1947) ಈ ಅವಧಿಯಲ್ಲಿ ಚಿಕ್ಕಮಗಳೂರು ಜಿಲ್ಲೆಗೆ ಸಂಬಂಧಿಸಿದಂತೆ ಎಲ್ಲಾ ಮಜಲುಗಳ (ಕೃಷಿ, ಕೃಷಿಕ ವರ್ಗಗಳು, ಅವರ ನಡುವಿನ ಸಂಬಂಧ, ಭೂದಾನ, ಕಂದಾಯ ವ್ಯವಸ್ಥೆ, ಕೃಷಿ ವಾಣಿಜ್ಯೀಕರಣ ಇತ್ಯಾದಿ) ಬಗ್ಗೆ ಸಂಶೋಧನ ಗ್ರಂಥಗಳು ಪ್ರಕಟವಾಗಿಲ್ಲ. ಈ ಶೂನ್ಯತೆಯನ್ನು ತುಂಬವ ಉದ್ದೇಶದಿಂದ 1799ರಿಂದ 1947ರ ವರೆಗಿನ ಸಮಗ್ರ ಕೃಷಿ ಇತಿಹಾಸಕ್ಕೆ ಸಂಬಂಧಿಸಿದಂತೆ ಜಿಲ್ಲೆಯ ಕೃಷಿ ವ್ಯವಸ್ಥೆಯು ರೈತನ ಸಾಮಾಜಿಕ ಹಾಗೂ ಆರ್ಥಿಕ ಜೀವನದ ಮೇಲೆ ಉಂಟುಮಾಡಿದ ಪರಿಣಾಮಗಳನ್ನು ಆಳವಾದ ಅಧ್ಯಯನ ಕೈಗೊಂಡು ಪ್ರಸ್ತುತ ಪಡಿಸುವುದು ಈ ಮಹಾಪ್ರಬಂಧದ ಮುಖ್ಯ ಉದ್ದೇಶವಾಗಿದೆ.

ಸಾಧನ ಸಾಮಗ್ರಿಗಳು/ಆಧಾರಗಳು:

ಆಧಾರಗಳಿಲ್ಲದೆ ಇತಿಹಾಸ ರಚನೆ ಸಾಧ್ಯವಿಲ್ಲ. ಒಂದು ಪ್ರದೇಶದ ಇತಿಹಾಸದ ಸೃಷ್ಟಿಗೆ ಶಾಸನಗಳು, ಸ್ಮಾರಕಗಳು, ನಾಣ್ಯಗಳು, ಕಡತಗಳು, ಬಕ್ಕೈರುಗಳು ಮತ್ತು ಐತಿಹಾಸಿಕ ಸಾಹಿತ್ಯ ಕೃತಿಗಳು ಮುಂತಾದವುಗಳು ಪ್ರಮುಖ ಆಧಾರಗಳಾಗಿವೆ. ನನ್ನ ಈ ಮಹಾ ಪ್ರಬಂಧಕ್ಕೆ ಪ್ರಮುಖ ಆಧಾರಗಳೆಂದರೆ ಸಾಹಿತ್ಯಾಧಾರಗಳು. ಇವುಗಳನ್ನು ಪ್ರಾಥಮಿಕ ಮತ್ತು ಅನುಷಂಗಿಕ ಸಾಹಿತ್ಯಿಕ ಆಧಾರಗಳಾಗಿ ವಿಂಗಡಿಸಬಹುದು. ಪ್ರಾಥಮಿಕ ಆಕಾರಗಳಾಗಿ ಚಾರಿತ್ರಿಕ ದಾಖಲೆಗಳು, ಸರ್ಕಾರಿ ದಾಖಲೆಗಳು, ಪತ್ರಗಾರಗಳ ದಾಖಲೆಗಳು ಮುಖ್ಯವಾಗಿ ಮೈಸೂರು ವಿಭಾಗೀಯ ಪತ್ರಗಾರ ಇಲಾಖೆ, ರಾಜ್ಯ ಪತ್ರಗಾರ ಇಲಾಖೆ ಬೆಂಗಳೂರು, ಜಿಲ್ಲಾ ದಾಖಲೆ ಕಛೇರಿ, ಭಾರತದ ಗೆಜೆಟಿಯರ್, ಮೈಸೂರು ಗೆಜೆಟಿಯರ್, ಕರ್ನಾಟಕ ಗೆಜೆಟಿಯರ್, ಚಿಕ್ಕಮಗಳೂರು ಜಿಲ್ಲಾ ಗೆಜೆಟಿಯರ್, ಐತಿಹಾಸಿಕ ವೃತ್ತಪತ್ರಿಕೆಗಳು, ಜನಗಣತಿ ವರದಿ, ಸಂದರ್ಶನ, ಕ್ಷೇತ್ರಕಾರ್ಯ, ದಿನಚರಿ, ಕೃಷಿ ಸಂಶೋಧನಾ ಕೇಂದ್ರಗಳ ಗ್ರಂಥಗಳು, ಅರಣ್ಯ ಇಲಾಖೆಯ ದಾಖಲೆಗಳು, ನೀರಾವರಿ ಇಲಾಖೆಯ ದಾಖಲೆಗಳು, ವಾರ್ತಾ ಮತ್ತು ಪ್ರಚಾರ ಇಲಾಖೆಗಳಲ್ಲಿ ಲಭ್ಯವಿದ್ದ ಪ್ರಾಥಮಿಕ ದಾಖಲೆಗಳನ್ನು ಬಳಸಿಕೊಂಡಿದ್ದೇನೆ. ಬೆಂಗಳೂರಿನ ಮಿಥಿಕ್ ಸೊಸೈಟಿಯ ಗ್ರಂಥಾಲಯದಿಂದ ಮೈಸೂರಿನ ಕೃಷಿ ಇತಿಹಾಸಕ್ಕೆ ಸಂಬಂದಿಸಿದಂತೆ ವಿಫುಲವಾದ

ಪ್ರಾಥಮಿಕ ಮತ್ತು ದ್ವಿತೀಯ ಆಧಾರಗಳನ್ನು ಬಳಸಿಕೊಂಡಿದ್ದೇನೆ. ದ್ವಿತೀಯ ಆಧಾರಗಳಾಗಿ ಪ್ರಕಟಿತ ಮತ್ತು ಅಪ್ರಕಟಿತ ಪ್ರಬಂಧಗಳು, ಪಿಹೆಚ್.ಡಿ. ಪ್ರಬಂಧಗಳು, ಸಂಶೋಧನ ಲೇಖನಗಳು, ಇಂಡಿಯನ್ ಹಿಸ್ಟರಿ ಕಾಂಗ್ರೆಸ್ ಮತ್ತು ಸೌತ್ ಇಂಡಿಯನ್ ಕಾಂಗ್ರೆಸ್‌ನ ಸಂಶೋಧನಾ ಲೇಖನಗಳು, ಹಿಸ್ಟರಿ ಜರ್ನಲ್ಸ್‌ಗಳು, ಐತಿಹಾಸಿಕ ಕೃತಿಗಳು ಮುಂತಾದವುಗಳಿಂದ ದೊರೆತ ಮಾಹಿತಿಗಳನ್ನು ಆಳವಾಗಿ ಅಭ್ಯಸಿಸಿ ಅಗತ್ಯವಾದ ಮಾಹಿತಿಗಳನ್ನು ಕೂಲಂಕುಷವಾಗಿ ಪರಾಮರ್ಶಿಸಿ ನನ್ನ ಈ ಮಹಾಪ್ರಬಂಧದಲ್ಲಿ ವಿಮರ್ಷಾತ್ಮಕವಾಗಿ ವಿಶ್ಲೇಷಿಸುವ ಪ್ರಯತ್ನ ಮಾಡಿರುತ್ತೇನೆ.

ಅಧ್ಯಯನದ ವಿಧಾನ:

ಅಧ್ಯಯನದ ಕಾರ್ಯದಲ್ಲಿ ಪ್ರಬಂಧದ ವಿವಿಧ ಅಧ್ಯಾಯಗಳಿಗೆ ಅಗತ್ಯವಾದ ಪ್ರಾಥಮಿಕ ಮತ್ತು ದ್ವೀತಿಯ ಆಕರಗಳನ್ನು ಸಂಗ್ರಹಿಸಲಾಯಿತು. ನಂತರ ಆಕರಗಳನ್ನು ಮೂಲ ಆಕರಗಳು ಮತ್ತು ಪೂರಕ ಆಕರಗಳಾಗಿ ವಿಂಗಡಿಸಿಕೊಂಡು ರಾಜಕೀಯ, ಆರ್ಥಿಕ, ಸಾಮಾಜಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ವಿಭಾಗಗಳಿಗೆ ಅನುಗುಣವಾಗಿ ವಿಂಗಡಿಸಿಕೊಂಡು, ಬಾಹ್ಯ ಮತ್ತು ಆಂತರಿಕ ವಿಮರ್ಶೆಯ ಸೂತ್ರಗಳು, ವಿಶ್ಲೇಷಣ ಕ್ರಮಗಳು, ಸಂಯೋಜನಾ ವಿಧಾನ, ನಿರೂಪಣಾ ತತ್ವಗಳನ್ನು ಅನುಸರಿಸಿಕೊಂಡು ಅವುಗಳನ್ನು ಅಧ್ಯಾಯಗಳಿಗೆ ಅನುಗುಣವಾಗಿ ಈ ಮಹಾಪ್ರಬಂಧವನ್ನು ಬರೆಯುವ ಕಾರ್ಯ ಮಾಡಿರುತ್ತೇನೆ.

ಅಧ್ಯಯನದ ಸ್ವರೂಪ ಮತ್ತು ವ್ಯಾಪ್ತಿ:

ಅಧ್ಯಯನದ ಶಿರ್ಷಿಕೆ ‘‘ಮೈಸೂರು ಒಡೆಯರು ಮತ್ತು ಬ್ರಿಟಿಷ್ ಕಮೀಷನ್ನರ ಆಳ್ವಿಕೆ ಕಾಲದಲ್ಲಿ ಚಿಕ್ಕಮಗಳೂರು ಜಿಲ್ಲೆಯ ಕೃಷಿ ವ್ಯವಸ್ಥೆ (1799–1947) ಆಗಿದ್ದು, ಅಧ್ಯಯನವು ಪೀಠಿಕೆ ಮತ್ತು ಉಪಸಂಹಾರವನ್ನು ಒಳಗೊಂಡಂತೆ ಒಟ್ಟು 7 ಅಧ್ಯಾಯಗಳಿಂದ ಕೂಡಿದ್ದು, 1799 ರಿಂದ 1947ರ ವರೆಗೆ ಅಂದರೆ ಟಿಪ್ಪು ಸುಲ್ತಾನನ ಮರಣದ ನಂತರ ಮೈಸೂರು ಒಡೆಯರ ಪುನರ್ ಸ್ಥಾಪನೆಯ ಅವಧಿಯಿಂದ ಭಾರತವು ಬ್ರಿಟಿಷರಿಂದ ಸ್ವಾತಂತ್ರ್ಯ ಪಡೆದ ಅವಧಿಯವರೆಗೆ ಆಯ್ಕೆ ಮಾಡಲಾಗಿದೆ. ಈ ಅವಧಿಯಲ್ಲಿ ಮೈಸೂರು ಸಂಸ್ಥಾನದ ಅರಸರ ನೇರ ಆಡಳಿತ ಮತ್ತು ಬ್ರಿಟಿಷ್ ಕಮೀಷನ್ನರ ಆಳ್ವಿಕೆಯ ಪ್ರಭಾವದಿಂದ ಚಿಕ್ಕಮಗಳೂರು ಜಿಲ್ಲೆಯ ಕೃಷಿ ವ್ಯವಸ್ಥೆಯಲ್ಲಾದ ಬದಲಾವಣೆಗಳು ಮತ್ತು ಅದರ ಪರಿಣಾಮಗಳನ್ನು ವಿಶ್ಲೇಷಿಸಲಾಗಿದೆ. ಅಧ್ಯಾಯಗಳು ಈ ಕೆಳಕಂಡಂತಿದೆ;

ಮೊದಲ ಅಧ್ಯಾಯ ಪೀಠಿಕೆ. ಇದರಲ್ಲಿ ಅಧ್ಯಯನದ ಉದ್ದೇಶ ಮತ್ತು ಮಹತ್ವ, ಸಾಧನ ಸಾಮಗ್ರಿಗಳು, ಅಧ್ಯಯನದ ವಿಧಾನ, ಅಧ್ಯಯನದ ಸ್ವರೂಪ ಮತ್ತು ವ್ಯಾಪ್ತಿ, ಜಿಲ್ಲೆಯ ಇತಿಹಾಸ ಮತ್ತು ಇತಿಹಾಸ ಕಥನವನ್ನು ವಿವರಿಸಲಾಗಿದೆ.

2ನೇ ಅಧ್ಯಾಯ ಚಿಕ್ಕಮಗಳೂರು ಜಿಲ್ಲೆಯ ಚಾರಿತ್ರಿಕ ಭೂಗೋಳವಾಗಿದ್ದು, ಇದರಲ್ಲಿ ಜಿಲ್ಲೆಯ ಭೌಗೋಳಿಕ ವ್ಯಾಪ್ತಿ, ಭೂ ಮೇಲ್ಮೈ ಲಕ್ಷಣಗಳು, ಭೂ ವಿಧಗಳು, ಬೆಳೆಗಳು, ಮಣ್ಣಿನ ವಿಧಗಳು, ಹವಾಗುಣ, ಮಳೆ, ನದಿಗಳು, ಆಡಳಿತ ವಿಭಾಗಗಳು ಮತ್ತು ಜನಸಂಖ್ಯೆ ವಿವರಗಳನ್ನು ಒಳಗೊಂಡಿದೆ.

3ನೇ ಅಧ್ಯಾಯ ಚಿಕ್ಕಮಗಳೂರು ಜಿಲ್ಲೆಯಲ್ಲಿನ ಕೃಷಿ ಪದ್ಧತಿ. ಇದರಲ್ಲಿ ಚಿಕ್ಕಮಗಳೂರು ಜಿಲ್ಲೆಯಲ್ಲಿನ ಭೂ ಹಿಡುವಳಿಗಳು, ಕೃಷಿ ಬೆಳೆಗಳು ಮತ್ತು ಹಂಚಿಕೆ, ನೀರಾವರಿ ವ್ಯವಸ್ಥೆ, ಪಶುಪಾಲನೆ, ಗೊಬ್ಬರ, ಕೃಷಿ ಸಲಕರಣೆಗಳು, ಕೃಷಿಕ ವರ್ಗಗಳು (ಭೂಮಾಲೀಕರು, ಸಣ್ಣ ರೈತರು, ಮತ್ತು ಕೃಷಿ ಕಾರ್ಮಿಕರು), ಗೇಣಿ ಪದ್ಧತಿ, ಜೀತ ಪದ್ಧತಿ ಹಾಗೂ ಕ್ಷಾಮ ಮತ್ತು ಪರಿಣಾಮಗಳ ಬಗ್ಗೆ ವಿವರವಾಗಿ ಚರ್ಚಿಸಲಾಗಿದೆ.

4ನೇ ಅಧ್ಯಾಯ ಚಿಕ್ಕಮಗಳೂರು ಜಿಲ್ಲೆಯ ಭೂ ಕಂದಾಯ ವ್ಯವಸ್ಥೆ ಮತ್ತು ಪರಿಣಾಮಗಳು. ಇದರಲ್ಲಿ 1799ರ ಪೂರ್ವದ ಭೂ ಕಂದಾಯ ವ್ಯವಸ್ಥೆ, ಮೈಸೂರು ಒಡೆಯರ ಕಾಲದ ಭೂ ಕಂದಾಯ ವ್ಯವಸ್ಥೆ (1799–1831), ನಗರದಂಗೆ ಮತ್ತು ಚಿಕ್ಕಮಗಳೂರು ಜಿಲ್ಲೆ (1830–31), ಬ್ರಿಟಿಷ್ ಕಮೀಷನ್ನರ ಕಾಲದ ಭೂ ಕಂದಾಯ ವ್ಯವಸ್ಥೆ (1831–1881), ಮೈಸೂರಿನ ಪುನರ್ದಾನ ಕಾಲದ ಭೂ ಕಂದಾಯ ವ್ಯವಸ್ಥೆ (1881–1947) ಮತ್ತು ಪರಿಣಾಮಗಳ ಬಗ್ಗೆ ವಿವರವಾಗಿ ಚರ್ಚಿಸಲಾಗಿದೆ.

5ನೇ ಅಧ್ಯಾಯ ಚಿಕ್ಕಮಗಳೂರು ಜಿಲ್ಲೆಯ ಆರ್ಥಿಕ ವ್ಯವಸ್ಥೆ. ಇದರಲ್ಲಿ ವ್ಯಾಪಾರ, ಉದ್ದಿಮೆ, ಕೃಷಿ ವಾಣಿಜ್ಯೀಕರಣ, ಸಾರಿಗೆ–ಸಂಪರ್ಕಗಳ ಬೆಳವಣಿಗೆ ಮತ್ತು ಇವುಗಳ ಪರಿಣಾಮಗಳನ್ನು ಚರ್ಚಿಸಲಾಗಿದೆ.

6ನೇ ಅಧ್ಯಾಯ ಚಿಕ್ಕಮಗಳೂರು ಜಿಲ್ಲೆಯ ಸಾಮಾಜಿಕ ವ್ಯವಸ್ಥೆ. ಇದರಲ್ಲಿ ಸಾಮಾಜಿಕ ವರ್ಗಗಳು, ಸಂಪ್ರದಾಯಗಳು, ಮಹಿಳೆ, ಭಾಷೆ, ಆಹಾರ ಪದ್ಧತಿ, ಉಡುಗೆ–ತೊಡುಗೆ, ದೇವತೆಗಳ ಆರಾಧನೆ, ಹಬ್ಬ, ಜಾತ್ರಾಮಹೋತ್ಸವ, ಶಿಕ್ಷಣ ವಿಷಯಗಳನ್ನು ವಿವರಿಸಲಾಗಿದೆ.

7ನೇ ಅಧ್ಯಾಯ ಕೊನೆಯದಾಗಿದ್ದು ಸಂಶೋಧನೆಯ ಉಪಸಂಹಾರವನ್ನು ಒಳಗೊಂಡಿದೆ.

ಜಿಲ್ಲೆಯ ಇತಿಹಾಸ:

ಚಿಕ್ಕಮಗಳೂರು ಜಿಲ್ಲೆ ಮೈಸೂರು ಸಂಸ್ಥಾನದ ಪಶ್ಚಿಮ ದಿಕ್ಕಿನ ಪಶ್ಚಿಮ ಘಟ್ಟಗಳ ಮಾಲಿಕೆಯಲ್ಲಿದೆ. ಸಹ್ಯಾದ್ರಿ ಪರಿಸರದ ಪ್ರಕೃತಿಯ ರಮಣೀಯವಾದ ಮಲೆನಾಡು ಹಾಗೂ ಬಯಲುಸೀಮೆಗಳ ವಿಭಿನ್ನ ಪರಿಸರ ಒಳಗೊಂಡಿದೆ. ದಟ್ಟವಾದ ಗಿರಿಕಾನನಗಳಿಂದ ಸಮೃದ್ಧವಾದ ಪ್ರಾಕೃತಿಕ ಪರಿಸರವನ್ನು ಹೊಂದಿದ್ದು, ಭೂಗರ್ಭದೊಳಗೆ ಬೆಲೆಬಾಳುವ ಖನಿಜ ಸಂಪತ್ತಿನಿಂದಲೂ ತುಂಬಿ ಕೊಂಡಿದೆ. ಇಲ್ಲಿ ಪವಿತ್ರ ನದಿಗಳು ಹುಟ್ಟಿ ಹರಿಯುತ್ತವೆ. ಧರ್ಮಕ್ಷೇತ್ರಗಳು, ಗುರುಪೀಠಗಳಿವೆ. ಆದಿಶಂಕರಚಾರ್ಯರು, ವಿದ್ಯಾತೀರ್ಥರು, ವಿಜಯನಗರ ವಿದ್ಯಾರಣ್ಯರು ಅವರ ಸಹೋದರರಾದ ಸಾಯಣಚಾರ್ಯರು, ಕೊಂಗೋದ್ಭವರಾದ ರೇಣುಕಾಚಾರ್ಯರು ನಡೆದಾಡಿದ ಸ್ಥಳವೆಂಬ ಖ್ಯಾತಿ ಪಡೆದಿದೆ. ಕರ್ನಾಟಕ ಪ್ರದೇಶವನ್ನು ಆಳಿದ ಅನೇಕ ರಾಜ ಮನೆತನಗಳ ಅಧೀನಕ್ಕೆ ಈ ಜಿಲ್ಲೆ ಒಳಪಟ್ಟಿತ್ತು. ಈ ಮನೆತನಗಳು ಕಲೆ, ವಾಸ್ತುಶಿಲ್ಪಕ್ಕೆ ನೀಡಿದ ಪ್ರೋತ್ಸಾಹದಿಂದಾಗಿ ಜಿಲ್ಲೆಯಲ್ಲಿ ಅನೇಕ ದೇವಾಲಾಯಗಳು ನಿರ್ಮಾಣವಾದವು. ಈ ಮೂಲಕ ಚಿಕ್ಕಮಗಳೂರು ಜಿಲ್ಲೆಯು ಕರ್ನಾಟಕದ ಇತಿಹಾಸ ಪರಂಪರೆಗೆ ತನ್ನದೇ ಆದ ವಿಶಿಷ್ಟ ಕಾಣಿಕೆಯನ್ನು ನೀಡಿದೆ.

ಸ್ಥಳ ನಾಮ:

ಚಿಕ್ಕಮಗಳೂರು ಜಿಲ್ಲೆಯಲ್ಲಿ ದೊರೆತಿರುವ ಶಿಲಾಶಾಸನಗಳಲ್ಲಿ ಚಿಕ್ಕಮಗಳೂರನ್ನು ಕಿರಿಯ ಮುಗಳಿ ಎಂದು ಹೆಸರಿಸಿರುವುದು ತಿಳಿದು ಬರುತ್ತದೆ. ಪಿರಿಯ ಮುಗಳಿಯು ಈ ಪಟ್ಟಣದ ಪ್ರಮುಖ ಸ್ಥಳವಾದ ಹಿರೇಮಗಳೂರಾಗಿರುತ್ತದೆ. ಇಲ್ಲಿ ಹೊಯ್ಸಳರ ಕಾಲದ ಕೋದಂಡರಾಮ ದೇವಾಲಯವಿದೆ. ಒಂದು ಐತಿಹ್ಯದ ಪ್ರಕಾರ ದ್ವಾಪರಯುಗದಲ್ಲಿ ರುಕ್ಮಾಂಗದರಾಯನೆಂಬ ಅರಸನು ಜಿಲ್ಲೆಯ ಕಡೂರು ತಾಲ್ಲೂಕಿನ ಸಖರಾಯ ಪಟ್ಟಣದಲ್ಲಿ ಆಳ್ವಿಕೆ ಮಾಡುತ್ತಿದ್ದನು.[4] ಅವನಿಗೆ ಇಬ್ಬರು ಹೆಣ್ಣು ಮಕ್ಕಳಿದ್ದರು. ಮಕ್ಕಳು ಪ್ರಾಪ್ತ ವಯಸ್ಸಿಗೆ ಬಂದಾಗ ಯೋಗ್ಯನಾದ ವರರಿಗೆ ತನ್ನ ಇಬ್ಬರು ಹೆಣ್ಣು ಮಕ್ಕಳಿಗೆ ಮದುವೆಮಾಡಿ ಕೊಟ್ಟನು. ಈ ಸಮಯದಲ್ಲಿ ಅನೇಕ ಧನಕನಕ, ವಸ್ತುಗಳನ್ನು, ದಾಸದಾಸಿಯರನ್ನು ಬಳುವಳಿಯಾಗಿ ಕಳುಹಿಸಿದನು ಎಂಬ ಪ್ರತೀತಿ ಇದ್ದು, ಮುಂದೆ ತನ್ನ ಹಿರಿಯ ಮಗಳನ್ನು ಮದುವೆ ಮಾಡಿಕೊಟ್ಟ ಸ್ಥಳವು ಹಿರೇಮಗಳೂರು ಎಂದು ಹಾಗೆಯೇ ಕಿರಿಯ ಮಗಳಿಗೆ ಮದುವೆ ಮಾಡಿಕೊಟ್ಟ ಸ್ಥಳಕ್ಕೆ ಚಿಕ್ಕಮಗಳೂರು ಎಂದು ಹೆಸರಾಯಿತು ಎಂದು ಸ್ಥಳ ಪುರಾಣ ತಿಳಿಸುತ್ತದೆ.[5] ಇದರ ಪ್ರಾಚೀನ

---

[4] ಚನ್ನಕ್ಕ ಪಾವಟೆ, ಚಿಕ್ಕಮಗಳೂರು ಜಿಲ್ಲೆಯ ಶೃಂಗಗಳ ವೈಶಿಷ್ಟ್ಯ, ಚಿಕ್ಕಮಗಳೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪೂರ್ವೋಕ್ತ, ಪುಟ 322.

[5] ಅದೇ, ಪುಟ 322.

ಹೆಸರು ಕಿರಿಯ ಮುಗಳಿ ಎಂದಿದ್ದು, ಇದು ಒಂದು ಅಗ್ರಹಾರವಾಗಿತ್ತು. ಅದಕ್ಕೆ ಹೊಂದಿಕೊಂಡಂತೆ ಪಿರಿಯಮುಗುಳಿ ಎಂಬ ಇನ್ನೊಂದು ಅಗ್ರಹಾರವಿತ್ತು. ಇದು ಹಿರೇಮಗಳೂರು ಎಂದು ಕರೆಯುತ್ತಾರೆ. ಕ್ರಿ. ಶ. 9ನೆಯ ಶತಮಾನದಲ್ಲಿ ಗಂಗರು ನಿರ್ಮಿಸಿದ ಕೋಟೆ ಇದ್ದ ಸ್ಥಳದಲ್ಲಿ ದೊರೆತಿರುವ ಕ್ರಿ.ಶ. 899, ಕ್ರಿ.ಶ. 1074 ಮತ್ತು ಕ್ರಿ.ಶ. 1184ರ ಶಾಸನಗಳಲ್ಲಿ ಕಿರಿಯ ಮುಗುಳಿ ಎಂಬ ಉಲ್ಲೇಖವಿದೆ. ಕ್ರಿ.ಶ. 1257, ಕ್ರಿ.ಶ. 1280, ಮತ್ತು ಕ್ರಿ.ಶ. 1140ರ ಶಾಸನಗಳಲ್ಲಿ ಚಿಕ್ಕಮುಗುಳಿ ಎಂದು ಮತ್ತು ಕ್ರಿ.ಶ. 1287 ಮತ್ತು ಕ್ರಿ.ಶ. 1586ರ ಶಾಸನದಲ್ಲಿ ಹಿರಿಯ ಮುಗುಳಿ ಇಂದೂ ಉಲ್ಲೇಖಿಸಲಾಗಿದೆ.[6] ಕ್ರಿ.ಶ. 1275ರ ಒಂದು ಶಾಸನದಲ್ಲಿ ಇದನ್ನು 'ದೇವಳಿಗೆನಾಡು' ಎಂದು ಕರೆಯಲಾಗಿದೆ.[7]

ಚಿಕ್ಕಮಗಳೂರು ಜಿಲ್ಲೆಯು ಐತಿಹಾಸಿಕ ಕಾಲದಿಂದಲೂ ಕರ್ನಾಟಕ ಪ್ರದೇಶವನ್ನಾಳಿದ ಹಲವಾರು ರಾಜಮನೆತನಗಳ ಆಳ್ವಿಕೆಯ ವ್ಯಾಪ್ತಿಗೆ ಒಳಪಟ್ಟಿತ್ತು. ಈ ಜಿಲ್ಲೆಯನ್ನು ಕೇಂದ್ರವಾಗಿಟ್ಟುಕೊಂಡು ಆಳ್ವಿಕೆ ಮಾಡಿದ ರಾಜಮನೆತನಗಳ ಸಂಖ್ಯೆ ಕಡಿಮೆಯಿದ್ದರೂ, ರಾಜ್ಯವನ್ನಾಳಿದ ಪ್ರಮುಖ ರಾಜ ಮನೆತನಗಳ ಅಧೀನಕ್ಕೆ ಈ ಜಿಲ್ಲೆಯು ಒಳಪಟ್ಟಿತ್ತು. ಅವರಲ್ಲಿ ಶಾತವಾಹನರು, ಕಂದಂಬರು, ಪಲ್ಲವರು, ಗಂಗರು, ಹೊಯ್ಸಳರು, ವಿಜಯನಗರ ಸಾಮ್ರಾಜ್ಯದ ಅರಸರು, ಕೆಳದಿ ನಾಯಕರು, ಸಾಂತಾರರು, ತರೀಕೆರೆ ಪಾಳೆಗಾರರು, ಹೈದರಾಲಿ ಮತ್ತು ಟಿಪ್ಪು ಸುಲ್ತಾನ್, ಮತ್ತು ಮೈಸೂರು ಒಡೆಯರು ಪ್ರಮುಖರಾಗಿದ್ದರು.

ಪ್ರಾಗೈತಿಹಾಸಿಕ ಕಾಲ:

ಜಿಲ್ಲೆಯಲ್ಲಿ ಪ್ರಾಗೈತಿಹಾಸಿಕ ಕಾಲದ ಜನವಸತಿ ನೆಲೆಗಳ ಕುರುಹುಗಳು ದೊರೆತಿವೆ. ಈ ನೆಲೆಗಳಲ್ಲಿ ಅವರು ಬಳಸುತ್ತಿದ್ದ ಸಾಮಗ್ರಿಗಳು, ಉಪಕರಣಗಳು, ಆಯುಧಗಳು ಜಿಲ್ಲೆಯ ವಿವಿಧ ಸ್ಥಳಗಳಲ್ಲಿ ದೊರೆತಿದ್ದು, ಕಡೂರಿನ ನಿಡಘಟ್ಟ ಮತ್ತು ಲಿಂಗದಹಳ್ಳಿಯಲ್ಲಿನ ನೆಲೆಗಳ ಉತ್ಖನನದಿಂದ ಹಳೆಯ ಶಿಲಾಯುಗದ ಅವಶೇಷಗಳು ದೊರೆತಿದೆ.[8] ತರೀಕೆರೆ ತಾಲ್ಲೂಕಿನ ಕಲ್‌ದುರ್ಗದ ನೆಲೆಗಳಲ್ಲಿ ಕೈಕೊಡಲಿಗಳು, ಚಕ್ರಗಳು, ಕಲ್ಲಿನ ಉಪಕರಣಗಳು ದೊರೆತಿವೆ. ಮೂಡಿಗೆರೆ ತಾಲ್ಲೂಕಿನ ಹೆರಿಕೆ ಸಮೀಪದ ಪಾಂಡವರ ಗುಡ್ಡದಲ್ಲಿ ಶಿಲಾ ಉಪಕರಣಗಳು ದೊರೆತಿವೆ. ಚಿಕ್ಕಮಗಳೂರು ಬಳಿಯ ಮತ್ತಾವರ, ಕಡೂರಿನ ಸಕ್ಕರೆಪಟ್ಟಣ, ಮತ್ತು ಶೃಂಗೇರಿಯ ಸಮೀಪ ಬೃಹತ್ ಶಿಲಾಯುಗದ ಸಮಾಧಿಗಳು ದೊರೆತಿವೆ. ಮೂಡಿಗೆರೆಯ ತಾಲ್ಲೂಕಿನ ಕೊಟ್ಟಿಗೆಹಾರದ ಸಮೀಪ ಪ್ರಾಚೀನಕಾಲದ ಕಬ್ಬಿಣ

[6] ಬಿ.ಸಿ.ಸುರೇಶ, ಚಿಕ್ಕಮಗಳೂರು ಜಿಲ್ಲೆಯ ದೇವಾಲಾಯಗಳ ಕಲೆ ಮತ್ತು ವಾಸ್ತು ಶಿಲ್ಪ, ಮೈಸೂರು 2004, ಪುಟ 10.
[7] ಚನ್ನಕ್ಕ ಪಾವಟೆ, ಪೂರ್ವೋಕ್ತ, ನೋಡಿ, ಪುಟ 322.
[8] ಡಿ.ಎಸ್. ಜಯಪ್ಪಗೌಡ, ಇತಿಹಾಸ ಪುಟಗಳಲ್ಲಿ, ಚಿಕ್ಕಮಗಳೂರು ಜಿಲ್ಲಾ ದರ್ಶನ, ಸಂ. ಬ. ಪಾರ್ಥಸಾರಥಿ, ಬೆಂಗಳೂರು, 1986, ಪುಟ 27.

ಕರಗಿಸುವ ನಿವೇಶನ ದೊರೆತಿದೆ.[9] ಈ ಸಾಕ್ಷ್ಯಧಾರಗಳಿಂದ ಇತಿಹಾಸ ಪೂರ್ವಕಾಲದಲ್ಲಿ ಈ ಜಿಲ್ಲೆಯಲ್ಲಿ ಜನಜೀವನವಿತ್ತು ಎಂಬುದು ತಿಳಿಯುತ್ತದೆ.

ವೇದಗಳ ಕಾಲ:

ಪೌರಾಣಿಕ ಮತ್ತು ಐತಿಹಾಸಿಕ ದೃಷ್ಟಿಕೋನಗಳಿಂದ ಗಮನಿಸಿದಾಗ ಈ ಜಿಲ್ಲೆಯು ಮಹತ್ವದ ಸ್ಥಾನವನ್ನು ಪಡೆದುಕೊಂಡಿದೆ. ಮಹಾರಣ್ಯ ಪ್ರದೇಶವಾದ ಈ ಜಿಲ್ಲೆ ಅನೇಕ ಋಷಿಮುನಿಗಳ ಆಶ್ರಯ ಸ್ಥಾನವಾಗಿತ್ತು. ವಿಭಾಂಡಕ, ಋಷ್ಯಶೃಂಗ, ಮಾರ್ಕಂಡು, ಮಾರ್ಕಂಡೇಯ, ಗೌತಮ, ವಸಿಷ್ಠ ಮತ್ತು ಅಗಸ್ತ್ಯ ಮುಂತಾದ ಋಷಿಮುನಿಗಳು ನಡೆದಾಡಿದ ಪವಿತ್ರ ಸ್ಥಳವಾಗಿದೆ. ಪರಶುರಾಮ, ಸೀತೆ ಲಕ್ಷ್ಮಣರ ಸಮೇತ ಶ್ರೀ ರಾಮ, ಸಂಜೀವಿನಿ ಪರ್ವತವನ್ನು (ಈಗಿನ ಬಾಬಾಬುಡನ್ ಬೆಟ್ಟ) ತಂದ ಆಂಜನೇಯ ಈ ಜಿಲ್ಲೆಯಲ್ಲಿ ಸಂಚಾರಮಾಡಿದ್ದಾರೆ. ಮಹಾಭಾರತದ ಕುಂತಿದೇವಿ, ಭೀಮ, ಅರ್ಜುನ, ಜನಮೇಜಯ, ವಿರಾಟರಾಜ ಮುಂತಾದವರು ಇಲ್ಲಿಗೆ ದರ್ಶನಾರ್ಥಿಗಳಾಗಿ ಬಂದಿದ್ದರೆಂದು ದಾಖಲೆಗಳಿಂದ ತಿಳಿದುಬರುತ್ತದೆ.[10] ಅಲ್ಲದೆ ಜನಮೇಜಯನು ಸರ್ಪಯಾಗ ಮಾಡಿದ ಗುರುತಾಗಿ ಯೂಪಸ್ತಂಬವು ಹಿರೇಮಗಳೂರಿನಲ್ಲಿ ಇಂದಿಗೂ ಕಾಣಬಹುದು.[11]

ಆರಂಭಿಕ ಇತಿಹಾಸ:

ಉತ್ತರ ಭಾರತದಲ್ಲಿ ಆಳ್ವಿಕೆ ಮಾಡಿದ ಪ್ರಸಿದ್ಧ ಸಾಮ್ರಾಜ್ಯವಾದ ಮೌರ್ಯರಿಗಿಂತ ಮೊದಲು ಆಳಿದ ನಂದರು ತಮ್ಮ ಸಾಮ್ರಾಜ್ಯವನ್ನು ದಕ್ಷಿಣದ ಕುಂತಲದವರೆಗೂ ವಿಸ್ತರಿಸಿದ್ದರು ಎಂದು ತಿಳಿಯುತ್ತದೆ. ಈ ಪ್ರದೇಶದ ವ್ಯಾಪ್ತಿಯಲ್ಲಿ ಜಿಲ್ಲೆಯು ಬರುವುದರಿಂದ ನಂದರ ಆಳ್ವಿಕೆಗೆ ಜಿಲ್ಲೆಯು ಒಳಪಟ್ಟಿತ್ತು ಎಂದು ಹೇಳಬಹುದು. ಮೌರ್ಯ ಸಾಮ್ರಾಜ್ಯದ ಸ್ಥಾಪಕ ಚಂದ್ರಗುಪ್ತ ಮೌರ್ಯನು ಕ್ರಿ. ಪೂ. 298ರಲ್ಲಿ ನೆರೆಯ ಹಾಸನದ ಜಿಲ್ಲೆಯ ಶ್ರವಣಬೆಳಗೋಳ ಪ್ರದೇಶದಲ್ಲಿ ಬಂದು ನೆಲೆಸಿದ್ದನು.[12] ಮೌರ್ಯ ಸಾಮ್ರಾಜ್ಯದ ಚಕ್ರವರ್ತಿಯಾದ ಅಶೋಕನ ಕಲ್ಲಿನ ಶಾಸನಗಳು ನೆರೆಯ ಜಿಲ್ಲೆಗಳಾದ ಚಿತ್ರದುರ್ಗ ಮತ್ತು ಶಿವಮೊಗ್ಗದಲ್ಲಿ ದೊರೆತಿರುವುದರಿಂದ ಜಿಲ್ಲೆಯ ಭಾಗಗಳು ಮೌರ್ಯರ ಆಡಳಿತಕ್ಕೆ ಒಳಪಟ್ಟಿರಬಹುದು ಎಂದು ಹೇಳಬಹುದು.[13]

---

[9] ಡಿ.ಎಸ್. ಜಯಪ್ಪಗೌಡ, ಅದೇ, ಪುಟ 28.

[10] ಪಿ.ವಿ.ಕೃಷ್ಣಮೂರ್ತಿ, ಚಿಕ್ಕಮಗಳೂರು ಜಿಲ್ಲಾ ಪ್ರದೇಶದ ಪ್ರಾಚೀನ ಆಡಳಿತ ಘಟಕಗಳು, ಚಿಕ್ಕಮಗಳೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪೂರ್ವೋಕ್ತ, ಪುಟ 176.

[11] ಬಿ.ಎಲ್,ರೈಸ್, ಮೈಸೂರು ಗೆಜೆಟಿಯರ್, ಕಡೂರ್ ಡಿಸ್ಟ್ರಿಕ್ಟ್, ಸಂಪುಟ 2, ಬೆಂಗಳೂರು 2004, ಪುಟ 378.

[12] ಸೂರ್ಯನಾಥ್ ಕಾಮತ್, ಚಿಕ್ಕಮಗಳೂರು ಜಿಲ್ಲಾ ಗೆಜೆಟಿಯರ್, ಬೆಂಗಳೂರು 1981, ಪುಟ 36.

[13] ಡಿ.ಎಸ್. ಜಯಪ್ಪಗೌಡ, ಪೂರ್ವೋಕ್ತ, ಪುಟ 27.

ಶಾತವಾಹನರು:

ಮೌರ್ಯರ ನಂತರ ದಕ್ಷಿಣ ಭಾರತದಲ್ಲಿ ಸಾಮ್ರಾಜ್ಯ ಸ್ಥಾಪಿಸಿದ ಶಾತವಾಹನರು ಕರ್ನಾಟಕದ ಬನವಾಸಿಯಲ್ಲಿ ದೊರೆತಿರುವ ಶಾಸನದಿಂದ ಜಿಲ್ಲೆಯ ಭಾಗಗಳು ಅವರ ಆಳ್ವಿಕೆಯ ಪ್ರಭಾವವಕ್ಕೆ ಒಳಪಟ್ಟಿತ್ತೆಂದು ಹೇಳಬಹುದು.

ಪಲ್ಲವರು:

ಶಾತವಾಹನರ ಪತನ ನಂತರ ದಕ್ಷಿಣ ಭಾರತದಲ್ಲಿ ಏಳಿಗೆಗೆ ಬಂದ ತಮಿಳುನಾಡಿನ ಪಲ್ಲವರು ತಮ್ಮ ರಾಜ್ಯವನ್ನು ಪೂರ್ವ–ಪಶ್ಚಿಮ ದಿಕ್ಕುಗಳಲ್ಲಿ ವಿಸ್ತರಿಸಿದರು. ಕಡೂರು ತಾಲ್ಲೂಕಿನ ಸಕರಾಯ ಪಟ್ಟಣದಲ್ಲಿ ದೊರೆತಿರುವ ಪಲ್ಲವ ಅರಸ ಒಂದನೇ ನರಸಿಂಹವರ್ಮನ ತಾಮ್ರ ಶಾಸನದಿಂದ ಅವರ ಆಳ್ವಿಕೆಗೆ ಜಿಲ್ಲೆಯ ಭಾಗಗಳು ಒಳಪಟ್ಟಿತ್ತೆಂದು ತಿಳಿದುಬರುತ್ತದೆ.[14]

ಕದಂಬರು:

ಕ್ರಿ. ಶ. ಸುಮಾರು 4 ಮತ್ತು 5ನೇ ಶತಮಾನಗಳ ಕಾಲದಲ್ಲಿ ಚಿಕ್ಕಮಗಳೂರು ಜಿಲ್ಲೆಯು ಬನವಾಸಿಯ ಕದಂಬರ ಆಳ್ವಿಕೆಗೆ ಒಳಪಟ್ಟಿತ್ತೆಂಬುದಕ್ಕೆ ಆಧಾರವಾಗಿ ಕದಂಬರ ಸಂಸ್ಕೃತಿಯ ಲಕ್ಷಣಗಳು ಜಿಲ್ಲೆಯಲ್ಲಿ ಕಂಡುಬರುತ್ತದೆ. ಕದಂಬ ವಂಶದ ಮಯೂರ ವರ್ಮನು ಪಲ್ಲವರ ವಿರುದ್ದ ಹೋರಾಡಿ ರಾಜ್ಯ ಸ್ಥಾಪನೆ ಮಾಡಿದನು. ಇವನ ರಾಜಧಾನಿ ಬನವಾಸಿಯಾಗಿತ್ತು. ಇವನ ರಾಜ್ಯ ದಕ್ಷಿಣದಲ್ಲಿ ಕಾವೇರಿ ನದಿಯವರೆಗೂ ಹರಡಿದ್ದು ಜಿಲ್ಲೆಯು ಇದರಲ್ಲಿ ಸೇರಿತ್ತು. ಕದಂಬ ವಂಶದ ರಾಜ ಕಾಕುತ್ಸವರ್ಮನ ಕಾಲ ಅಂದರೆ 5ನೇ ಶತಮಾನದ ಕನ್ನಡ ಶಾಸನ ನೆರೆಯ ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನಲ್ಲಿ ದೊರೆತಿರುವುದರಿಂದ ಈ ಜಿಲ್ಲೆಯೂ ಸಹಜವಾಗಿ ಇವರ ದೀರ್ಘಕಾಲದ ಆಳ್ವಿಕೆಗೆ ಒಳಪಟ್ಟಿತ್ತು ಎಂಬುದಕ್ಕೆ ಸಾಕ್ಷಿಯಾಗಿದೆ.[15] ಇವರು ಜಿಲ್ಲೆಯ ಸಾಂಸ್ಕೃತಿಕ ಹಾಗೂ ಧಾರ್ಮಿಕ ಪರಂಪರೆಗೆ ತಮ್ಮದೇ ಆದ ಕೊಡುಗೆಗಳನ್ನು ನೀಡಿದ್ದಾರೆ.

ಆಳುಪರು:

ಕ್ರಿ. ಶ. 7 ರಿಂದ 9ನೇ ಶತಮಾನಗಳ ಕಾಲದಲ್ಲಿ ಜಿಲ್ಲೆಯ ಪಶ್ಚಿಮದ ಕೆಲವು ಭಾಗಗಳು ದಕ್ಷಿಣ ಕನ್ನಡ ಜಿಲ್ಲೆಯ ಆಳುಪರಿಗೆ ಸೇರಿದ್ದವೆಂದು ಎರಡು ಶಾಸನಗಳಿಂದ ತಿಳಿದುಬರುತ್ತದೆ. ಶಿವಮೊಗ್ಗ

---

[14] ಡಿ.ಎಸ್. ಜಯಪ್ಪಗೌಡ, ಅದೇ, ಪುಟ 28.

[15] ಸೂರ್ಯನಾಥ್ ಕಾಮತ್, ಚಿಕ್ಕಮಗಳೂರು ಡಿಸ್ಟ್ರಿಕ್ಟ್ ಗೆಜೆಟಿಯರ್, ಪುಟ 38.

ಜಿಲ್ಲೆಯ ಹುಂಚದ ಹೊಂಬುಜವನ್ನು ರಾಜಧಾನಿಯಾಗಿ ಮಾಡಿಕೊಂಡು ಮಲೆನಾಡಿನ ಬಹುಭಾಗ ಆಳ್ವಿಕೆ ನೆಡೆಸಿದರು.

ಸಾಂತಾರರು:

ಸಾಂತಾರರ ಮನೆತನ 7ನೇ ಶತಮಾನದಲ್ಲಿ ಈಗಿನ ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕಿನ ಹೊಂಬುಜದಲ್ಲಿ ರಾಜ್ಯ ಸ್ಥಾಪನೆ ಮಾಡಿದರು. ಇವರ ರಾಜ್ಯ ಉತ್ತರ ಕನ್ನಡದಿಂದ ಚಿಕ್ಕಮಗಳೂರು ಹಾಗೂ ನೆರೆಯ ಹಾಸನ ಜಿಲ್ಲೆಯವರೆಗೂ ಹಬ್ಬಿತ್ತು.[16] ಮಲೆನಾಡು ಪ್ರದೇಶಗಳಲ್ಲಿ ಸುಮಾರು ಸಾವಿರ ವರ್ಷಗಳಕಾಲ ಆಳ್ವಿಕೆ ಮಾಡಿದರು. ಅನೇಕ ರಾಜರ ಸಾಮಾಂತರಾಗಿ ಮುಂದುವರೆದರು. 12ನೇ ಶತಮಾನದಲ್ಲಿ ಹೊಂಬುಜದಿಂದ ಮೂಡಿಗೆರೆ ತಾಲ್ಲೂಕಿನ ಕಳಸದಲ್ಲಿ ರಾಜಧಾನಿ ಸ್ಥಾಪಿಸಿದರು.[17] ಮುಂದೆ ಬೇರೆ ಬೇರೆ ಸ್ಥಳಗಳಗೆ ರಾಜಧಾನಿಗಳನ್ನು ಬದಲಾಯಿಸಿದರು. ಹೊಯ್ಸಳರು ಮತ್ತು ವಿಜಯನಗರದ ಅರಸರ ಮಾಂಡಲಿಕರಾಗಿ ಆಳಿದರು. ಕೆಳದಿ ಅರಸರ ಕಾಲದಲ್ಲಿ ಸಂಪೂರ್ಣವಾಗಿ ಇವರ ಆಳ್ವಿಕೆ ಕೊನೆಗೊಂಡಿತ್ತು. ಸಾಂತಾರರು ಕರ್ನಾಟಕದಲ್ಲಿ ಹೆಚ್ಚು ಕಾಲ ಆಳಿದ ಮನೆತನ ಎಂದು ಇತಿಹಾಸದಲ್ಲಿ ದಾಖಲೆಯಾಗಿದೆ. ಗಂಗರ ಆಳ್ವಿಕೆ ಕಾಲದಲ್ಲಿ (8 ಮತ್ತು 9 ನೇ ಶತಮಾನ) ಜಿಲ್ಲೆಯ ಹಲವು ಭಾಗಗಳು ಸಾಂತಾರರ ಅಧೀನಕ್ಕೆ ಒಳಪಟ್ಟಿತ್ತು ಎಂದು ಹನ್ನೊಂದು ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ. ಇದನ್ನು ಬಿ.ಎಲ್ ರೈಸ್ ರವರು ಉಲ್ಲೇಖಿಸಿದ್ದರೆ.[18]

ಗಂಗರು:

ಗಂಗರು ಜಿಲ್ಲೆಯನ್ನು ಆಳಿದ ಮತ್ತೊಂದು ಪ್ರಮುಖ ರಾಜ ಮನೆತನವಾಗಿದೆ. ಗಂಗರ ರಾಜನಾದ ಶ್ರೀಪುರುಷನ (725–788) ಕಾಲದಲ್ಲಿ ಗಂಗರ ರಾಜ್ಯದ ಎಲ್ಲೆಯು ಗರಿಷ್ಟ ಪ್ರಮಾಣದಲ್ಲಿ ವಿಸ್ತರಿಸಿತ್ತು. ಕ್ರಿ. ಶ. 750ರಲ್ಲಿ ರಚಿಸಿದ ಶಿಲಾಶಾಸನ ಕಡೂರು ತಾಲ್ಲೂಕಿನ ಆಸಂದಿಗ್ರಾಮದಲ್ಲಿ ದೊರೆತಿದೆ.[19] ಚಿಕ್ಕಮಗಳೂರು ನಗರ ಪ್ರದೇಶದೊಳಗಿರುವ ಕೋಟೆ ಪ್ರದೇಶ ಗಂಗರ ಪ್ರಮುಖ ನೆಲೆಯಾಗಿತ್ತು. ಹಿರೇಮಗಳೂರು ಆ ಕಾಲದಲ್ಲಿ ಒಂದು ಅಗ್ರಹಾರವಾಗಿತ್ತು. ಗಂಗರ ಕಾಲದಲ್ಲಿ ಚಿಕ್ಕಮಗಳೂರು, ಹಿರೇಮಗಳೂರು, ಆಸಂದಿ, ಶೃಂಗೇರಿ, ದೇವವೃಂದ, ಬುಕ್ಕಾಂಬುದಿ, ಕಿಗ್ಗ ಮುಂತಾದವು ಪ್ರಮುಖ ಸ್ಥಳಗಳಾಗಿದ್ದವು. ಈ ಕಾಲದ ಪ್ರಮುಖ ಘಟನೆ ಎಂದರೆ 8ನೇ ಶತಮಾನದಲ್ಲಿ ಆದಿಶಂಕರಾಚಾರ್ಯರು

---

[16] ಬಿ.ಎಲ್,ರೈಸ್, ಮೈಸೂರ್ ಗೆಜೆಟಿಯರ್, ಕಡೂರು ಡಿಸ್ಟ್ರಿಕ್ಟ್, ಸಂಪುಟ 2, ಬೆಂಗಳೂರು 2004, ಪುಟ. 379.

[17] ಡಿ.ಎಸ್. ಜಯಪ್ಪಗೌಡ, ಚಿಕ್ಕಮಗಳೂರು ಜಿಲ್ಲಾ ದರ್ಶನ, ಪುಟ 29.

[18] ಬಿ.ಎಲ್,ರೈಸ್, ಮೈಸೂರ್ ಗೆಜೆಟಿಯರ್, ಕಡೂರು ಡಿಸ್ಟ್ರಿಕ್ಟ್, ಪುಟ. 379.

[19] ಸೂರ್ಯನಾಥ್ ಕಾಮತ್, ಚಿಕ್ಕಮಗಳೂರು ಡಿಸ್ಟ್ರಿಕ್ಟ್ ಗೆಜೆಟಿಯರ್, ಪು 39.

ಶ್ರೀ ಶಾರದಾಂಬ ಪೀಠವನ್ನು ಶೃಂಗೇರಿಯಲ್ಲಿ ಸ್ಥಾಪನೆ ಮಾಡಿದರು.[20] ಕ್ರಿ.ಶ. 1004ರ ತಲಕಾಡು ಯುದ್ಧದಲ್ಲಿ ಗಂಗರು ಚೋಳರ ವಿರುದ್ಧ ಸೋತ ನಂತರ ಗಂಗ ಮನೆತನದವರು ಚೋಳರು ಮತ್ತು ಹೊಯ್ಸಳರ ಸಾಮಂತರಾಗಿ ವಿವಿಧ ಪ್ರಾಂತ್ಯಗಳಲ್ಲಿ ಆಳ್ವಿಕೆ ನಡೆಸಿದರು. ಜಿಲ್ಲೆಯ ಆಸಂದಿಯಲ್ಲಿ ಹೊಯ್ಸಳ ಮಾಂಡಲೀಕರಾಗಿ ಅಸ್ಥಿತ್ವಕ್ಕೆ ಬಂದ ಗಂಗರಸರು ಸುಮಾರು 2 ಶತಮಾನಗಳ ಕಾಲ ಆಳ್ವಿಕೆ ನೆಡೆಸಿದರು. ಆಸಂದಿಯು ಈಗಿನ ಚಿಕ್ಕಮಗಳೂರು ಜಿಲ್ಲೆಯ ಕಡೂರಿನ ತಾಲ್ಲೂಕಿನಲ್ಲಿರುವ ಒಂದು ಗ್ರಾಮ. ಗಂಗರ ಕಾಲದಲ್ಲಿ ಇದು ಒಂದು ಪ್ರಮುಖ ಸ್ಥಳವಾಗಿತ್ತು. ಈ ಮನೆತನದ ಆಳ್ವಿಕೆಯನ್ನು ಮೊದಲನೆ ವೈಜರಸ (ಕ್ರಿ.ಶ.1080–1100)ರಲ್ಲಿ ಆರಂಭಿಸಿದನು. ಇವನ ನಂತರ ನಾಡರಸ ಕ್ರಿ. ಶ. 1100–1115ರ ವರೆಗೆ ಆಳ್ವಿಕೆ ನಡೆಸಿದನು. ಇವನು ಹೊಯ್ಸಳ ಎರೆಯಂಗನ ಮಗ ಮೊದಲನೇ ವೀರಬಲ್ಲಾಳನ ಸಮಕಾಲೀನನಾಗಿ ಹೊಯ್ಸಳ ಮಾಂಡಲೀಕನಾಗಿ ಆಳ್ವಿಕೆ ನಡೆಸಿದ. ಇವನ ನಂತರ ಎರಡನೆ ವೈಜರಸ ಕ್ರಿ.ಶ. 1115–1130ರವರೆಗೆ, ಬರ್ಮರಸ ಕ್ರಿ. ಶ. 1130–1180ರ ವರೆಗೆ, ನರಸಿಂಹ ಕ್ರಿ.ಶ.1180–1202ರ ವರೆಗೆ ಆಳ್ವಿಕೆ ನಡೆಸಿದರೆ ಇವನ ನಂತರ ಆಸಂದಿಯ ಅರಸನಾಗಿ ಮರುಳಮಾರ್ಕ್ಕಂಡದೇವ ಕ್ರಿ. ಶ. 1206–1216ರಲ್ಲಿ ಆಳ್ವಿಕೆ ನಡೆಸಿದನೆಂದು ಕ್ರಿ. ಶ. 1206ರ ಆಸಂದಿ ಶಾಸನ ತಿಳಿಸುತ್ತದೆ. ಹೆಬ್ಬಾರಿಮಾರ್ಕ್ಕಂಡದೇವ ಕ್ರಿ. ಶ. 1216–1225ರ ಕಾಲದಲ್ಲಿ ಆಸಂದಿ ನಾಡ ಪ್ರಭುವಾಗಿದ್ದನೆಂದು ಕ್ರಿ.ಶ.1216ರ ಆಸಂದಿ ಶಾಸನ ತಿಳಿಸುತ್ತದೆ.[21] ತಲಕಾಡಿನ ಗಂಗರ ಪತನನಂತರ ಹೊಯ್ಸಳರ ಮಾಂಡಲೀಕರಾಗಿ ಆಸಂದಿಯ ಗಂಗರಸರು ಜಿಲ್ಲೆಯನ್ನು ಆಳ್ವಿಕೆ ಮಾಡಿದರು.

ಹೊಯ್ಸಳರು:

ಹೊಯ್ಸಳರು ಕರ್ನಾಟಕ ಪ್ರದೇಶವನ್ನಾಳಿದ ಒಂದು ಪ್ರಸಿದ್ಧ ಮನೆತನವಾಗಿದೆ. ಇವರು ಮೂಲತಃ ಈ ಜಿಲ್ಲೆಯವರೆಂಬ ಹೆಗ್ಗಳಿಕೆ ಇದೆ. ಹೊಯ್ಸಳ ರಾಜ್ಯ ಸ್ಥಾಪಕನಾದ ಸಳನು ಮೂಡಿಗೆರೆ ತಾಲ್ಲೂಕಿನ, ಅಂಗಡಿ ಗ್ರಾಮದ ಸೊಸೆವೂರಿನಲ್ಲಿ ಜನಿಸಿದನು. ಮತ್ತು ಇಲ್ಲಿಯೇ ರಾಜ್ಯ ಸ್ಥಾಪನೆ ಮಾಡಿದನು. 'ಕೋಟೆ ಹರ' ಪ್ರದೇಶ ಹಾಗೂ ಅನೇಕ ಪಾಳು ಬಿದ್ದ ದೇವಾಲಯಗಳು, ಬಸದಿಗಳು, ಶಾಸನಗಳು ಇಲ್ಲಿ ದೊರೆತಿವೆ.[22] 11ರಿಂದ 14ನೇ ಶತಮಾನದ ಅವಧಿಯಲ್ಲಿ ಈ ಜಿಲ್ಲೆಯು ಹೊಯ್ಸಳರ ಆಳ್ವಿಕೆಗೆ ಒಳಪಟ್ಟಿತ್ತು. ಇದಕ್ಕೆ ಸಂಬಂಧಿಸಿದಂತೆ ಒಟ್ಟು 122 ಶಾಸನಗಳು ಲಭ್ಯವಿದ್ದು ಮುಖ್ಯವಾಗಿ ವಿನಯಾದಿತ್ಯ, ವಿಷ್ಣುವರ್ಧನ, 1ನೇ ನರಸಿಂಹ, 2ನೇ ನರಸಿಂಹ, 3ನೇ ನರಸಿಂಹ, 3ನೇ ಬಲ್ಲಾಳ

[20] ಡಿ.ಎಸ್. ಜಯಪ್ಪಗೌಡ, ಅದೇ, ನೋಡಿ, ಪುಟ 29.

[21] ಟಿ. ಮುರುಗೇಶಿ, ಆಸಂದಿಯ ಅರಸರು, ಮಲೆ ಕರ್ನಾಟಕದ ಅರಸು ಮನೆತನಗಳು, ಸಂ. ರಾಜರಾಮ ಹೆಗಡೆ ಮತ್ತು ಅಶೋಕ್ ಶೆಟ್ಟರ್, ಹಂಪಿ 2001, ಪುಟ 155.

[22] ಡಿ.ಎಸ್. ಜಯಪ್ಪಗೌಡ, ಅದೇ, ಪೂರ್ವೋಕ್ತ, ಪುಟ 30.

ಮೊದಲಾದವರಿಗೆ ಸೇರಿದ ಶಾಸನಗಳು ಹೆಚ್ಚು ಲಭ್ಯವಿದೆ. ಹೊಯ್ಸಳ ವಿನಯಾದಿತ್ಯನ (ಸು.1045–1098) ಕಾಲದಲ್ಲಿ ಹೊಯ್ಸಳರ ರಾಜಧಾನಿ ಸೊಸೆವೂರು ಅಥವಾ ಶಶಕಪುರ (ಈಗಿನ ಅಂಗಡಿ) ದಿಂದ ಬೇಲೂರಿಗೆ, ನಂತರ ದ್ವಾರಾವತೀಪುರ (ದ್ವಾರಸಮುದ್ರ) ಈಗಿನ ಹಳೆಬೀಡಿಗೆ ವರ್ಗಾವಣೆಯಾಯಿತು.[23] ಹೊಯ್ಸಳರ ಪ್ರಸಿದ್ದ ದೊರೆ ವಿಷ್ಣುವರ್ಧನನು ದಂಡಯಾತ್ರೆ ಕೈಗೊಂಡಿದ್ದಾಗ ಉತ್ತರ ಕನ್ನಡ ಜಿಲ್ಲೆಯ ಬಂಕಾಪುರದಲ್ಲಿ ನಿಧನನಾದಾಗ ಅವನ ಪಾರ್ಥೀವ ಶರೀರವನ್ನು ಹೊಯ್ಸಳರ ಮೂಲಸ್ಥಾನವಾದ ಮೂಡಿಗೆರೆಗೆ ತಂದಿದ್ದು ಚಿಕ್ಕಮಗಳೂರಿನ 63ನೇ ಶಾಸನ ತಿಳಿಸುತ್ತದೆ. ಹೊಯ್ಸಳರ ಆಳ್ವಿಕೆಯಲ್ಲಿ ಚಿಕ್ಕಮಗಳೂರು ಪ್ರದೇಶ ರಾಜ್ಯದ ಅವಿಭಾಜ್ಯ ಅಂಗವಾಗಿತ್ತು. ಇಲ್ಲಿ ಅನೇಕ ಪ್ರಸಿದ್ಧ ದೇವಾಲಯಗಳನ್ನು, ಕೆರೆ–ಕಟ್ಟೆಗಳನ್ನು ಕಟ್ಟಿಸಿದರು. ಇವುಗಳಲ್ಲಿ ತರೀಕೆರೆ ತಾಲ್ಲೂಕಿನ ಅಮೃತಾಪುರದ ಅಮೃತೇಶ್ವರ ದೇವಾಲಯ ಮತ್ತು ಬೆಳವಾಡಿ ದೇವಾಲಯಗಳು ಶ್ರೇಷ್ಠವಾದದು. ಮೂಡಿಗೆರೆ ತಾಲ್ಲೂಕಿನ ದೇವರಮನೆಯಲ್ಲಿರುವ ಭೈರವ ದೇವಾಲಯ ವಿಶಿಷ್ಟವಾಗಿದೆ. ಅಯ್ಯನಕೆರೆ ದುರಸ್ತಿ ಮತ್ತು ಸುವ್ಯವಸ್ಥೆ ಕೈಗೊಳ್ಳಲಾಯಿತು. ಇವರ ಕಾಲದಲ್ಲಿ ವೀರಶೈವ ಧರ್ಮ ಬೆಳೆದು ಬಂದಿತು. ಭದ್ರಾನದಿ ದಡದಲ್ಲಿರುವ ಸಂಗಮೇಶ್ವರ ಪೇಟೆಯಲ್ಲಿ ಶರಣರು ತಂಗಿದ್ದರು. ಬಾಳೆಹೊನ್ನೂರು ವೀರಶೈವ ಪಂಚಮಠ ಮುಂದೆ ಬೆಳೆದುಬಂದಿತ್ತು. ಶ್ರೀ ಮಧ್ವಾಚಾರ್ಯರು ಇಲ್ಲಿ ಸಂಚರಿಸಿದ್ದರು. ಅಂಬುತೀರ್ಥದಲ್ಲಿನ 'ಶ್ರೀ ಮಧ್ವಾಚಾರ್ಯರ ಬಂಡೆ' ಪ್ರಸಿದ್ದಿ ಪಡೆದಿದೆ. ಇವರ ಕಾಲದಲ್ಲಿ ಆಸಂದಿ, ಸಕರಾಯ ಪಟ್ಟಣ, ಅಮೃತಪುರ, ಮತ್ತಾವರ, ಪಟ್ನಗೆರೆ, ಮರಳೆ, ಹಿರಿಯೂರು, ತರೀಕೆರೆ, ಅಂಬಳೆ, ಬಾಳೆಹೊನ್ನೂರು, ಕಿಗ್ಗ, ಅಂಗಡಿ, ಕಳಸ, ಗೋಣಿಬೀಡು ಮುಂತಾದವು ಪ್ರಮುಖ ಸ್ಥಳಗಳಾಗಿದ್ದವು.[24]

ವಿಜಯನಗರದ ಅರಸರು:

ವಿಜಯನಗರ ಸಾಮ್ರಾಜ್ಯದ ಸ್ಥಾಪನೆ ಜಿಲ್ಲೆಯೊಂದಿಗೆ ಸಂಬಂಧ ಹೊಂದಿದೆ. ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ಪೀಠದ ಗುರುಗಳಾಗಿದ್ದ ವಿದ್ಯಾರಣ್ಯರು ರಾಜ್ಯ ಸ್ಥಾಪನೆಗೆ ಬೆಂಬಲ ನೀಡಿದ್ದು ಒಂದು ಮಹತ್ವದ ವಿಚಾರವಾಗಿತ್ತು. ವಿಜಯನಗರ ಸಾಮ್ರಾಟ ಹರಿಹರನು ಶೃಂಗೇರಿಗೆ ಭೇಟಿ ನೀಡಿದ್ದು ಗಮನಾರ್ಹವಾಗಿದೆ. ಬುಕ್ಕನ ಮಗ ವಿರೂಪಣ್ಣ ಒಡೆಯನು ಶಿವಮೊಗ್ಗ ಜಿಲ್ಲೆಯ ಆರಗವನ್ನು ಕೇಂದ್ರ ಮಾಡಿಕೊಂಡು ಕಳಸ ಪ್ರಾಂತ್ಯವನ್ನು ಆಳುತ್ತಿದ್ದನು. ಈ ಅರಸರ ಅಧೀನದಲ್ಲಿ ಕಳಸದ ಭೈರರಸರು,

[23] ಸೂರ್ಯನಾಥ್ ಕಾಮತ್, ಚಿಕ್ಕಮಗಳೂರು ಡಿಸ್ಟ್ರಿಕ್ಟ್ ಗೆಜೆಟಿಯರ್, ಪುಟ 44.
[24] ಡಿ.ಎಸ್. ಜಯಪ್ಪಗೌಡ, ಅದೇ, ನೋಡಿ, ಪುಟ 31.

ಬೇಲೂರು ಮತ್ತು ಐಗೂರು ನಾಯಕರು, ಕೆಳದಿ ನಾಯಕರು, ಬಸವಾ ಪಟ್ಟಣ ಅಥವಾ ತರೀಕೆರೆ ಪಾಳೆಯಗಾರರು ಈ ಜಿಲ್ಲೆಯ ವಿವಿಧ ಭಾಗಗಳನ್ನು ಆಳಿದರು.[25]

ಐಗೂರು ಪಾಳೆಗಾರರು:

ಐಗೂರು ಪಾಳೆಪಟ್ಟು ವಿಜಯನಗರದ ಆಶ್ರಯದಲ್ಲಿ ಅಸ್ತಿತ್ವಕ್ಕೆ ಬಂದಿತು. ಇದಕ್ಕೆ 'ಬಲಮ್' ರಾಜ್ಯ ಎಂದೂ ಹೆಸರಿತ್ತು.[26] ಇದರ ಮೂಲ ಪುರುಷ ಹಿರಿಯ ಸಿಂಗಪ್ಪ ನಾಯಕ. ಐಗೂರು ಪಾಳೆಗಾರರು ಈಗಿನ ಹಾಸನ ಜಿಲ್ಲೆಯ ಸಕಲೇಶಪುರ (ಮಂಜರಾಬಾದ್) ತಾಲ್ಲೂಕಿನ ಐಗೂರು ರಾಜಧಾನಿಯಾಗಿ ಮಾಡಿಕೊಂಡು ಚಿಕ್ಕಮಗಳೂರು ಜಿಲ್ಲೆಯ ಮಲೆನಾಡಿನ ಬಹುಭಾಗವನ್ನು ಇವರು ಆಳಿದರು.[27] ಕೆಳದಿ ನಾಯಕರೊಂದಿಗೆ ಹೋರಾಡುತ್ತಾ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿದ್ದರು. ಮೈಸೂರು ಒಡೆಯರ ವಿಸ್ತರಣಾ ನೀತಿಯಿಂದಾಗಿ ಇವರ ಪ್ರಭಾವ ಕುಗ್ಗಿತು. ಮುಂದೆ ಮೂಡಿಗೆರೆ ತಾಲ್ಲೂಕಿನಲ್ಲಿ ಆಳ್ವಿಕೆ ಮುಂದುವರೆಸಿ ಹೈದರಾಲಿ, ಟಿಪ್ಪು ಮತ್ತು ಬ್ರಿಟಿಷರ ವಿರುದ್ಧ ಹೋರಾಡಿ ಅಂತಿಮವಾಗಿ ಕ್ರಿ. ಶ. 1802 ರಲ್ಲಿ ಈ ಮನೆತನದ ಕೊನೆಯ ನಾಯಕನನ್ನು ಸೆರೆಹಿಡಿದು ಮೂಡಿಗೆರೆ ತಾಲ್ಲೂಕಿನ ಉಗ್ಗೇನಹಳ್ಳಿಯಲ್ಲಿ ಗಲ್ಲಿಗೇರಿಸಲಾಯಿತು.[28]

ಕೆಳದಿ ನಾಯಕರು:

ಕೆಳದಿ ನಾಯಕರು ವಿಜಯನಗರ ಅರಸರ ಸಾಮಂತರಾಗಿದ್ದು, 17ನೇ ಶತಮಾನದಲ್ಲಿ ಸ್ವತಂತ್ರರಾದರು. ಕೆಳದಿ, ಇಕ್ಕೆರಿ ಮತ್ತು ಬಿದನೂರನ್ನು ಕೇಂದ್ರಮಾಡಿಕೊಂಡು ಆಳ್ವಿಕೆ ಮಾಡಿದರು. ಇವರಲ್ಲಿ ಅತ್ಯಂತ ಪ್ರಮುಖನಾದವನು ಶಿವಪ್ಪನಾಯಕ. ಇವನ ಆಳ್ವಿಕೆಗೆ ಜಿಲ್ಲೆಯ ಬಹುಭಾಗ ಒಳಪಟ್ಟಿತ್ತು.[29] ಇವನು ಕೆಳದಿ ಇತಿಹಾಸದಲ್ಲಿ ಸುವರ್ಣಯುಗ ಸೃಷ್ಟಿಸಿದನು. ಶಿವಪ್ಪನಾಯಕ ವಿಜಯನಗರ ಸಾಮ್ರಾಟನಾದ ಶ್ರೀರಂಗರಾಜನಿಗೆ ಆಶ್ರಯ ನೀಡಿ ಬೇಲೂರನ್ನು ಬಳುವಳಿಯಾಗಿ ನೀಡಿದನು. ತನ್ನ ರಾಜ್ಯ ವಿಸ್ತರಣೆಯಲ್ಲಿ ತರೀಕೆರೆ ತೆರೆಗುಪ್ಪನಾಯಕನನ್ನು ಸೋಲಿಸಿದನು. ಕಳಸದ ಭೈರವನಿಂದ ಶೃಂಗೇರಿ ಮಠಕ್ಕೆ ವಿಪತ್ತು ಬಂದಾಗ ಅದನ್ನು ನಿಗ್ರಹಿಸಿ, ಪೀಠದ ಗೌರವವನ್ನು ಉಳಿಸಿ ಅಸೀಮ ಭಕ್ತಿಯನ್ನು ಪ್ರಕಟಿಸಿದನು.[30] ಇವನ ಕಾಲದಲ್ಲಿ ಶೃಂಗೇರಿ, ಯಡೆಹಳ್ಳಿ (ನರಸಿಂಹರಾಜಪುರ),

---

[25] ಬಿ.ಎಲ್.ರೈಸ್, ಮೈಸೂರ್ ಗೆಜೆಟಿಯರ್, ಕಡೂರು ಡಿಸ್ಟ್ರಿಕ್ಟ್, ಪುಟ. 380

[26] ಸೂರ್ಯನಾಥ್ ಕಾಮತ್, ಚಿಕ್ಕಮಗಳೂರು ಡಿಸ್ಟ್ರಿಕ್ಟ್ ಗೆಜೆಟಿಯರ್, ಪುಟ 52.

[27] ಡಿ.ಎಸ್. ಜಯಪ್ಪಗೌಡ, ಅದೇ, ಪುಟ 33.

[28] ಅದೇ, ಪುಟ 33.

[29] ಬಿ.ಎಲ್.ರೈಸ್, ಮೈಸೂರ್ ಗೆಜೆಟಿಯರ್, ಕಡೂರು ಡಿಸ್ಟ್ರಿಕ್ಟ್, ಪುಟ. 380

[30] ಅರಳು ಮಲ್ಲಿಗೆ ಪಾರ್ಥಸಾರಥಿ, ಕರ್ನಾಟಕದ ಇತಿಹಾಸ, ಬೆಂಗಳೂರು 1986, ಪುಟ 68.

ಬಾಳೆಹೊನ್ನೂರು ಮಠಗಳಿಗೆ ಭೂದಾನ ಮಾಡಿದ ಶಾಸನಗಳನ್ನು ಗುರುತಿಸಲಾಗಿದೆ.[31] ಶಿವಪ್ಪ ನಾಯಕನ ಮರಣ ನಂತರ, ಮೈಸೂರು ಒಡೆಯರು ರಾಜ್ಯ ವಿಸ್ತರಣಾ ನೀತಿಯನ್ನು ಅನುಸರಿಸಿ ಬಿದನೂರು ರಾಜ್ಯವನ್ನು ಆಕ್ರಮಿಸಿಕೊಳ್ಳಲು ನಿರಂತರ ಪ್ರಯತ್ನ ಮಾಡುತ್ತಿದ್ದರು. ಕ್ರಿ. ಶ. 1669ರ ವೇಳೆಗೆ ಬಿದನೂರಿನ ಬಹುಭಾಗ ಮೈಸೂರು ಒಡೆಯರ ವಶವಾಯಿತು. ಮೈಸೂರು ಒಡೆಯರು ಮತ್ತು ಕೆಳದಿ ಅರಸರ ನಡುವಿನ ಒಪ್ಪಂದದಂತೆ ಈ ಜಿಲ್ಲೆಯ ಐಗೂರು ಮತ್ತು ವಸ್ತಾರೆ ಹೊರತುಪಡಿಸಿ ಉಳಿದ ಪ್ರದೇಶಗಳನ್ನು ಕೆಳದಿ ಅರಸರಿಗೆ ಹಿಂತಿರುಗಿಸಲಾಯಿತು.[32] ಹೈದಾರಾಲಿ ಮತ್ತು ಟಿಪ್ಪು ಸುಲ್ತಾನರ ಕಾಲದಲ್ಲಿ ಕೆಳದಿಯನ್ನು ಸಂಪೂರ್ಣವಾಗಿ ವಶಪಡಿಸಿಕೊಂಡು ಮೈಸೂರು ಸಂಸ್ಥಾನಕ್ಕೆ ಸೇರಿಸಲಾಯಿತು.

ತರೀಕೆರೆ ಪಾಳೆಗಾರರು:

ತರೀಕೆರೆ ಪಾಳೆಗಾರರು 16ನೇ ಶತಮಾನದಲ್ಲಿ ಶಿವಮೊಗ್ಗ ಜಿಲ್ಲೆಯ ಸಂತೆಬೆನ್ನೂರಿನಲ್ಲಿ ಒಂದು ಸಣ್ಣ ಪಾಳೆಪಟ್ಟನ್ನು ಸ್ಥಾಪಿಸಿ ಆಳ್ವಿಕೆ ಆರಂಭಿಸಿದರು. ಇದೇ ಜಿಲ್ಲೆಯ ಬಸವಪಟ್ಟಣ ಇವರ ಮೂಲ ಸ್ಥಳವಾಗಿತ್ತು. ಇವರು ವಿಜಯನಗರದ ಸಾಮಂತರಾಗಿದ್ದರು.[33] ಪುವಲಕುಲ ಕೆಂಗಣ್ಣ ಈ ವಂಶದ ಮೂಲ ಪುರುಷ.[34] ಇವರ ರಾಜ್ಯ ಮುಂದೆ ಚಿತ್ರದುರ್ಗ ಜಿಲ್ಲೆಯ ಹರಿಹರದಿಂದ ಚಿಕ್ಕಮಗಳೂರು ಜಿಲ್ಲೆಯ ತರೀಕೆರೆಯವರೆಗೂ ಹಬ್ಬಿತ್ತು. ಇವರಲ್ಲಿ ಹಿರಿಯ ಹನುಮಪ್ಪ ನಾಯಕ, ಇಮ್ಮಡಿ ಹನುಮಪ್ಪ ನಾಯಕ, ನಿಚ್ಚ-ಮದುವನಿಗ, ಹನುಮಪ್ಪ ನಾಯಕ, ಸರ್ಜ ಹನುಮಪ್ಪ ನಾಯಕ ಮತ್ತು ಸೀತ-ರಾಮಪ್ಪ ನಾಯಕ ಪ್ರಮುಖರಾಗಿದ್ದರು. 1636ರಲ್ಲಿ ಬಿಜಾಪುರ ಸೈನ್ಯದ ನಾಯಕನಾದ ರಣದುಲ್ಲಖಾನ್ ಸಂತೆ-ಬೆನ್ನೂರಿನ ನಾಯಕನನ್ನು ಸೋಲಿಸಿ ಅಲ್ಲಿಂದ ಓಡಿಸಿದನು. ಆ ನಂತರ ತರೀಕೆರೆಯನ್ನು ರಾಜಧಾನಿಯಾಗಿ ಮಾಡಿಕೊಂಡು ಆಳ್ವಿಕೆ ಮುಂದುವರೆಸಿ ತರೀಕೆರೆ ಪಾಳೆಗಾರರು ಎಂದು ಪ್ರಸಿದ್ಧರಾದರು.[35] ಹೈದರಾಲಿ ತರೀಕೆರೆ ಗೆದ್ದು ಪೊಗದಿ ಕೊಡಲು ಒಪ್ಪಿದಾಗ ಆಡಳಿತ ಮರಳಿ ಬಿಟ್ಟುಕೊಟ್ಟನು.[36] ಆದರೆ ಪೊಗದಿ ಹಣವನ್ನು ಕ್ಲುಪ್ತ ಕಾಲದಲ್ಲಿ ಪಾವತಿಸದೆ ಇದ್ದುದರಿಂದ 1761ರಲ್ಲಿ ಟಿಪ್ಪು ಸುಲ್ತಾನನು ತರೀಕೆರೆ ಪಾಳೆಗಾರರನ್ನು ಪದಚ್ಯುತಿಗೊಳಿಸಿ ಅವರ ಪ್ರಾಂತ್ಯವನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡನು. ಮತ್ತು ಅವರನ್ನು ಮೈಸೂರಿನಲ್ಲಿ ಬಂಧನದಲ್ಲಿಟ್ಟನು. 1830ರ ನಗರ ದಂಗೆಯಲ್ಲಿ ತರೀಕೆರೆ ಪಾಳೆಗಾರರು ಪ್ರಮುಖ ಪಾತ್ರ ವಹಿಸಿದರು. ಈ ವಂಶದ ರಂಗಪ್ಪನಾಯಕ ಅವನ ಮಗ ಸರ್ಜಾ ಹನುಮಪ್ಪ ನಾಯಕ

---

[31] ಜಯದೇವಪ್ಪ ಜೈನಕೇರಿ, ಕೆಳದಿ ಅರಸರ ಯಶೋಗಾಥೆ, ಬೆಂಗಳೂರು 2018, ಪುಟ 128.

[32] ಬಿ.ಎಲ್.ರೈಸ್, ಮೈಸೂರ್ ಗೆಜೆಟಿಯರ್, ಕಡೂರು ಡಿಸ್ಟ್ರಿಕ್ಟ್, ಪುಟ. 380

[33] ರಾಜರಾಮ ಹೆಗಡೆ, ಹೊಸಗುಂದದ ಅರಸರು, ಮಲೆ ಕರ್ನಾಟಕದ ಅರಸುಮನೆತನಗಳು, ಸಂ. ರಾಜರಾಮ ಹೆಗಡೆ ಮತ್ತು ಅಶೋಕ್ ಶೆಟ್ಟರ್, ಪೂರ್ವೋಕ್ತ, ಪುಟ 245.

[34] ಸೂರ್ಯನಾಥ್ ಕಾಮತ್, ಚಿಕ್ಕಮಗಳೂರು ಡಿಸ್ಟ್ರಿಕ್ಟ್ ಗೆಜೆಟಿಯರ್, ಪುಟ 53

[35] ಅದೇ, ಪುಟ 54.

[36] ರಾಜರಾಮ ಹೆಗಡೆ, ಪೂರ್ವೋಕ್ತ, ನೋಡಿ, ಪುಟ 245.

ಮತ್ತು ಸಹೋದರ ಅಳಿಯನಾದ ಸರ್ಜಪ್ಪ ನಾಯಕ ಜಿಲ್ಲೆಯಲ್ಲಿ ದಂಗೆಯ ಮುಂದಾಳತ್ವ ವಹಿಸಿದ್ದರು. ಅಂತಿಮವಾಗಿ ಬ್ರಿಟಿಷರು ಈ ದಂಗೆಯನ್ನು ಅಡಗಿಸಿ ಇವರನ್ನು ಗಲ್ಲಿಗೇರಿಸಲಾಯಿತು.[37] ಇಲ್ಲಿಗೆ ತರೀಕೆರೆ ಪಾಳೆಗಾರರ ಆಳ್ವಿಕೆ ಅಂತ್ಯವಾಯಿತು.

ಮೈಸೂರು ಒಡೆಯರು:

1799ರ 4ನೇ ಆಂಗ್ಲ–ಮೈಸೂರು ಯುದ್ಧದಲ್ಲಿ ಟಿಪ್ಪು ಸುಲ್ತಾನನ ಮರಣ ನಂತರ ಮೈಸೂರು ಸಂಸ್ಥಾನದ ಒಂದು ಭಾಗ ಬ್ರಿಟಿಷರಿಂದ ಹಿಂದಿನ ಮೈಸೂರು ಒಡೆಯರಿಗೆ ಹಿಂದಿರುಗಿಸಲಾಯಿತು. ಉಳಿದ ಎರಡು ಭಾಗದಲ್ಲಿ ಒಂದನ್ನು ಹೈದರಾಬಾದಿನ ನಿಜಾಮನಿಗೂ ಮತ್ತೊಂದು ಭಾಗವನ್ನು ಮರಾಠರಿಗೂ ಹಂಚಲಾಯಿತು. ಈ ಸಮಯದಲ್ಲಿ ಚಿಕ್ಕಮಗಳೂರು ಜಿಲ್ಲೆಯು ಮೈಸೂರು ಸಂಸ್ಥಾನದ ನಗರ ವಿಭಾಗದ ಒಂದು ಭಾಗವಾಯಿತು. ಕ್ರಿ.ಶ. 1863ರಲ್ಲಿ ಪ್ರತ್ಯೇಕವಾದ ಕಡೂರು ಜಿಲ್ಲೆಯನ್ನು ರಚಿಸಲಾಯಿತು.[38] ಕಡೂರು ಕೇಂದ್ರ ಸ್ಥಾನವಾಯಿತು. ಕ್ರಿ.ಶ. 1882ರಲ್ಲಿ ಕಡೂರು ಜಿಲ್ಲೆಗೆ ಹಾಸನ ಉಪ–ವಿಭಾಗದ ಅರಸೀಕೆರೆ, ಬೇಲೂರು, ಹಾಸನ ಮತ್ತು ಮಂಜರಾಬಾದ್ ತಾಲ್ಲೂಕುಗಳನ್ನು ಸೇರಿಸಲಾಯಿತು. ಆದರೆ 1886ರಲ್ಲಿ ಹಾಸನ ಜಿಲ್ಲೆಯನ್ನು ಪುನರ್ ರಚಿಸಿದಾಗ ಈ ಸ್ಥಳಗಳು ಮತ್ತೆ ಹಾಸನಕ್ಕೆ ಸೇರಿಕೊಂಡವು. 1897ರಲ್ಲಿ ಯೆಡೆಹಳ್ಳಿ ಉಪತಾಲ್ಲೂಕನ್ನು ರದ್ದುಮಾಡಿ ಹೊಸದಾಗಿ ಬಾಳೆಹೊನ್ನೂರು ತಾಲ್ಲೂಕನ್ನು ರಚಿಸಲಾಯಿತು.[39] 1947ರ ವರೆಗೂ ಈ ಜಿಲ್ಲೆಯನ್ನು ಕಡೂರು ಜಿಲ್ಲೆಯೆಂದು ಕರೆಯಲಾಗುತ್ತಿದ್ದು ನಂತರ ಚಿಕ್ಕಮಗಳೂರು ಜಿಲ್ಲೆಯೆಂದು ಹೆಸರು ಬದಲಾಯಿಸಿ ಚಿಕ್ಕಮಗಳೂರು ಪಟ್ಟಣವನ್ನು ಜಿಲ್ಲಾ ಕೇಂದ್ರವನ್ನಾಗಿ ಮಾಡಲಾಯಿತು.[40]

ಜಿಲ್ಲೆಯಲ್ಲಿ ಸ್ವಾತಂತ್ರ್ಯ ಹೋರಾಟ:

ಚಿಕ್ಕಮಗಳೂರು ಜಿಲ್ಲೆ ತನ್ನದೇ ಆದ ಸ್ವಾತಂತ್ರ್ಯ ಹೋರಾಟದ ಇತಿಹಾಸವನ್ನು ಹೊಂದಿದೆ. ಅನೇಕ ಸ್ವಾತಂತ್ರ್ಯ ಹೋರಾಟಗಾರರನ್ನು ಜಿಲ್ಲೆ ಕೊಡುಗೆಯಾಗಿ ನೀಡಿದೆ. ಆರಂಭದಲ್ಲಿ ಹೊಸಕೊಪ್ಪ ಕೃಷ್ಣರಾಯರು (1889–1937) ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದು ಮೈಸೂರು ಕಾಂಗ್ರೆಸ್ಸಿನ ನಾಯಕರ ಪ್ರಭಾವಕ್ಕೆ ಒಳಗಾಗಿ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದರು. ಹೊಸಕೊಪ್ಪ ಕೃಷ್ಣರಾಯರು ರಾಜ್ಯದ ಆಡಳಿತದಲ್ಲಿ ಪ್ರಜಾಸತ್ತಾತ್ಮಕ

---

37 ಶಾಮ ರಾವ್ ಎಂ. ಮಾಡರ್ನ್ ಮೈಸೂರ್, ಫ್ರಮ್ ಡಿ ಬಿಗಿನಿಂಗ್ ಟು 1868, ಹಿಗ್ಗಿನ್ ಬಾಥಮ್, ಬೆಂಗಳೂರು 1936, ಪುಟ 450.

38 ಬಿ.ಎಲ್,ರೈಸ್, ಮೈಸೂರ್ ಗೆಜೆಟಿಯರ್, ಕಡೂರು ಡಿಸ್ಟ್ರಿಕ್ಟ್, ಪುಟ. 367.

39 ಅದೇ, ಪುಟ. 367

40 ಡಿ.ಎಸ್. ಜಯಪ್ಪಗೌಡ, ಚಿಕ್ಕಮಗಳೂರು ಜಿಲ್ಲಾ ದರ್ಶನ, ಅದೇ, ಪುಟ 34.

ಸುಧಾರಣೆಗಳನ್ನು ತರಲು ಕರೆ ನೀಡಿ ಹರಿಹರಪುರದಲ್ಲಿ ರಾಜಕೀಯ ಸಮವೇಶ ಆಯೋಜಿಸಿದರು. ಜಿಲ್ಲೆಯಲ್ಲಿ ಕೃಷ್ಣರಾಯರು ಅನೇಕ ರಚನಾತ್ಮಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕಾರ್ಯಗತಗೊಳಿಸಲು ಪ್ರಯತ್ನಿಸಿದರು. ಇವರ ಪ್ರಭಾವದಿಂದಾಗಿ ಜಿಲ್ಲೆಯಲ್ಲಿ ಅನೇಕರು ಮೈಸೂರು ಕಾಂಗ್ರೆಸ್ಸಿನ ಸದಸ್ಯರಾಗಿ ಹೋರಾಟದಲ್ಲಿ ಭಾಗಿಯಾದರು. ಅವರಲ್ಲಿ ಅಣ್ಣಪ್ಪ ಶೆಟ್ಟಿ, ಮೂಡಿಗೆರೆಯ ಎಂ. ಕೆ. ದೊಡ್ಡಪ್ಪಗೌಡ, ಕಡೂರಿನ ಕೆ. ಜಿ. ಸತ್ಯನಾರಾಯಣ ಶೆಟ್ಟಿ, ಬೀರೂರಿನ ಕೆ.ಟಿ. ಸತ್ಯನಾರಾಯಣ, ಮಾರ್ಗದ ಮಲ್ಲಪ್ಪ, ಡಿ.ಎಚ್. ರುದ್ರಪ್ಪ, ಬಾಗೆಮನೆ ದೇವೇಗೌಡ, ಅಜ್ಜಂಪುರ ಎಸ್. ಸುಬ್ರಹ್ಮಣ್ಯ ಮುಂತಾದವರು.[41] 1923ರಲ್ಲಿ ಬೆಳಗಾವಿಯಲ್ಲಿ ಡಾ. ಹರ್ಡೀಕರ್ ಮಂಜಪ್ಪ ಸ್ಥಾಪಿಸಿದ್ದ ಹಿಂದುಸ್ತಾನಿ ಸೇವಾದಳಕ್ಕೆ ಕೃಷ್ಣರಾಯರು ಪ್ರಾಂತೀಯ ಅಧ್ಯಕ್ಷರೂ ಆಗಿದ್ದರು. 1924ರಲ್ಲಿ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನ ಬೆಳಗಾವಿಯಲ್ಲಿ ನಡೆಯಿತು. ಈ ಅಧಿವೇಶನದಲ್ಲಿ ಜಿಲ್ಲೆಯ ಹೊಸಕೊಪ್ಪ ಕೃಷ್ಣರಾಯರು ಸ್ವಾಗತ ಸಮಿತಿ ಉಪಾಧ್ಯಕ್ಷರಾಗಿದ್ದರು.[42] ಜಿಲ್ಲೆಯಲ್ಲಿ ಗ್ರಾಮೀಣ ಕೈಗಾರಿಕೆಗಳ ಬೆಳವಣಿಗೆಗೆ, ಹರಿಜನರ ಉನ್ನತಿಗೆ ಮತ್ತು ಪುನಃಶ್ಚೇತನ ಕಾರ್ಯಕ್ರಮಗಳಿಗೆ ಪ್ರೋತ್ಸಾಹ ನೀಡಿದರು. ಬೆಳಗಾವಿ ಅಧಿವೇಶನಕ್ಕೆ ಜಿಲ್ಲೆಯಿಂದ ಅನೇಕ ತರುಣರು ತೆರಳಿದ್ದರು. ಅವರಲ್ಲಿ ಚಿಕ್ಕಮಗಳೂರಿನ ಕೆ. ಸೂರಪ್ಪ ಶೆಟ್ಟರು ಒಬ್ಬರಾಗಿದ್ದರು. 1920ರಲ್ಲಿ ಪ್ರತ್ಯೇಕವಾಗಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ರಚಿಸಿ, ರಾಜಕೀಯ ಸಮ್ಮೇಳನದ ಮೂಲಕ ಸ್ವಾತಂತ್ರ್ಯ ಹೋರಾಟ ಮತ್ತು ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು. ಇದೇ ಸಮಯದಲ್ಲಿ ಕಡೂರಿನಲ್ಲಿ ಕಾಂಗ್ರೆಸ್ ಸಮಿತಿ ಸ್ಥಾಪನೆಯಾಯಿತು. 1927ರಲ್ಲಿ ಮದ್ರಾಸ್‌ನಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಚಿಕ್ಕಮಗಳೂರಿನಿಂದ ಹೊಸ್ತಾರೆ ಹೊನ್ನಪ್ಪಯ್ಯ, ಕಳಸ ಕೃಷ್ಣರಾವ್ ಪಾಲುಗೊಂಡಿದ್ದರು.[43] 1927ರಲ್ಲಿ ಗಾಂಧೀಜಿ ಖಾದಿ ಪ್ರಚಾರಕ್ಕಾಗಿ ಸಂಸ್ಥಾನದಲ್ಲಿ ಪ್ರವಾಸ ಕೈಗೊಂಡಾಗ ಜಿಲ್ಲೆಯ ಕಡೂರು, ಬೀರೂರು ತರೀಕೆರೆಗಳಿಗೆ ಆಗಸ್ಟ್ 18ರಂದು ಭೇಟೀನೀಡಿದರು. ಈ ಸಂದರ್ಭದಲ್ಲಿ ಕಡೂರಿನಲ್ಲಿ ಡಾ.ಸುಬ್ಬರಾವ್ ಹಂಡೇಕಾರ್, ಲಕ್ಷ್ಮೀನಾರಾಯಣರಾವ್ ಕಾರ್ಯಕ್ರಮ ಏರ್ಪಡಿಸಿ ಖಾದಿ ನಿಧಿಗೆ ಊರಿನ ಪರವಾಗಿ ದೇಣಿಗೆ ಸಲ್ಲಿಸಿದರು. ಬೀರೂರಿನಲ್ಲಿ ಕೆ.ಟಿ. ಸತ್ಯನಾರಾಯಣ ಶೆಟ್ಟರ ನೇತೃತ್ವದಲ್ಲಿ ಕಾರ್ಯಕ್ರಮ ಆಯೋಜಿಸಲಾಯಿತು. ಚಿಕ್ಕಮಗಳೂರಿನಲ್ಲಿ ಖ್ಯಾತ ಸಾಹಿತಿ ಮತ್ತು ಆಗಿನ ಜಿಲ್ಲಾಧಿಕಾರಿಯಾಗಿದ್ದ ಮಾಸ್ತಿ ವೆಂಕಟೇಶ ಅಯ್ಯಂಗಾರ್‌ರವರು ಕಾರ್ಯಕ್ರಮದ ಆಯೋಜನೆಗೆ ನೆರವನ್ನು ನೀಡಿ ಉತ್ಸಾಹದಿಂದ ಪಾಲ್ಗೊಂಡಿದ್ದರು. ಪುರಸಭಾಧ್ಯಕ್ಷ ಬಿ. ಕೇಶವಯ್ಯ ಐದು ಸಾವಿರ ರೂಪಾಯಿಗಳನ್ನು ಖಾದಿ ನಿಧಿಗೆ

[41] ಸೂರ್ಯನಾಥ್ ಕಾಮತ್, ಚಿಕ್ಕಮಗಳೂರು ಜಿಲ್ಲೆಯಲ್ಲಿ ಸ್ವಾತಂತ್ರ್ಯ ಹೋರಾಟ, ಚಿಕ್ಕಮಗಳೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಸಂ. ಡಾ. ಆರ. ಗೋಪಾಲ್, ಪುಟ 169.

[42] ಸೂರ್ಯನಾಥ್ ಕಾಮತ್, ಚಿಕ್ಕಮಗಳೂರು ಡಿಸ್ಟ್ರಿಕ್ಟ್ ಗೆಜೆಟಿಯರ್, ಪುಟ 55.

[43] ಸೂರ್ಯನಾಥ್ ಕಾಮತ್, ಚಿಕ್ಕಮಗಳೂರು ಜಿಲ್ಲೆಯಲ್ಲಿ ಸ್ವಾತಂತ್ರ್ಯ ಹೋರಾಟ, ಚಿಕ್ಕಮಗಳೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪುಟ 169.

ದೇಣಿಗೆ ಅರ್ಪಿಸಿದರು. ಈ ಸಭೆಗೆ ಜಿಲ್ಲೆಯ ನಾನಾ ಭಾಗಗಳಿಂದ ಅಪಾರ ಜನಸ್ತೋಮ ಸೇರಿತ್ತು.[44] ಆಗಸ್ಟ್ 19ರಂದು ಶ್ರೀಮತಿ ಕಸ್ತೂರ ಬಾ ಮಹಿಳೆಯರ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಈ ಸಭೆಯಲ್ಲಿ ವಕೀಲ ಸುಂದರಂ ಅವರ ಪತ್ನಿ ತಮ್ಮಲ್ಲಿದ್ದ ಚಿನ್ನದ ಬಳೆ ದೇಣಿಗೆ ನೀಡಿದರೆ, ಒಬ್ಬ ಹುಡುಗಿ ತನ್ನ ಚಿನ್ನದ ಉಂಗುರ ಕಾಣಿಕೆ ನೀಡಿದಳು. ಖಾದಿಯ ಮಹತ್ವ, ಸ್ವದೇಶಿ ವಸ್ತುಗಳ ಮಹತ್ವಗಳನ್ನು ಗಾಂಧೀಜಿ ಎಲ್ಲಡೆ ಒತ್ತಿ ಹೇಳಿದರು ಇದರಿಂದಾಗಿ ಜಿಲ್ಲೆಯಲ್ಲಿ ಭಾರೀ ಜನ ಜಾಗೃತಿಮೂಡಿ ರಾಷ್ಟ್ರೀಯ ಹೋರಾಟದ ವಾತಾವರಣ ನಿರ್ಮಾಣವಾಯಿತು. 1928ರಲ್ಲಿ ಜಿಲ್ಲೆಯ ಬಿ.ಕೆ. ನರಸಿಂಹಮೂರ್ತಿ ಕಲ್ಕತ್ತಾ ಕಾಂಗ್ರೆಸ್ ಸಮ್ಮೇಳನಕ್ಕೆ ಹೋಗಿದ್ದರು. ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆಗೆ ಕಾಂಗ್ರೆಸ್ ಒತ್ತಾಯ ಮಾಡುತ್ತಿತ್ತು. 1930ರ ವೇಳೆಗೆ ಜಿಲ್ಲೆಯಲ್ಲಿ ಖಾದಿ ಭಂಡಾರ ಆರಂಭವಾಯಿತು. 1934ರಲ್ಲಿ ಅಜ್ಜಂಪುರದಲ್ಲಿ ಜಿಲ್ಲಾ ಬೋರ್ಡ್ ನೆರವಿನಿಂದ ಖಾದೀ ಉತ್ಪಾದನಾ ಕೇಂದ್ರ ತೆರೆದರು. ಬಂಗಾಳದ ಖ್ಯಾತ ದೇಶಭಕ್ತ ಮತ್ತು ವಿಜ್ಞಾನಿ ಡಾ. ಪ್ರಫುಲ್ಲ ಚಂದ್ರರಾಯ್ ಇದನ್ನು ಉದ್ಘಾಟಿಸಿದರು.[45] ಇದೇ ಅವಧಿಯಲ್ಲಿ ಚಿಕ್ಕಮಗಳೂರಿನಲ್ಲಿ ಖಾದೀ ಗ್ರಾಮೋದ್ಯೋಗ ಪ್ರದರ್ಶನ ದೊಡ್ಡ ಮಟ್ಟದಲ್ಲಿ ನಡೆಯಿತು. ಇದು ಜಿಲ್ಲೆಯ ಜನರಲ್ಲಿ ರಾಷ್ಟ್ರೀಯ ಜಾಗೃತಿ ಬೆಳೆಯಲು ನೆರವಾಯಿತು. ಉತ್ತರ ಕನ್ನಡದಿಂದ ಬಂದು ನೆಲಸಿದ ಗಣ್ಯ ಸ್ವಾತಂತ್ರ್ಯ ಹೋರಾಟಗಾರ ಗಣೇಶ ರಾಮ ಯಾಜಿ ಚಿಕ್ಕಮಗಳೂರಿನಲ್ಲಿ ಮಲೆನಾಡು ಪ್ರೆಸ್ ಮುದ್ರಣಾಲಯ ತೆರೆದು ಪತ್ರಿಕೆ ಆರಂಭಿಸಿದರು. ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ಭಾಗಗಳಲ್ಲಿ ಮಾಕೋನಹಳ್ಳಿ ಹುಚ್ಚೇಗೌಡ, ಡಿ.ಎಸ್. ಕೃಷ್ಣಪ್ಪಗೌಡ, ದಾರದಹಳ್ಳಿ ಬಿಳೀ ಗೌಡ, ದೇವವೃಂದದ ಎಚ್. ಬಿ. ಕೃಷ್ಣಗೌಡ, ಚಿಟ್ಟಗೆರೆ ವಿ.ಎಸ್. ರಾಮೇಗೌಡ, ಹಳಿಕೆ ಪಟೇಲ್ ಚನ್ನೇಗೌಡ, ಹಳಸೆ ಬೈರೇಗೌಡ ಇವರೆಲ್ಲ ಕ್ರೀಯಾಶೀಲ ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು. ಕಳಸದಲ್ಲಿನ ವ್ಯಾಪಾರಿಗಳು ಕಾಂಗ್ರೆಸ್‌ನ ಬೆಂಬಲಿಗರಾಗಿದ್ದರು. 1939ರಲ್ಲಿ ಸಿ.ವಿ. ಧ್ರುವ, ಎ.ಜಿ. ನಾರಾಯಣ ನಾಯಕ, ಮಾಕೋನಹಳ್ಳಿ ಹುಚ್ಚೇಗೌಡ ಮುಂತಾದವರ ನೇತೃತ್ವದಲ್ಲಿ ಪಾನ ಪ್ರತಿಬಂಧ, ವಿದೇಶಿ ವಸ್ತ್ರ ಬಹಿಷ್ಕಾರಗಳ ಬಗ್ಗೆ ಪಿಕೆಟಿಂಗ್ ನಡೆಸಿ ಬಂಧನಕ್ಕೆ ಒಳಗಾದರು. ಚಿಕ್ಕಮಗಳೂರಿನಲ್ಲಿ ರಾಷ್ಟ್ರೀಯ ಶಾಲೆಯನ್ನು ತೆರೆಯಲಾಯಿತು.[46] 1940ರಲ್ಲಿ ‘ಆಲ್ ಮೈಸೂರ್ ಕಾಂಗ್ರೆಸ್ ಕಮಿಟಿ’ ಸಭೆಯನ್ನು ಅಜ್ಜಂಪುರದಲ್ಲಿ ನಡೆಸಲು ನಿರ್ಣಯಿಸಲಾಯಿತು. ಅದರಂತೆ ಬೃಹತ್ ಪ್ರಮಾಣದಲ್ಲಿ ಚಪ್ಪರ ನಿರ್ಮಿಸಲಾಯಿತು ಇದನ್ನು ಗಮನಿಸಿದ ಸರ್ಕಾರ ಊರಿನ ಸುತ್ತ ಮೂರು ಮೈಲಿ ಫಾಸಲೆಯಲ್ಲಿ ಸಭೆ ನಡೆಸದಂತೆ ಪ್ರತಿಬಂಧ ಜಾರಿ ಮಾಡಿದರು. ಪೂರ್ವ ತಯಾರಿಯನ್ನು ನೋಡಲು ಬಂದ ಕೆ.ಟಿ. ಭಾಷ್ಯಂ ರವರನ್ನು ಬಂಧಿಸಲಾಯಿತು.

[44] ಸೂರ್ಯನಾಥ್ ಕಾಮತ್, ಅದೇ, ಪುಟ 169.

[45] ಸೂರ್ಯನಾಥ್ ಕಾಮತ್, ಚಿಕ್ಕಮಗಳೂರು ಡಿಸ್ಟ್ರಿಕ್ಟ್ ಗೆಜೆಟಿಯರ್, ಪುಟ 55.

[46] ಸೂರ್ಯನಾಥ್ ಕಾಮತ್, ಅದೇ, ಪುಟ 56.

ಅಜ್ಜಂಪುರದಿಂದ ಮೂರು ಮೈಲಿ ದೂರದ ಚನ್ನಾಪುರ ಗ್ರಾಮದಲ್ಲಿ ರಾತ್ರೋರಾತ್ರಿ ಚಪ್ಪರ ಹಾಕಿ 'ವಿಜಯನಗರ' ಎಂದು ಹೆಸರಿಟ್ಟು ಎಚ್.ಸಿ. ದಾಸಪ್ಪನವರ ಅಧ್ಯಕ್ಷತೆಯಲ್ಲಿ ಸಭೆಯನ್ನು ಯಶಸ್ವಿಯಾಗಿ ನಡೆಸಲಾಯಿತು. 108 ಜೋಡಿ ಎತ್ತುಗಳ ದೊಡ್ಡ ಮೆರವಣಿಗೆ ನಡೆಸಲಾಯಿತು. ಇದು ಜಿಲ್ಲೆಯ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ಒಂದು ಪ್ರಮುಖ ಘಟನೆಯಾಗಿದೆ.[47]

1942ರ 'ಕ್ವಿಟ್ ಇಂಡಿಯಾ ಚಳುವಳಿ'ಯ ಸಮಯದಲ್ಲಿ ಜಿಲ್ಲೆಯ ಗಣ್ಯ ಹೋರಾಟಗಾರರನ್ನು ಮುಂಚಿತವಾಗಿ ಬಂಧಿಸಿದರು. ಗಾಂಧೀಜಿಯ ಬಂಧನ ವಾರ್ತೆ ಆಗಸ್ಟ್ 9ರಂದು ತಿಳಿಯಲು ಆಗಸ್ಟ್ 11ಕ್ಕೆ ಚಿಕ್ಕಮಗಳೂರು, ಕಡೂರು, ಬೀರೂರು, ತರೀಕೆರೆ ಮುಂತಾದ ಪಟ್ಟಣಗಳಲ್ಲಿ ಹರತಾಳ ನಡೆಸಲಾಯಿತು. ಶಾಲೆಗಳನ್ನು ಮುಚ್ಚಲಾಯಿತು. ವಿದ್ಯಾರ್ಥಿಗಳು ಉತ್ಸಾಹದಿಂದ ಪ್ರತಿಭಟನೆಯಲ್ಲಿ ಪಾಲ್ಗೊಂಡರು. ಸರಕಾರದ ವಿರುದ್ಧ ಘೋಷಣೆ ಕೂಗಲಾಯಿತು. ಮೂಡಿಗೆರೆ, ಕೊಟ್ಟಿಗೆಹಾರ, ಕಳಸ, ಶೃಂಗೇರಿಗಳಲ್ಲಿ ನಿತ್ಯ ಮೆರವಣಿಗೆ ನಡೆಸಿದರು. ಮುಂದಿನ ದಿನಗಳಲ್ಲಿ ಪ್ರತಿಭಟನೆ ಕಾವು ಪಟ್ಟಣಗಳಲ್ಲಿ ಕಡಿಮೆಯಾದರೂ ಗ್ರಾಮಾಂತರದಲ್ಲಿ ಅದು ಮುಂದುವರೆದಿತ್ತು. ಮೂಡಿಗೆರೆ ರಸ್ತೆಯಲ್ಲಿ 10 ಮೈಲು ಅಂತರದವರೆಗೆ 4 ಟೆಲಿಗ್ರಾಫ್ ತಂತಿಯನ್ನು ಕತ್ತರಿಸಲಾಯಿತು. ಬಂಕೇನಹಳ್ಳಿ ಮತ್ತು ಫಲ್ಗುಣಿ ಗ್ರಾಮದ ಪಟೇಲರು ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದರಿಂದ ಅವರನ್ನು ಬಂಧಿಸಲಾಯಿತು. ನರಸೀಪುರ ಜೋಡಿ ಗ್ರಾಮದಲ್ಲಿ ಕೆಲವರು ಕಂದಾಯ ತೆರಲು ನಿರಾಕರಿಸಿದರು.[48]

1947ರಲ್ಲಿ 'ಮೈಸೂರು ಚಲೋ' ಚಳುವಳಿಯ ಸಂದರ್ಭದಲ್ಲಿ ಬೀರೂರು, ಅಜ್ಜಂಪುರ, ತರೀಕೆರೆ ಭಾಗಗಳಿಂದ ಜಾಥಾ ಬಂದ ಹೋರಾಟಗಾರರು ಚಿಕ್ಕಮಗಳೂರಿನ ಆಝಾದ್ ಪಾರ್ಕ್‌ನಲ್ಲಿ ಸುಮಾರು ಹತ್ತು ಸಾವಿರಕ್ಕೂ ಹೆಚ್ಚಿನ ಜನ ಸೇರಿ, ಅಣ್ಣಪ್ಪ ಶೆಟ್ಟರ ಅಧ್ಯಕ್ಷತೆಯಲ್ಲಿ ಸಭೆ ನಡೆಸಲಾಯಿತು. ಮರುದಿನ 50 ಜನರ ಜಾಥಾ ಬೇಲೂರಿಗೆ ಹೊರಡಲು ಅಲ್ಲಿ ಅಣ್ಣಪ್ಪ ಶೆಟ್ಟಿ, ಕೆ.ಟಿ. ಸತ್ಯನಾರಾಯಣ ಶೆಟ್ಟಿ, ಕೆ.ಆರ್. ಕೃಷ್ಣಮೂರ್ತಿ ಮುಂತಾದವರನ್ನು ಬಂಧಿಸಲಾಯಿತು.[49] ಮರುದಿನ ಬಾಗೆಮನೆ ದೇವೇಗೌಡರನ್ನು ಬಂಧಿಸಿ ಹಾಸನ ಜೈಲಿನಲ್ಲಿಡಲಾಯಿತು. ಹೀಗೆ ಮೈಸೂರು ಚಲೋ ಚಳುವಳಿಯಲ್ಲಿ ಭಾಗವಹಿಸಲು ಹೊರಟ ಜಿಲ್ಲೆಯ ಅನೇಕ ನಾಯಕರನ್ನು ಮಾರ್ಗದ ಬೇರೆ ಬೇರೆ ಸ್ಥಳಗಳಲ್ಲಿ ಬಂಧಿಸಲಾಯಿತು. ಮೈಸೂರು ಅರಮನೆ ಸತ್ಯಾಗ್ರಹ 42 ದಿನಗಳ ಕಾಲ ನಡೆಯಿತು. ಇದರ ನೇತೃತ್ವ ಕೆ.ಸಿ. ರೆಡ್ಡಿ ವಹಿಸಿದ್ದರು. ಜವಾಬ್ದಾರಿ ಸರ್ಕಾರಕ್ಕೆ ಬೇಡಿಕೆ ಇಟ್ಟು ತೀವ್ರ ಹೋರಾಟ

---

[47] ಸೂರ್ಯನಾಥ್ ಕಾಮತ್, ಚಿಕ್ಕಮಗಳೂರು ಜಿಲ್ಲೆಯಲ್ಲಿ ಸ್ವಾತಂತ್ರ್ಯ ಹೋರಾಟ, ಚಿಕ್ಕಮಗಳೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪುಟ 171.

[48] ಅದೇ, ಪುಟ 171.

[49] ಅದೇ, ಪುಟ 174.

ಹಮ್ಮಿಕೊಳ್ಳಲಾಯಿತು. ಕೊನೆಗೆ ಸತ್ಯಾಗ್ರಹಿಗಳಿಗೆ ಮಣಿದ ಜಯಚಾಮರಾಜ ಒಡೆಯರು ಮೈಸೂರು ಕಾಂಗ್ರೆಸ್ಸಿಗರೊಂದಿಗೆ ಒಪ್ಪಂದವೇರ್ಪಟ್ಟು ಮಹಾರಾಜರ ಆದೇಶದಂತೆ ಕೆ.ಸಿ. ರೆಡ್ಡಿ 24ನೇ ಅಕ್ಟೋಬರ್ 1947ರಲ್ಲಿ ವಿಜಯದಶಮಿಯಂದು ಜವಾಬ್ದಾರಿ ಸರ್ಕಾರ ರಚಿಸಿದರು.[50]

ಚಿಕ್ಕಮಗಳೂರು ಜಿಲ್ಲೆ ಸ್ವಾತಂತ್ರ್ಯ ಹೋರಾಟದಲ್ಲಿ ತನ್ನದೇ ಆದ ಶ್ರೇಷ್ಠವಾದ ಇತಿಹಾಸವನ್ನು ಹೊಂದುವುದರ ಮೂಲಕ ಕರ್ನಾಟಕ ಇತಿಹಾಸ ಪರಂಪರೆಗೆ ವಿಶಿಷ್ಟವಾದ ಕಾಣಿಕೆಯನ್ನು ನೀಡಿದೆ. ಈ ಮೂಲಕ ಗತಕಾಲದಲ್ಲಿ ಮತ್ತು ವರ್ತಮಾನ ಕಾಲದಲ್ಲಿ ವಿಶೇಷವಾದ ಸ್ಥಾನಮಾನವನ್ನು ಜಿಲ್ಲೆಯು ಪಡೆದುಕೊಂಡಿದೆ.

ಇತಿಹಾಸ ಕಥನ:

ಇತಿಹಾಸ ಇಂದು ಹೊಸ ಹೊಸ ಆಯಾಮಗಳಿಗೆ ತೆರೆದುಕೊಳ್ಳುತ್ತಿದೆ. ಆರಂಭದಲ್ಲಿ ರಾಜಕೀಯ ಇತಿಹಾಸಕ್ಕೆ ಹೆಚ್ಚು ಪ್ರಾಮುಖ್ಯತೆ ನೀಡಲಾಗಿತ್ತು. ಇತಿಹಾಸ ಎಂದರೆ ಅದು ಮಾನವನ ಇತಿಹಾಸವೇ ಆಗಿರುವುದರಿಂದ ಮಾನವನಿಗೆ ಸಂಬಂಧಪಟ್ಟ ಎಲ್ಲಾ ಕ್ಷೇತ್ರಗಳನ್ನು ಐತಿಹಾಸಿಕ ಹಿನ್ನಲೆಯಲ್ಲಿ ಅಧ್ಯಯನ ಮಾಡುವುದಾಗಿದೆ. ಮಾನವನಿಗೆ ಸಂಬಂಧಿಸಿದ ರಾಜಕೀಯ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಇತಿಹಾಸಗಳ ಅಧ್ಯಯನವು ಮಹತ್ವ ಪಡೆದುಕೊಳ್ಳುತ್ತಿದೆ. ಇತಿಹಾಸದಲ್ಲಿ ಆರ್ಥಿಕ ಇತಿಹಾಸವು ಒಂದು ಪ್ರತ್ಯೇಕ ಅಧ್ಯಯನ ಕ್ಷೇತ್ರವಾಗಿ ಬೆಳೆದು ಬಂದಿದೆ ಹಾಗೂ ಬೆಳೆಯುತ್ತಿದೆ. ಇತಿಹಾಸದ ವಿವಿಧ ಮುಖಗಳಲ್ಲಿ ಆರ್ಥಿಕ ಇತಿಹಾಸವು ಒಂದು ಪ್ರಮುಖ ಅಂಶವಾಗಿದೆ. ಇತಿಹಾಸದಲ್ಲಿ ಕೇವಲ ರಾಜ – ರಾಣಿಯರಿಗೆ, ಯುದ್ಧಗಳಿಗೆ ಮಾತ್ರ ಪ್ರಾಮುಖ್ಯತೆ ನೀಡದೆ ಸಾಮಾನ್ಯ ಜನರ ಜೀವನ, ಸಮಾಜದ ಆರ್ಥಿಕ ಚಟುವಟಿಕೆಗಳು, ಆರ್ಥಿಕ ಸ್ಥಿತಿಗತಿಗಳು ಅರಿತುಕೊಳ್ಳುವುದು ಅವಶ್ಯವಾಗಿದೆ. ರಾಜಕೀಯ ಇತಿಹಾಸದಂತೆ ಆರ್ಥಿಕ ಇತಿಹಾಸವು ಕೂಡ ಕುತೂಹಲಕಾರಿಯಾಗಿದೆ. ಮಾನವರಲ್ಲಿ ಆರ್ಥಿಕ ಚಟುವಟಿಕೆಗಳ ಪ್ರಾರಂಭ, ಬೆಳವಣಿಗೆ, ಸಮಸ್ಯೆಗಳು ಮಹತ್ವ ಹೊಂದಿದೆ. ಮಾನವ ನಾಗರೀಕತೆಯ (ಅಲೆಮಾರಿ ಜೀವನದಿಂದ ಒಂದು ಕಡೆ ನೆಲೆನಿಂತು ತನಗೆ ಅಗತ್ಯವಾದ ಆಹಾರ ಧಾನ್ಯಗಳನ್ನು ಬೆಳೆಯಲು ಪ್ರಾರಂಭಿಸಿದನು) ಬೆಳವಣಿಗೆಯು ಆರ್ಥಿಕ ಚಟುವಟಿಕೆಯನ್ನು ಕಂಡುಕೊಂಡಾಗಿನಿಂದ ಪ್ರಾರಂಭವಾಗಿ ವಿವಿಧ ಕಾಲಘಟ್ಟಗಳಲ್ಲಿ ಅನೇಕ ರೀತಿಯ ಬದಲಾವಣೆಗಳನ್ನು ಹೊಂದುತ್ತಾ ಬಂದಿದೆ. ಆರ್ಥಿಕ ಚಟುವಟಿಕೆಗಳಾದ ಕೃಷಿ, ಕೈಗಾರಿಕೆ, ವ್ಯಾಪಾರ, ಸಾರಿಗೆ–ಸಂಪರ್ಕ, ವಾಣಿಜ್ಯ, ಬ್ಯಾಂಕಿಂಗ್ ವ್ಯವಸ್ಥೆಗಳ ಬೆಳವಣಿಗೆಗಳ ಅಧ್ಯಯನದ ಮೂಲಕ ಆರ್ಥಿಕ ಇತಿಹಾಸವನ್ನು ಅರ್ಥಮಾಡಿ ಕೊಳ್ಳಬಹುದು.

[50]ಸೂರ್ಯನಾಥ್ ಕಾಮತ್, ಚಿಕ್ಕಮಗಳೂರು ಡಿಸ್ಟ್ರಿಕ್ಟ್ ಗೆಜೆಟಿಯರ್, ಪುಟ 57.

ಯುರೋಪಿನ ದಾರ್ಶನಿಕ, ಇತಿಹಾಸಕಾರ ಕಾರ್ಲ್‌ಮಾರ್ಕ್ಸ್ ತನ್ನ ಸಂಶೋಧನಾ ಅಧ್ಯಯನಗಳಿಂದ ಆರ್ಥಿಕ ಇತಿಹಾಸ ಅಧ್ಯಯನಕ್ಕೆ ಪ್ರಾಮುಖ್ಯತೆ ನೀಡಿದನು. ಭಾರತದಲ್ಲಿ ಮಾನವನ ಆರ್ಥಿಕ ಚಟುವಟಿಕೆಗಳು ಕ್ರಿ.ಪೂ. 6ನೇ ಶತಮಾನಗಳಿಗಿಂತ ಮುಂಚಿತವಾಗಿ ಪ್ರಾರಂಭವಾದ ಅಭಿಪ್ರಾಯವಿದೆ. ಅರಣ್ಯವಾಸಿಯಾಗಿದ್ದ ಮಾನವ ಕೃಷಿ ಜೀವನವನ್ನು ಕಂಡುಕೊಂಡು ಭತ್ತದ ಬೆಳೆ ಕ್ರಿ.ಪೂ. 8000 ವರ್ಷಗಳಿಗಿಂತ ಹಿಂದೆ ಭಾರತದಲ್ಲಿ ಪ್ರಾರಂಭವಾಯಿತೆಂದು ಎನ್.ಎಸ್.ವ್ಯಾಧಿಲಾನ್‌ರವರು ಅಭಿಪ್ರಾಯಪಟ್ಟಿದ್ದಾರೆ. ಭಾರತದಲ್ಲಿ ಆರ್ಥಿಕ ಇತಿಹಾಸದ ಅಧ್ಯಯನವು ಬ್ರಿಟಿಷ್ ಆಳ್ವಿಕೆಯ ಕಾಲದಲ್ಲಿ ಪ್ರಾಮುಖ್ಯತೆ ಪಡೆದುಕೊಂಡಿತ್ತು. ಪ್ರಸಿದ್ಧ ಇತಿಹಾಸಕಾರರಾದ ಆರ್.ಸಿ.ದತ್ತ, ಕೋಸಂಬಿ, ಫಣಿಕರ್ ಪ್ರಾರಂಭದಲ್ಲಿ ಭಾರತದ ಆರ್ಥಿಕ ಇತಿಹಾಸದ ಅಧ್ಯಯನಕ್ಕೆ ಕೊಡುಗೆ ನೀಡಿದರು. ನಂತರದಲ್ಲಿ ಆರ್.ಸಿ.ಚೌಧರಿ, ಇರ್ಫಾನ್ ಅಬೀಬ್, ಟಿ.ಆರ್.ಚೌಧರಿ, ಬಿಪಿನ್ ಚಂದ್ರ, ರೊಮಿಲಾ ಥಾಪರ್, ಮುಂತಾದ ಇತಿಹಾಸಕಾರರು ಸಾಮಾನ್ಯವರ್ಗದವರ ಇತಿಹಾಸಕ್ಕೆ ಮಹತ್ವ ನೀಡಿದ್ದರಿಂದ ಪ್ರಾಚೀನ ಕಾಲದ ಪ್ರಮುಖ ಉದ್ಯೋಗವಾಗಿದ್ದ ಕೃಷಿ, ಕೃಷಿ ನಿರತ ವರ್ಗಗಳು, ಅವರ ನಡುವಿನ ಸಂಬಂಧಗಳು, ಅವರ ಜೀವನ, ಅವರ ಸಂಸ್ಕೃತಿ, ಅವರ ಸಾಮಾಜಿಕ ರಚನೆಗಳಿಗೆ ಮಹತ್ವ ನೀಡಿ ಸಂಶೋಧನಾ ಗ್ರಂಥಗಳನ್ನು ರಚಿಸಿದ್ದಾರೆ. ಭಾರತದ ಆರ್ಥಿಕ ರಚನೆಯಲ್ಲಿ ಹಳ್ಳಿ/ಗ್ರಾಮದ ಮಹತ್ವ, ಕೃಷಿ, ಕೃಷಿ ವರ್ಗಗಳು, ಜಮೀನ್ದಾರರು, ಸಣ್ಣ ರೈತರು, ಕೃಷಿ ಕಾರ್ಮಿಕರು, ಕೃಷಿಗೆ ಪೂರಕವಾದ ಗ್ರಾಮೀಣ ವೃತ್ತಿಗಳು, ಅವರ ಸ್ಥಾನಮಾನ, ರಾಜ್ಯದ ಅದಾಯದ ಮೂಲವಾಗಿ ಕೃಷಿ, ಭೂಕಂದಾಯ ವ್ಯವಸ್ಥೆ, ವಿವಿಧ ರಾಜ ಮನೆತನಗಳ ಆಳ್ವಿಕೆ ಕಾಲದ ಕೃಷಿ ವರ್ಗಗಳು, ಸಾಮಾಜಿಕ ಹಾಗೂ ಆರ್ಥಿಕ ಜೀವನದ ಮೇಲೆ ಬೀರಿದ ಪ್ರಭಾವ, ಕೃಷಿಗೆ ನೀಡಿದ ಪ್ರಾಮುಖ್ಯತೆ ಮುಂತಾದ ಕೃಷಿಯ ವಿವಿಧ ಮುಖಗಳ ಜ್ಞಾನವನ್ನು ಹೊಂದುವಂತೆ ಮಾಡುವುದು ಆರ್ಥಿಕ ಇತಿಹಾಸದ ಉದ್ದೇಶವಾಗಿದೆ. ಭಾರತದ ಆರ್ಥಿಕ ವ್ಯವಸ್ಥೆಯ ಮೇಲೆ ಪ್ರಾದೇಶಿಕ ಆರ್ಥಿಕ ವ್ಯವಸ್ಥೆಯು ಪ್ರಭಾವ ಬೀರುತ್ತವೆ. ಕರ್ನಾಟಕ ರಾಜ್ಯವು ಆರ್ಥಿಕ ಚಟುವಟಿಕೆಯಲ್ಲಿ ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಪ್ರಮುಖ ಪಾತ್ರವಹಿಸುತ್ತಿದೆ. ಅದೇ ರೀತಿ ಚಿಕ್ಕಮಗಳೂರು ಜಿಲ್ಲೆ ಸಾಂಸ್ಕೃತಿಕವಾಗಿ, ರಾಜಕೀಯವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ, ಪ್ರಾಚೀನ ಕಾಲದಿಂದಲೂ ರಾಜ್ಯದ, ರಾಷ್ಟ್ರದ ಇತಿಹಾಸದಲ್ಲಿ ಪ್ರಮುಖ ಪಾತ್ರವಹಿಸುತ್ತಾ ಬಂದಿದೆ. ಕರ್ನಾಟಕ ರಾಜ್ಯದಲ್ಲಿ ಆರ್ಥಿಕ ಇತಿಹಾಸದ ಬೆಳವಣಿಗೆಗೆ ಸಂಬಂಧಿಸಿದಂತೆ ಸಂಶೋಧನಾ ಗ್ರಂಥಗಳು ಪ್ರಕಟವಾಗಿವೆ. ಕರ್ನಾಟಕದಲ್ಲಿ ಕೃಷಿ ಚಟುವಟಿಕೆಗಳು ಪ್ರಾಚೀನ ಕಾಲದಿಂದ ಪ್ರಸ್ತುತ ಕಾಲದವರೆಗೆ ಸಂಶೋಧನಾ ಅಧ್ಯಯನಗಳು ನಡೆದಿವೆ ಹಾಗೆಯೇ ಚಿಕ್ಕಮಗಳೂರು ಜಿಲ್ಲೆಗೆ ಸಂಬಂಧಿಸಿದಂತೆ ಕೃಷಿಯ ಹಿನ್ನೆಲೆಯಲ್ಲಿ ಸಂಶೋಧನಾ ಗ್ರಂಥಗಳು, ಲೇಖನಗಳು ಪ್ರಕಟಗೊಂಡಿದೆ. ಆದರೆ ಅವುಗಳು ಕೃಷಿ

ವ್ಯವಸ್ಥೆಯನ್ನು ವಿಶ್ಲೇಷಣೆಗೆ ಒಳಪಡಿಸಿರುವುದಿಲ್ಲ. ಕೇವಲ ಮಾಹಿತಿಯನ್ನು ಮಾತ್ರ ನೀಡುತ್ತದೆ. ಆಧುನಿಕ ಭಾರತದ (1799–1947) ಈ ಅವಧಿಯಲ್ಲಿ ಚಿಕ್ಕಮಗಳೂರು ಜಿಲ್ಲೆಗೆ ಸಂಬಂಧಿಸಿದಂತೆ ಎಲ್ಲಾ ಮಜಲುಗಳ (ಕೃಷಿ, ಕೃಷಿಕ ವರ್ಗಗಳು, ಅವರ ನಡುವಿನ ಸಂಬಂಧ, ಭೂಧಾನ, ಕಂದಾಯ ವ್ಯವಸ್ಥೆ, ಕೃಷಿ ವಾಣಿಜ್ಯೀಕರಣ ಇತ್ಯಾದಿ) ಬಗ್ಗೆ ಸಂಶೋಧನ ಗ್ರಂಥಗಳು ಪ್ರಕಟವಾಗಿಲ್ಲ. ಈ ಹಿನ್ನಲೆಯಲ್ಲಿ ನನ್ನ ಅಧ್ಯಯನವು ಕೃಷಿ, ಕೃಷಿಕ ವರ್ಗ, ಅವರ ಸಾಮಾಜಿಕ– ಆರ್ಥಿಕ ಜೀವನ ವಿಧಾನ, ಕಂದಾಯ ವ್ಯವಸ್ಥೆ ಮತ್ತು ಅದರ ಪರಿಣಾಮ, ಕೃಷಿಕ ವರ್ಗದವರ ಸಮಸ್ಯೆಗಳು ಮುಖ್ಯವಾಗಿಟ್ಟುಕೊಂಡು ಸಂಶೋಧನೆ ಮಾಡುವುದು ನನ್ನ ಉದ್ದೇಶವಾಗಿದೆ. ಇದನ್ನು ಸಮರ್ಥಿಸಲು ಈಗಾಗಲೇ ಪ್ರಕಟವಾಗಿರುವ ಗ್ರಂಥಗಳನ್ನು ಅವಲೋಕನ ಮಾಡುವುದು.

ಕೃಷಿ ಹಿನ್ನಲೆಯ ಅನೇಕ ಐತಿಹಾಸಿಕ ಗ್ರಂಥಗಳು ಈಗಾಗಲೇ ಸಾಕಷ್ಟು ಹೊರಬಂದಿದೆ. ವಿವಿಧ ಕಾಲಘಟ್ಟಗಳಲ್ಲಿ ಕೃಷಿಯ ಸ್ಥಿತಿಗತಿಗಳನ್ನು, ಬೆಳೆವಣಿಗೆಯನ್ನು ತಿಳಿಯಲು ವಿಫುಲವಾದ ಮಾಹಿತಿಗಳು ಲಭ್ಯವಿದೆ.

ಬೇಡೆನ್ ಪೊವೆಲ್, ಲ್ಯಾಂಡ್ ಸಿಸ್ಟಮ್ ಆಫ್ ಬ್ರಿಟಿಷ್ ಇಂಡಿಯಾ, ಸಂಪುಟ 1,2,3, ಕ್ಲಾರೆಂಡನ್ ಪ್ರೆಸ್, (ಆಕ್ಸ್‌ಫರ್ಡ್, 1892), 3 ಸಂಪುಟಗಳಲ್ಲಿ ಹೊರತಂದಿದ್ದು ಮೊದಲನೆಯ ಸಂಪುಟದಲ್ಲಿ ಬ್ರಿಟಿಷ್ ಆಳ್ವಿಕೆಯ ಭಾರತದಲ್ಲಿ ಕೃಷಿಗೆ ಸಂಬಂಧಿಸಿದಂತೆ ಭೂಮಿ–ಗೇಣಿದಾರರ ಸಂಬಂಧ, ಬ್ರಿಟಿಷ್ ನೀತಿಗಳು, ಅಧೀನತೆಯ ಸ್ವರೂಪ, ಗ್ರಾಮ, ಭೂದಾನ, ಕೃಷಿ, ಕಂದಾಯ ರಚನೆ, ಜಮೀನ್ದಾರರು ಮತ್ತು ರೈತರ ನಡುವಿನ ಸಂಬಂಧ, ಕೃಷಿ ಆಸ್ತಿಯ ಸ್ವರೂಪ, ಭೂಕಂದಾಯ ಪದ್ಧತಿಯ ಬಗ್ಗೆ ಸಾಮಾನ್ಯ ಅಭಿಪ್ರಾಯ, ಪ್ರಾಚೀನ ಕಾಲದಲ್ಲಿ ಭೂಕಂದಾಯ ಪದ್ಧತಿಯ ಇತಿಹಾಸ, ಬ್ರಿಟಿಷ್ ಪೂರ್ವದಲ್ಲಿ ಸ್ಥಳೀಯ ಮುಖಂಡರು, ಅವರ ಆಡಳಿತ ವ್ಯವಸ್ಥೆ ಕೃಷಿಗೆ ಸಂಬಂಧಿಸಿದಂತೆ, ಬ್ರಿಟಿಷರ ಅವಧಿಯಲ್ಲಿ ಕೃಷಿ ಪದ್ಧತಿ, ಬಂಗಾಳ ಪ್ರಾಂತ್ಯದಲ್ಲಿ ಕಂದಾಯ ಪದ್ದತಿ ಮತ್ತು ಅದರ ಪರಿಣಾಮಗಳು, ಬ್ರಿಟಿಷ್ ವಸಹತು ವಿಸ್ತರಣೆ ಮತ್ತು ಅದರ ಪರಿಣಾಮ, ಖಾಯಂ ಜಮೀನ್ದಾರಿ ಪದ್ಧತಿಯ ಬಗ್ಗೆ ಆಧುನಿಕ ವಿಚಾರಧಾರೆಗಳ ವಿಶ್ಲೇಷಣೆ, ಕಂದಾಯ ಇಲಾಖೆಯ ಕಾರ್ಯಗಳು, ಕಂದಾಯ ಪದ್ಧತಿಯ ಸುಧಾರಣೆ, ಜಮೀನ್ದಾರ ಮತ್ತು ಭೂ ಮಾಲೀಕರು, ಇತರೆ ರೈತ ವರ್ಗಗಳು, ಕಂದಾಯ ರಹಿತ ಭೂಮಿ, ಗೇಣಿದಾರರ ಬಗ್ಗೆ ವಿಶೇಷ ಅಧ್ಯಯನ, ಚಿತ್ತಗಾಂಗ್, ಒರಿಸ್ಸಾ, ಚತೀಯನಾಗಪುರ, ಸಂತಾಲ ಪರಗಣಗಳಲ್ಲಿ ಭೂ ಹಿಡುವಳಿ ಪದ್ಧತಿ, ಜಮೀನ್ದಾರ ಮತ್ತು ರೈತರ ನಡುವಿನ ಸಂಬಂಧ, ಕಂದಾಯ ಅಧಿಕಾರಿಗಳ ಕಾರ್ಯಗಳು ಮತ್ತು ಜವಾಬ್ದಾರಿಗಳು ಮುಂತಾದ ಅಂಶಗಳ ಬಗ್ಗೆ ಈ ಸಂಪುಟದಲ್ಲಿ ವಿಶ್ಲೇಷಿಸಿದ್ದಾರೆ. ಬೇಡೆನ್ ಪೊವೆಲ್ ರವರು ತನ್ನ 2 ನೇ ಸಂಪುಟದಲ್ಲಿ ಮಹಲ್ವಾರಿ ಪದ್ಧತಿಯನ್ನು

ವಿಶ್ಲೇಷಿಸಿದ್ದಾರೆ. ಇದರಲ್ಲಿ 2 ಭಾಗಗಳಿದ್ದು, ಮೊದಲನೆ ಭಾಗದಲ್ಲಿ ವಾಯುವ್ಯ ಭಾರತ ಮತ್ತು ಅವಾದ್ ಪ್ರಾಂತ್ಯಗಳಲ್ಲಿ ಭೂ ಹಿಡುವಳಿ ಪದ್ಧತಿಯನ್ನು ವಿಶ್ಲೇಷಿದ್ದಾರೆ. ಪ್ರಾರಂಭದ ಕಂದಾಯ ಪದ್ಧತಿಯ ಇತಿಹಾಸ (1801–1833), ಕಂದಾಯ ನಿಗದಿ ಕುರಿತ ನಿಯಮಾವಳಿಗಳು, ವಾದಗಳು, ಭೂ ದಾಖಲೆ ನಿರ್ವಹಣೆಗಳನ್ನು ಚರ್ಚಿಸಿದ್ದಾರೆ. ಎರಡನೇ ಭಾಗದಲ್ಲಿ ವಾಯುವ್ಯ ಪ್ರಾಂತ್ಯಗಳಲ್ಲದ ದಕ್ಷಿಣ ಮಿರ್ಜಾಪುರ, ಕುಮಾನ್ ಮತ್ತು ಗರ್‌ವಾಲ್, ತೆರಾಯ್, ಜಾನ್‌ಪುರ, ಬಾವರ್, ಅಜ್ಮೀರ್, ಮಾರ್‌ವಾಡ, ಮಧ್ಯಪ್ರಾಂತ್ಯಗಳು ಮತ್ತು ಪಂಜಾಬ್‌ಗಳಲ್ಲಿನ ಭೂ ಹಿಡುವಳಿ ಪದ್ಧತಿ, ಗ್ರಾಮ ಮತ್ತು ಕೃಷಿ ವರ್ಗ, ಭೂ ಕಂದಾಯ ರಹಿತ ಭೂಮಿ, ತಾಲ್ಲೂಕುದಾರರು, ಅವರ ಕಾರ್ಯಗಳು ಮುಂತಾದ ಅಂಶಗಳನ್ನು ಈ ಸಂಪುಟದಲ್ಲಿ ವಿಶ್ಲೇಷಿದ್ದಾರೆ. ಮೂರನೇ ಸಂಪುಟವು ರೈತವಾರಿ ಪದ್ಧತಿ ಮತ್ತು ಅದಕ್ಕೆ ಪೂರಕವಾದ ಭೂ ಹಿಡುವಳಿ ಪದ್ಧತಿಯನ್ನು ಚರ್ಚಿಸಿದ್ದಾರೆ. ಮುಖ್ಯವಾಗಿ ಮದ್ರಾಸ್, ಬಾಂಬೆ, ಸೌತ್ ಕೆನರಾ, ಮಲಬಾರ್, ನೀಲಗಿರಿ ಜಿಲ್ಲೆಗೆ ಸಂಬಂಧಿಸಿದ್ದಾಗಿದೆ. ಪ್ರಾರಂಭದ ಕಂದಾಯ ಆಡಳಿತ, ಆಧುನಿಕ ಕಾಲದ (ಬ್ರಿಟಿಷ್) ಭೂ ಹಿಡುವಳಿ ಪದ್ಧತಿ, ಕಂದಾಯ ಅಧಿಕಾರಿಗಳ ಕಾರ್ಯವಿಧಾನಗಳು, ಭೂಮಿ ಮತ್ತು ಕೃಷಿಕ, ಜಮೀನ್ದಾರ ಮತ್ತು ರೈತರು, ಭೂದಾನ ಆಧಾರಿತ ಕೃಷಿಕ ವರ್ಗ, ಬಂಜರು ಭೂಮಿಯ ಕಂದಾಯ ನೀತಿ ಈ ಅಂಶಗಳ ಬಗ್ಗೆ ವಿಶ್ಲೇಷಿಸಿದ್ದಾರೆ. ಎರಡನೇ ಭಾಗದಲ್ಲಿ ಬಾಂಬೆ ಮತ್ತು ಸಿಂಧ್ ಪ್ರಾಂತ್ಯಗಳಲ್ಲಿನ ಭೂ ಹಿಡುವಳಿ ಪದ್ಧತಿಯನ್ನು ವಿಶ್ಲೇಷಿದ್ದಾರೆ. ಭೂ ಮೋಜಣಿ, ಗ್ರಾಮಿಣ ಪ್ರದೇಶದಲ್ಲಿ ಕೃಷಿಕನ ಜೀವನ ವಿಧಾನ, ಕೃಷಿಗೆ ಸಂಬಂಧಿಸಿದಂತೆ ಆಧುನಿಕ ಪರಿಕಲ್ಪನೆಗಳು, ಜಮೀನ್ದಾರರ ಹಕ್ಕುಗಳು, ಕಂದಾಯ ಅಧಿಕಾರಿಗಳ ಕಾರ್ಯವಿಧಾನಗಳು ಚರ್ಚಿಸಿದ್ದಾರೆ. ಸಿಂದ್ ಪ್ರಾಂತ್ಯ, ಬೆರಾರ್, ಅಸ್ಸಾಂ, ಕೂರ್ಗ್, ಬರ್ಮ ಪ್ರಾಂತ್ಯಗಳಲ್ಲಿನ ಸಾಮಾನ್ಯ ಇತಿಹಾಸ, ಭೂ ಹಿಡುವಳಿ ಪದ್ಧತಿ, ಭೂ ಕಂದಾಯ ಆಡಳಿತ ಮುಂತಾದ ಅಂಶಗಳನ್ನು ವಿಶ್ಲೇಷಿದ್ದಾರೆ. ಒಟ್ಟಾರೆ ಬೇಡೆನ್ ಪೊವೆಲ್‌ರವರು ತಮ್ಮ ಮೂರು ಸಂಪುಟಗಳ, ಲ್ಯಾಂಡ್ ಸಿಸ್ಟಮ್ ಇನ್ ಬ್ರಿಟಿಷ್ ಇಂಡಿಯಾದಲ್ಲಿ ಬ್ರಿಟಿಷ್ ಆಳ್ವಿಕೆಯ ಪೂರ್ವದಲ್ಲಿದ್ದ ಭೂ ಹಿಡುವಳಿ ಪದ್ಧತಿ ಹಾಗೂ ಬ್ರಿಟಿಷ್ ಆಳ್ವಿಕೆ ಕಾಲದ ಭೂ ಹಿಡುವಳಿ ಪದ್ಧತಿ, ಅವುಗಳ ಪರಿಣಾಮಗಳನ್ನು ಭಾರತ ವಿವಿಧ ಪ್ರಾಂತ್ಯಗಳಿಗೆ ಸಂಬಂಧಿಸಿದಂತೆ ವಿಶ್ಲೇಷಿಸಿದ್ದು ನನ್ನ ಸಂಶೋಧನೆಗೆ ಸಮಗ್ರವಾದ ಮಾಹಿತಿಯನ್ನು ಒದಗಿಸಿಕೊಡುತ್ತದೆ. ಲ್ಯಾಂಡ್ ಸಿಸ್ಟಮ್ ಆಫ್ ಬ್ರಿಟಿಷ್ *ಇಂಡಿಯಾ 3* ಸಂಪುಟಗಳನ್ನು ಹೊಂದಿದ್ದು ಭಾರತದ ಬೇರೆ ಬೇರೆ ಪ್ರಾಂತ್ಯಗಳಲ್ಲಿ ಬ್ರಿಟಿಷರು ಜಾರಿಗೆ ತಂದ ಭೂ ಹಿಡುವಳಿ ಪದ್ಧತಿಗಳಾದ ಖಾಯಂ ಜಮೀನ್ದಾರಿ ಪದ್ಧತಿ, ಮಹಲ್ವಾರಿ ಪದ್ಧತಿ ಹಾಗೂ ರೈತವಾರಿ ಪದ್ಧತಿಗಳನ್ನು ವಿಶ್ಲೇಷಿಸಿದ್ದಾರೆ. ಕಂದಾಯ ನಿಗದಿ, ವಸೂಲಾತಿ, ಕೃಷಿಗೆ ನೀಡಿದ ಪ್ರೋತ್ಸಾಹ, ರೈತರು ಮತ್ತು ಸರ್ಕಾರ ಹಾಗೂ ಕಂದಾಯ ವಸೂಲಿ ಅಧಿಕಾರಿಗಳ ನಡುವಿನ ಸಂಬಂಧ, ಕಂದಾಯ ವಸೂಲಿ

ಅಧಿಕಾರಿಗಳು, ರೈತರ ಸ್ಥಿತಿಗಳು, ಭೂ ಹಿಡುವಳಿಯ ಪ್ರಮಾಣ ಗೇಣಿ ಪದ್ಧತಿ, ಭೂ ಒಡೆತನ, ಕೃಷಿ ಸಮುದಾಯದ ಸಾಮಾಜಿಕ-ಆರ್ಥಿಕ ಸ್ಥಿತಿಗಳು ಮುಂತಾದ ಅಂಶಗಳ ಬಗ್ಗೆ ವಿವರಣಾತ್ಮಕವಾಗಿ ವಿಶ್ಲೇಷಿಸಿದ್ದಾರೆ.

ಕೆ. ಪುಟ್ಟಸ್ವಾಮಯ್ಯ, *ಎಕಾನಾಮಿಕ್ ಡೆವೆಲೆಪ್‌ಮೆಂಟ್ ಆಫ್ ಕರ್ನಾಟಕ, ಎ ಟ್ರಿಟೀಸ್ ಇನ್ ಕಂಟಿನ್ಯುಟಿ ಆ್ಯಂಡ್ ಚೇಂಜ್,* ಸಂಪುಟ 1, ಮತ್ತು 2, ಆಕ್ಸ್‌ಫರ್ಡ್ ಮತ್ತು ಐ.ಬಿ.ಹೆಚ್ ಪಬ್ಲಿಷಿಂಗ್ ಕಂ (ನ್ಯೂಡೆಲ್ಲಿ, ಬಾಂಬೆ, ಕಲ್ಕತ್ತಾ 1980). ಈ ಸಂಶೋಧನಾ ಗ್ರಂಥದಲ್ಲಿ ಕರ್ನಾಟಕ ರಾಜ್ಯದ ಸಾಮಾಜಿಕ-ಆರ್ಥಿಕ ಬೆಳವಣಿಗೆ, ಕರ್ನಾಟಕದ ವಿವಿಧ ಭಾಗಗಳಲ್ಲಿನ ಕೃಷಿ ವ್ಯವಸ್ಥೆ, ವಾಯುಗುಣ, ಆರ್ಥಿಕ ಬೆಳವಣಿಗೆಗೆ ಅಗತ್ಯವಾದ ಅಂಶಗಳು, ಪ್ರಾದೇಶಿಕ ಯೋಜನೆ, ಲಭ್ಯವಿರುವ ಸಂಪನ್ಮೂಲಗಳು, ಆರ್ಥಿಕ ಯೋಜನೆಗಳಿಗೆ ನೀಡಿದ ಪ್ರಾಮುಖ್ಯತೆ, ಉತ್ಪಾದನೆ ಇವುಗಳಿಗೆ ಸಬಂಧಿಸಿದ ಪ್ರಯತ್ನಗಳು. ಭಾರತದ ಮತ್ತು ಕರ್ನಾಟಕದ ಆರ್ಥಿಕ ಬೆಳವಣಿಗೆಯಲ್ಲಿ ಕರ್ನಾಟಕ ರಾಜ್ಯದ ಪಾತ್ರ ಮತ್ತು ಸ್ವಾತಂತ್ರಕ್ಕಿಂತ ಪೂರ್ವದಲ್ಲಿ ಸರ್.ಎಮ್.ವಿಶ್ವೇಶ್ವರಯ್ಯ ಇವರು ದಿವಾನರಾಗಿದ್ದಾಗ ಭಾರತಕ್ಕೆ ಯೋಜಿತ ಆರ್ಥಿಕ ನೀತಿಯನ್ನು ಅಳವಡಿಸಿಕೊಳ್ಳುವುದರ ಮೂಲಕ ಭಾರತದ ಪುನರ್ ನಿರ್ಮಾಣಕ್ಕೆ ತಮ್ಮ ಕೊಡುಗೆಯನ್ನು ನೀಡಿದ್ದಾರೆ. ಕರ್ನಾಟಕ ರಾಜ್ಯದ ಪ್ರಾಕೃತಿಕ ಸಂಪತ್ತಿನ ವಿಶೇಷತೆಗಳು, ಭಾರತದಲ್ಲಿ ಕರ್ನಾಟಕದ ಸ್ಥಾನಮಾನ ಅರಿಯಲು ತಜ್ಞರುಗಳಾದ ಮಿ.ಸಿ.ಇ. ಪರ್ಸನ್, ಲೂಯಿಸ್ ರೈಸ್, ಮಹಾತ್ಮಗಾಂಧಿ, ಪ್ರೊ. ಗಾಲ್‌ಬ್ರೆತ್ ಅಭಿಪ್ರಾಯಗಳು ಮುಂತಾದವರ ಅಭಿಪ್ರಾಯಗಳು ಸಹಾಯಕವಾಗಿದೆ. ಎರಡು ಸಂಪುಟಗಳ ಈ ಗ್ರಂಥವು 25 ಅಧ್ಯಾಯಗಳನ್ನು ಒಳಗೊಂಡಿದ್ದು ಕರ್ನಾಟಕ ರಾಜ್ಯದ ಆರ್ಥಿಕ ಬೆಳವಣಿಗೆಯನ್ನು ಭೂತಕಾಲ-ವರ್ತಮಾನ ಕಾಲ-ಭವಿಷ್ಯತ್ತಿನ ಹಿನ್ನೆಲೆಗೆ ಚರ್ಚಿಸಿದ್ದಾರೆ. ಆರ್ಥಿಕ ಬೆಳವಣಿಗೆಯಲ್ಲಿ ಕೃಷಿಯ ಪಾತ್ರ, ಕೃಷಿ ಅಭಿವೃದ್ಧಿಗೆ ಕೈಗೊಂಡ ಕ್ರಮಗಳು, ಕೃಷಿ ಆಧಾರಿತ ಕೈಗಾರಿಕೆ, ರೇಷ್ಮೆ ಬೆಳೆ, ಬ್ಯಾಕಿಂಗ್ ವ್ಯವಸ್ಥೆಯ ಬೆಳವಣಿಗೆ, ಕೃಷಿ ಕೈಗಾರಿಕೆ ಬೆಳವಣಿಗೆ ಹಿನ್ನೆಲೆಯಲ್ಲಿ ಸಾರಿಗೆ ಸಂಪರ್ಕಗಳ ಅಭಿವೃದ್ಧಿ, ವ್ಯಾಪಾರ, ದೇಶ ಹಾಗೂ ರಾಜ್ಯದಲ್ಲಿ ಸಾಮಾಜಿಕ ಅಸಮಾನತೆ ಹೋಗಲಾಡಿಸಲು ಶಿಕ್ಷಣ, ಉದ್ಯೋಗ, ಕುಶಲ ಕಾರ್ಮಿಕರ ಸೃಷ್ಠಿ, ತಂತ್ರಜ್ಞಾನ, ಆರೋಗ್ಯ, ಪ್ರವಾಸ್ಯೋದ್ಯಮ, ಹಿಂದುಳಿದ ಜಾತಿ, ವರ್ಗ, ಬುಡಕಟ್ಟು, ಜನರ ಸಮಗ್ರ ಅಭಿವೃದ್ಧಿ ಇವುಗಳನ್ನು ವಿವರಿಸಿದ್ದಾರೆ. ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ದಿವಾನ ಪೂರ್ಣಯ್ಯನವರು ವ್ಯವಸ್ಥಿತವಾದ ಕಂದಾಯ ಪದ್ಧತಿಯನ್ನು ಜಾರಿ, ಕಂದಾಯ ನಿಗದಿ, ಕೃಷಿ ಅಭಿವೃದ್ಧಿಗೆ ಕೆರೆ ಕಟ್ಟೆಗಳ ದುರಸ್ತಿ, ರಸ್ತೆ, ಸೇತುವೆಗಳ ನಿರ್ಮಾಣ ಅಂಶಗಳನ್ನು ಚರ್ಚಿಸಿದ್ದಾರೆ. ಈ ಕಾಲದ ಕೃಷಿ ವ್ಯವಸ್ಥೆಯ ಬಗ್ಗೆ ಬ್ರಿಟಿಷ್ ಜನರಲ್ ಆರ್ಥರ್ ವೆಲ್ಲೆಸ್ಲಿ ಮತ್ತು ಮಾರ್ಕ್ವಿಸ್ ವೆಲ್ಲೆಸ್ಲಿ ಮೈಸೂರು ಸಂಸ್ಥಾನವು ಅಳವಡಿಸಿದ ಕಂದಾಯ ಪದ್ಧತಿ ಇತರೆ ಭಾರತದ

ಸಂಸ್ಥಾನಗಳಿಗಿಂತ ಉತ್ತಮವಾದುದು ಎನ್ನುವ ಅಭಿಪ್ರಾಯ ವ್ಯಕ್ತಪಡಿಸಿರುವ ಅಂಸವನ್ನು ಉಲ್ಲೇಖಿಸಿದ್ದಾರೆ. ದಿವಾನ ಪೂರ್ಣಯ್ಯನವರ ಅಧಿಕಾರವಧಿಯಲ್ಲಿ ಕೃಷಿ ಅಭಿವೃದ್ಧಿಗಾಗಿ ಖರ್ಚುಮಾಡಿದ ಹಣದ ಪ್ರಮಾಣವನ್ನು ಅಂಕಿ–ಅಂಶಗಳ ಮೂಲಕ ನೀಡಲಾಗಿದ್ದು ಆ ಕಾಲದ ಕೃಷಿ ಬೆಳವಣಿಗೆಯ ವಿವರಗಳನ್ನು ಒಳಗೊಂಡಿದೆ. ಹಾಗೆಯೆ ಬ್ರಿಟಿಷ್ ನೇರ ಆಡಳಿತ ಇದ್ದಾಗ ಬೊರಿಂಗ್ ಮತ್ತು ಮಾರ್ಕ್ ಕಬ್ಬನ್ನರ ಕೃಷಿ ಬೆಳವಣಿಗೆಗೆ ಕೈಗೊಂಡ ಕ್ರಮಗಳು, ಅನುಸರಿಸಿದ ಕಂದಾಯ ನೀತಿ, ಆ ನಂತರದ ಒಡೆಯರ ಕಾಲದ ಕೃಷಿ ಬೆಳವಣಿಗೆ ಅಂಕಿ–ಅಂಶಗಳ ಆಧಾರದಲ್ಲಿ ವಿಶ್ಲೇಷಿಸಲಾಗಿದೆ. ಜೊತೆಗೆ ಚಿಕ್ಕಮಗಳೂರು ಜಿಲ್ಲೆಯ ಕೃಷಿಯ ವ್ಯವಸ್ಥೆಯನ್ನು ತಿಳಿದುಕೊಳ್ಳಲು ಸಹಾಯಕವಾಗಿದೆ. ನಾಲ್ಕನೆ ಅಧ್ಯಾಯದಲ್ಲಿ ಸ್ವಾತಂತ್ರ ನಂತರದ ಕರ್ನಾಟಕದಲ್ಲಿ ಕೃಷಿಯ ಬೆಳವಣಿಗೆ ಬಗ್ಗೆ ಸಮಗ್ರ ಮಾಹಿತಿಯನ್ನು ವಿಮರ್ಶಿಸಿದ್ದಾರೆ.

ಇರ್ಫಾನ್ ಹಬೀಬ್, *ದಿ ಅಗ್ರೇರಿಯನ್ ಸಿಸ್ಟಮ್ ಆಫ್ ಮೊಗಲ್ ಇಂಡಿಯ, 1556–1707, ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್ಸ್ (1963, 1999, 2000,2010 ನ್ಯೂ ಡೆಲ್ಲಿ),* ಈ ಗ್ರಂಥದಲ್ಲಿ ಇರ್ಫಾನ್ ಹಭೀಬ್‌ರವರು ಭೂ ಹಿಡುವಳಿ ಜೊತೆಗೆ ಕೃಷಿ ಆರ್ಥಿಕತೆ ಮತ್ತು ಸಾಮಾಜಿಕ ರಚನೆಯನ್ನು ಚರ್ಚಿಸಿದ್ದಾರೆ. ಅಕ್ಬರನು ಅಧಿಕಾರಕ್ಕೆ ಬಂದಾಗಿನಿಂದ ಔರಂಗಜೇಬನ ಮರಣದ ವರೆಗಿನ ಸಂಪೂರ್ಣ ಮಾಹಿತಿಯನ್ನು ನೀಡುತ್ತದೆ. ಅಕ್ಬರನ ಆಳ್ವಿಕೆಗೆ ಒಳಪಟ್ಟ ಪ್ರದೇಶಗಳಾದ ಪಾಕಿಸ್ತಾನ, ಬಾಂಗ್ಲಾದೇಶ, ಡೆಕ್ಕನ್, ಬಿರಾರ್, ಖಾನ್ದೇಶ, ಅಹಮದ್ ನಗರ ಮತ್ತು ಬೀದರ್ ದಕ್ಷಿಣ ರಾಜ್ಯಗಳಾದ ಬಿಜಾಪುರ, ಗೋಲ್ಕಂಡ, ಕರ್ನಾಟಕ, ಕೇರಳಗಳಿಗೆ ಸಂಬಂಧಿಸಿದಂತೆ ವಿವರಿಸಲಾಗಿದೆ. ಮುಖ್ಯವಾಗಿ ಈ ಗ್ರಂಥದಲ್ಲಿ ಎರಡು ವಿಷಯಗಳಿಗೆ ಪ್ರಾಮುಖ್ಯತೆ ನೀಡಲಾಗಿದೆ. ಮೊದಲನೆಯದಾಗಿ ಕಾಲಾವಧಿ ಎರಡನೆಯದಾಗಿ ಆಳ್ವಿಕೆ ಪ್ರದೇಶಗಳಿಗೆ ಆದ್ಯತೆ ನೀಡಲಾಗಿದೆ. ಈ ಸಂಶೋಧನ ಕೃತಿಯಲ್ಲಿ ಕೃಷಿಯ ವಿಸ್ತರಣೆ, ಕೃಷಿಯ ಅರ್ಥ, ನೀರಾವರಿ ಮೂಲಗಳು, ಕೃಷಿ ಬೆಳವಣಿಗೆ, ಕೃಷಿ ಉತ್ಪಾದನೆ, ಕೃಷಿ ಸಂಬಂಧಿತ ಕೈಗಾರಿಕೆ, ವ್ಯಾಪಾರ (ದೂರ ಪ್ರದೇಶ, ಸ್ಥಳೀಯ) ಮಾರುಕಟ್ಟೆ ವ್ಯವಸ್ಥೆ, ಆ ಕಾಲದ ಸಾಮಾನ್ಯ ನಾಗರೀಕ ಜೀವನ, ಆಹಾರ ಪದ್ಧತಿ, ಬಡವರ್ಗದ ಜನರು ಬಳಸುತ್ತಿದ್ದ ಕನಿಷ್ಠ ಮಟ್ಟದ ಆಹಾರ ಧಾನ್ಯಗಳು (ಬೇರೆ ಬೇರೆ ಪ್ರದೇಶಗಳಲ್ಲಿ), ಆರ್ಥಿಕ ಸ್ಥಿತಿಗತಿಗಳು, ಕೃಷಿ ವರ್ಗದ ಸಾಮಾನ್ಯ ಜನರ ಬಳಕೆಯ ಆಭರಣಗಳು, ಹಬ್ಬಗಳು, ಮದುವೆ, ದೇವರ ಬಗೆಗಿನ ಭಾವನೆ ಮುಂತಾದ ಅಂಶಗಳನ್ನು ವಿಶ್ಲೇಷಿಸಿದ್ದಾರೆ. ಕೃಷಿ, ರೈತರು ಮತ್ತು ಗ್ರಾಮೀಣ ಸಮುದಾಯ, ಆಸ್ತಿ, ರೈತರು ಮತ್ತು ಭೂಮಿ, ರೈತರು ಮತ್ತು ಕೃಷಿ ಕಾರ್ಮಿಕರು, ಗ್ರಾಮೀಣ ಸಮುದಾಯಗಳು, ಗ್ರಾಮಾಧಿಕಾರಿಗಳು (ಮಕ್ದಮ್, ಪಟೇಲ), ಪಟ್ವಾರಿ (ಲೆಕ್ಕಿಗ), ಜಮೀನ್ದಾರರು, ಜಮೀನ್ದಾರರ ಹಕ್ಕುಗಳು, ಜಮೀನ್ದಾರರ ವರ್ಗಗಳ ಪ್ರಾಬಲ್ಯತೆ, ಬ್ರಿಟಿಷ್

ಮತ್ತು ಜಮೀನ್ದಾರರ ನಡುವೆ ಸಂಬಂಧಗಳನ್ನು ವಿಶ್ಲೇಷಿಸಿದ್ದಾರೆ. ಸ್ವತಂತ್ರ ರಾಜರು, ರಾಣ, ರಾವೋಸ್, ರಾವತ್, ಚೌಧರಿ, ದೇಶ್‌ಮುಖ್ ಮುಂತಾದ ನಾಯಕರುಗಳ ಬಗ್ಗೆ ವಿಶ್ಲೇಷಿಸಲಾಗಿದೆ. ಭೂ ಕಂದಾಯ ಬೇಡಿಕೆಯ ಪ್ರಮಾಣ, ಕಂದಾಯ ನಿಗದಿ ವಿಧಾನ, ಮೂಲ ಕಂದಾಯ ಪದ್ಧತಿ, ಕಂದಾಯ ಸಲ್ಲಿಕೆ ವಿಧಾನ, ಕಂದಾಯ ವಸೂಲಿ ವಿಧಾನ, ಕೃಷಿ ಪರಿಹಾರ, ಕೃಷಿ ಬೆಳವಣಿಗೆ ಮುಂತಾದ ಅಂಶಗಳ ಬಗ್ಗೆ ಸಮಗ್ರ ಮಾಹಿತಿಯನ್ನು ಒಳಗೊಂಡಿದೆ.

ಥಪನ್ ರಾಯ್ ಚೌಧರಿ, ಇರ್ಫಾನ್ ಹಬೀಬ್, *ದಿ ಕೇಂಬ್ರಿಡ್ಜ್ ಎಕಾನಾಮಿಕ್ ಹಿಸ್ಟರಿ ಆಫ್ ಇಂಡಿಯಾ, ಸಂಪುಟ–1, ಕ್ರಿ.ಶ.1200–ಕ್ರಿ.ಶ.1750, ಕೇಂಬ್ರಿಡ್ಜ್ ಯುನಿವರ್ಸಿಟಿ ಪ್ರೆಸ್, (ಡೆಲ್ಲಿ 1982),* ಈ ಗ್ರಂಥದಲ್ಲಿ ಇರ್ಫಾನ್ ಹಬೀಬ್, ಬರ್ಟನ್ ಸ್ಟೈನ್, ಸೈಮನ್ ಡಿಗ್ಬಿ, ಎಚ್.ಪ್ರಕಜವ, ಎಲ್.ಬಿ. ಅಲೀವ್, ಕೆ.ಎನ್.ಚೌಧರಿ, ಎ.ದಾಸ್‌ಗುಪ್ತ, ಗವೀನ್ ಆರ್.ಜಿ.ಹಮ್ಬ್ಲೆ ಮುಂತಾದ ಇತಿಹಾಸಕಾರರ ಸಂಶೋಧನಾ ಬರಹಗಳು ಒಳಗೊಂಡಿದೆ. ಭಾರತದ ಆರ್ಥಿಕ ಇತಿಹಾಸಕ್ಕೆ ಸಂಬಂಧಿಸಿದಂತೆ ಭಾರತದ ಭೌಗೋಳಿಕ ಹಿನ್ನಲೆ, ಭಾರತದ ಪ್ರಾರಂಭದ ಆರ್ಥಿಕ ಇತಿಹಾಸ, ದಕ್ಷಿಣ ಭಾರತ, ಕ್ರಿ.ಶ. 1200 ಕ್ಕಿಂತ ಪೂರ್ವದಲ್ಲಿ ಭಾರತದ ಆರ್ಥಿಕತೆ, ಉತ್ತರ ಭಾರತ, ದಕ್ಷಿಣ ಭಾರತ, ಮಹಾರಾಷ್ಟ್ರ, ಅಸ್ಸಾಂ, ವಾಯುವ್ಯ ಭಾರತಗಳಿಗೆ ಸಂಬಂಧಿಸಿದಂತೆ ವಿವರವಾಗಿ ವಿಶ್ಲೇಷಿಸಲಾಗಿದೆ. ಈ ಗ್ರಂಥ 2 ಭಾಗಗಳನ್ನು ಒಳಗೊಂಡಿದ್ದು ಒಂದನೇ ಭಾಗ ಕ್ರಿ.ಶ. 1200 ರಿಂದ ಕ್ರಿ.ಶ. 1500 ರಲ್ಲಿ ದೆಹಲಿ ಸುಲ್ತಾನರ ಕಾಲದ ಉತ್ತರ ಭಾರತದ ಆರ್ಥಿಕ ಸ್ಥಿತಿ, ಕೃಷಿಯ ಆರ್ಥಿಕತೆ, ಹಣಕಾಸಿನ ಪದ್ಧತಿ, ವಿಜಯನಗರ ಆಳ್ವಿಕೆ ಕಾಲ ಕ್ರಿ.ಶ. 1350 ರಿಂದ 1564 ರಲ್ಲಿ ಆರ್ಥಿಕ ಸ್ಥಿತಿ, ಭಾರತದಲ್ಲಿ ಸಮುದ್ರ ವ್ಯಾಪಾರ, ಅಂಶಗಳನ್ನು ವಿವರವಾಗಿ ವಿಶ್ಲೇಷಿಸಲಾಗಿದೆ. 2ನೇ ಭಾಗದಲ್ಲಿ ಕ್ರಿ.ಶ. 1500–1750 ರ ವರೆಗಿನ ಕಾಲದ ಉತ್ತರ ಭಾರತ, ದಕ್ಷಿಣ ಭಾರತ, ಮಹಾರಾಷ್ಟ್ರ, ಒರಿಸ್ಸಾ, ವಾಯುವ್ಯ ಭಾರತಗಳ ಆರ್ಥಿಕತೆಯನ್ನು ವಿಶ್ಲೇಷಿಸಲಾಗಿದೆ. ಇದರಲ್ಲಿ ಮುಖ್ಯವಾಗಿ ಜನಸಂಖ್ಯೆ, ಮೊಗಲರ ಕಾಲಕ್ಕೆ ಸಂಬಂಧಿಸಿದಂತೆ ರಾಜ್ಯಗಳ ಆರ್ಥಿಕತೆ, ಮೊಗಲರ ಕಾಲದ ಕೃಷಿ ಉತ್ಪಾದನೆ, ಕೃಷಿ ಸಂಬಂಧಗಳು ಮತ್ತು ಭೂ ಕಂದಾಯ ವ್ಯವಸ್ಥೆ ಉತ್ತರ ಭಾರತ ಮತ್ತು ದಕ್ಷಿಣ ಭಾರತದಲ್ಲಿ, ಕೃಷಿಯೇತರ ಉತ್ಪಾದನೆಗಳು, ಮೊಘಲರ ಆಳ್ವಿಕೆ ಪ್ರದೇಶಗಳು, ಮಹಾರಾಷ್ಟ್ರ, ದಕ್ಷಿಣ ಭಾರತದಲ್ಲಿ ದೇಶೀಯ ವ್ಯಾಪಾರ, ಹಣಕಾಸಿನ ವ್ಯವಸ್ಥೆ ಮತ್ತು ಬೆಲೆಗಳು, ವಿದೇಶಿ ವ್ಯಾಪಾರ (ಮುಖ್ಯವಾಗಿ ಯುರೋಪಿನೊಂದಿಗೆ), ಭಾರತದ ವ್ಯಾಪಾರಿಗಳು ಮತ್ತು ಹಿಂದೂ ಮಹಾಸಾಗರದಲ್ಲಿನ ವ್ಯಾಪಾರ, ನಗರ ಮತ್ತು ಪಟ್ಟಣ ಮೊಘಲ್ ಪ್ರದೇಶಗಳಲ್ಲಿ ಮತ್ತು ದಕ್ಷಿಣ ಭಾರತದಲ್ಲಿ, ಮೊಘಲ್ ಆಳ್ವಿಕೆ ಪ್ರದೇಶಗಳಲ್ಲಿ ಮತ್ತು ಮಹಾರಾಷ್ಟ್ರ ಮತ್ತು ದಖನ್‌ನಲ್ಲಿ ಜನರ ಜೀವನ ಮಟ್ಟಗಳನ್ನು ಸಮಗ್ರವಾಗಿ ಚರ್ಚಿಸಲಾಗಿದೆ.

ಪೀಠಿಕೆಯಲ್ಲಿ ಇರ್ಫಾನ್ ಹಬೀಬ್‌ರವರು ಭಾರತದ ಭೌಗೋಳಿಕ ಹಿನ್ನೆಲೆಯಲ್ಲಿ ಪಾಕಿಸ್ಥಾನ, ಭಾರತ ಮತ್ತು ಬಾಂಗ್ಲಾ ದೇಶಗಳನ್ನೊಳಗೊಂಡ ಸಮಸ್ತ ಭಾರತದ ಭೌಗೋಳಿಕ ಅಂಶಗಳನ್ನು ಚರ್ಚಿಸಿದ್ದಾರೆ. ಭಾರತದ ಭೌಗೋಳಿಕ ಪರಿಸ್ಥಿತಿ, ಸನ್ನಿವೇಶ, ಪ್ರಾಕೃತಿಕ ವೈವಿಧ್ಯತೆಗಳು, ನದಿಗಳು, ಅರಣ್ಯಗಳು, ಜನಸಂಖ್ಯೆಯ ಹಂಚಿಕೆ, ನಗರಗಳ ಬೆಳವಣಿಗೆ, ಆಡಳಿತ, ರಸ್ತೆಗಳು ಮತ್ತು ಕೋಟೆಗಳು, ಮಳೆಯ ಪ್ರಮಾಣ ಮತ್ತು ಹಂಚಿಕೆ ಮುಂತಾದ ಅಂಶಗಳು ಚರ್ಚಿಸಲಾಗಿದೆ. ಪೀಠಿಕೆಯ 2ನೇ ಅಧ್ಯಾಯದಲ್ಲಿ ದಕ್ಷಿಣ ಭಾರತಕ್ಕೆ ಸಂಬಂಧಿಸಿದಂತೆ ಪ್ರಾರಂಭಿಕ ಇತಿಹಾಸವನ್ನು ಮತ್ತು ಕೆಲವು ಸಾಮಾನ್ಯ ಅಂಶಗಳನ್ನೂ ವಿವರಿಸಿದ್ದಾರೆ. ದಕ್ಷಿಣ ಭಾರತದ ವ್ಯಾಪ್ತಿ, ಒಳಗೊಂಡ ಪ್ರಾಂತ್ಯಗಳು, ಆಳಿದ ರಾಜಮನೆತನಗಳು, ಸಮುದ್ರ ವ್ಯಾಪಾರ, ಆಗ್ನೇಯ ಏಷ್ಯಾ ರಾಷ್ಟ್ರಗಳೊಂದಿಗಿನ ವ್ಯಾಪಾರ ಸಂಬಂಧ, ಅರಬ್ಬರೊಡನೆ ವ್ಯಾಪಾರ ಸಂಬಂಧ, ಮೈಸೂರು ಅಥವಾ ಕರ್ನಾಟಕ ರಾಜ್ಯದ ಭೌಗೋಳಿಕ ಸನ್ನಿವೇಶ, ಮುಖ್ಯ ಜಿಲ್ಲೆಗಳು, ಮಳೆಯ ಪ್ರಮಾಣ, ಕೃಷಿ ಬೆಳೆಗಳು, ಕ್ರಿ.ಶ. 1200 ರಿಂದ 1350 ರ ಅವಧಿಯಲ್ಲಿನ ಸಾಮಾಜಿಕ ಸಂಘಟನೆ, ವಿವಿಧ ವರ್ಗಗಳು, ವರ್ಗಗಳ ನಡುವಿನ ಸಂಬಂಧ, ದಕ್ಷಿಣ ಭಾರತದಲ್ಲಿ ನಗರಗಳ ಬೆಳವಣಿಗೆ (ನಾಡು, ಮಹಾನಾಡು, ಪೆರಿಯನಾಡು) ಜನಸಂಖ್ಯೆ, ಗ್ರಾಮೀಣ ಪ್ರದೇಶ, ವ್ಯಾಪಾರ ಮುಂತಾದ ಅಂಶಗಳು ವಿವರಿಸಲಾಗಿದೆ. ಅಧ್ಯಾಯ 3ರಲ್ಲಿ ದೆಹಲಿ ಸುಲ್ತಾನರ ಕಾಲದ ಆರ್ಥಿಕತೆಯನ್ನು ವಿಶ್ಲೇಷಿಸಲಾಗಿದೆ. ಕೃಷಿ ಆರ್ಥಿಕತೆಯಲ್ಲಿ ಕೃಷಿ ಉತ್ಪನ್ನಗಳು, ಕಾರೀಫ್ ಬೆಳೆಗಳು, ರಬಿ ಬೆಳೆಗಳು, ಕೃಷಿ ಭೂ ವಿಧಗಳು, ಗ್ರಾಮೀಣ ಸಮುದಾಯಗಳು (ಮಲ್ಲಿಕ್, ಮುಕ್ದಮ್, ಚೌದರಿ, ಜಮೀನ್ದಾರರು, ಕೋಟ), ತೆರಿಗೆ ವಿಧಗಳು (ಖರಜ್, ಜೆಜಿಯ, ಕುನ್‌ಕುಟ್, ಖಲಿಜ), ನೀರಾವರಿ ಮೂಲಗಳು, ಭೂದಾನ (ಮುಕ್ತಿ, ಇಕ್ತಾ, ವಕ್ಫ್, ತಮ್‌ಲಿಕ್), ವಾಣಿಜ್ಯ ಬೆಳೆಗಳು ಮತ್ತು ಕೂಲಿ ಪ್ರಮಾಣ, ಗುಲಾಮಿ ಪದ್ಧತಿ, ಹಣಕಾಸಿನ ಪದ್ಧತಿ ಮುಂತಾದ ಅಂಶಗಳನ್ನು ವಿವರಿಸಲಾಗಿದೆ. ವಿಜಯನಗರ 1350–1564 ರ ವರೆಗಿನ ಕಾಲದ ಆರ್ಥಿಕ ಇತಿಹಾಸವನ್ನು ಬರ್ಟನ್ ಸ್ಟೈನ್ ರವರು ಚರ್ಚಿಸಿದ್ದಾರೆ. ಮುಖ್ಯವಾಗಿ ನಾಯಂಕರ ಪದ್ಧತಿ, ಅಮರನಾಯಕ, ಅಮರಾ, ಇತರ ದೇಶಗಳ ಪದ್ಧತಿಯೊಡನೆ ಹೋಲಿಕೆ, ಕೃಷಿ ವ್ಯವಸ್ಥೆ, ಭೂ ದಾನಗಳ ವಿಧಗಳು, ತೆರಿಗೆ ರಹಿತ ಭೂಮಿ, ದೇವದಾನ ಇತ್ಯಾದಿ. ಅಧ್ಯಾಯ 7 ರಲ್ಲಿ ಮೊಘಲರ ಕಾಲದ ಆರ್ಥಿಕತೆ ವಿಶ್ಲೇಷಿಸಲಾಗಿದೆ. ಅದೇ ಅಧ್ಯಾಯದಲ್ಲಿ ದಖ್ಖನ್ ಆರ್ಥಿಕತೆಯ ವಿಶ್ಲೇಷಣೆ ಒಳಗೊಂಡಿದೆ. 8ನೇ ಅಧ್ಯಾಯದಲ್ಲಿ ಕೃಷಿ ಉತ್ಪಾದನೆಯ ಪದ್ಧತಿ ಚರ್ಚಿಸಲಾಗಿದೆ. ಮೊಘಲರ ಪ್ರದೇಶಗಳಲ್ಲಿ, ಬೇರೆ ಬೇರೆ ಪ್ರಾಂತ್ಯಗಳಲ್ಲಿ ಪ್ರಮುಖ ಆಹಾರ ಧಾನ್ಯಗಳ ಉತ್ಪಾದನೆ, ವಾಣಿಜ್ಯ ಬೆಳೆಗಳ ಅಂಕಿ–ಅಂಶಗಳೊಂದಿಗೆ ಚರ್ಚಿಸಲಾಗಿದೆ. ದಕ್ಷಿಣ ಭಾರತದ ರಾಜ್ಯಗಳಲ್ಲಿನ ಬೆಳೆಗಳ ಉತ್ಪಾದನೆ ಮುಖ್ಯವಾಗಿ ಭತ್ತ. ಅಧ್ಯಾಯ–9 ರಲ್ಲಿ ಕೃಷಿ ಸಮುದಾಯಗಳ ಸಂಬಂಧ, ಭೂ ಕಂದಾಯ ವ್ಯವಸ್ಥೆಯನ್ನು

ಚರ್ಚಿಸಲಾಗಿದೆ. ಜಮೀನ್ದಾರರು, ತಾಲ್ಲೂಕುದಾರರು, ಮುಕ್ದಮ್, ಜಾಗೀರ್‌ದಾರ್, ಖಲಿಸ, ಮನ್ಸ್‌ಬ್ ಮುಂತಾದವರ ಬಗ್ಗೆ, ಗ್ರಾಮೀಣ ಸಮುದಾಯ, ದಕ್ಷಿಣ ಭಾರತದ ಕೃಷಿ ಸಮುದಾಯಗಳು, ಭೂ ಕಂದಾಯ ವ್ಯವಸ್ಥೆಯನ್ನು ಚರ್ಚಿಸಲಾಗಿದೆ. ಇನಾಂ ಭೂಮಿ (ದೇಶ್‌ಮುಖ್, ದೇಶಪಾಂಡೆ, ಮಿರಸ್‌ದಾರ್), ಕೃಷಿ ಭೂಮಿ ಪ್ರಮಾಣ, ಕೃಷಿಕರಲ್ಲಿ ಆರ್ಥಿಕ ಅಸಮಾನತೆಗಳು, ಇನಾಂಗಳಾಗಿ ಭೂಮಿ ಮತ್ತು ಗ್ರಾಮಗಳು, ಭೂ ಕಂದಾಯ ವ್ಯವಸ್ಥೆ ದಕ್ಷಿಣ ರಾಜ್ಯಗಳಲ್ಲಿ ಮುಂತಾದ ಅಂಶಗಳನ್ನು ಪ್ರಾಚೀನ ಕಾಲದಿಂದ ಮೊಘಲರ ಆಳ್ವಿಕೆಯ ಕಾಲದ ಅಂತ್ಯದವರಗೆ ಇಡೀ ಭಾರತದ ಆರ್ಥಿಕ ಸ್ಥಿತಿಯನ್ನು ಸಮಗ್ರವಾಗಿ ಚರ್ಚಿಸಿದ್ದು ಆರ್ಥಿಕತೆಯಲ್ಲಿ ಕೃಷಿಯ ಸ್ಥಾನಮಾನ, ಕೃಷಿ ಪದ್ಧತಿಗಳು, ಬೆಳವಣಿಗೆ, ಕಾರಣ–ಪರಿಣಾಮಗಳನ್ನು ಚರ್ಚಿಸಲಾಗಿದೆ.

ಧರ್ಮಕುಮಾರ್, *ದಿ ಕೇಂಬ್ರಿಡ್ಜ್ ಎಕಾನಾಮಿಕ್ ಹಿಸ್ಟರಿ ಆಫ್ ಇಂಡಿಯಾ, ಸಂಪುಟ–2, ಕ್ರಿ.ಶ. 1757–ಕ್ರಿ.ಶ. 1970, ಕೇಂಬ್ರಿಡ್ಜ್ ಯುನಿವರ್ಸಿಟಿ ಪ್ರೆಸ್, (ಡೆಲ್ಲಿ, 1982)* ಈ ಗ್ರಂಥವು ಮೊಘಲರ ಅವನತಿಯ ಕಾಲದಿಂದ (ಬ್ರಿಟಿಷರ ಪ್ರಾಬಲ್ಯ) ಮತ್ತು ಭಾರತದಲ್ಲಿ ಬ್ರಿಟಿಷ್ ಆಳ್ವಿಕೆ ಕಾಲ ಮತ್ತು ಸ್ವಾತಂತ್ರ್ಯ ನಂತರದ ಕಾಲದ ಆರ್ಥಿಕತೆಯನ್ನು ಸಮಗ್ರವಾಗಿ ಚರ್ಚಿಸಲಾಗಿದೆ. ಈ ಗ್ರಂಥವು 2 ಭಾಗಗಳನ್ನು ಒಳಗೊಂಡಿದ್ದು, 18ನೇ ಶತಮಾನದ ಮಧ್ಯಭಾಗದ ಆರ್ಥಿಕತೆಯ ಹಿನ್ನೋಟ, ಕೃಷಿ ಸಂಬಂಧಗಳು ಮುಖ್ಯವಾಗಿ ಉತ್ತರ ಮತ್ತು ಮಧ್ಯಭಾರತಕ್ಕೆ ಸಂಬಂಧಿಸಿದಂತೆ, ಪಶ್ಚಿಮ ಮತ್ತು ಪೂರ್ವ ಭಾರತ ಮತ್ತು ದಕ್ಷಿಣ ಭಾರತಕ್ಕೆ ಸಂಬಂಧಿಸಿದಂತೆ ಚರ್ಚಿಸಲಾಗಿದೆ. ದಕ್ಷಿಣ ಭಾರತಕ್ಕೆ ಸಂಬಂಧಿಸಿದಂತೆ, ಭೌಗೋಳಿಕ ಹಿನ್ನಲೆ, ಪ್ರಮುಖ ರಾಜ್ಯಗಳ, ದಕ್ಷಿಣ ರಾಜ್ಯಗಳಲ್ಲಿ ಭೂ ಹಿಡುವಳಿ ರಚನೆ, ಭೂ ಹಿಡುವಳಿಯ ಸಂಬಂಧ ಹಾಗೂ ಸರ್ಕಾರ ನೀತಿಗಳು ಚರ್ಚಿಸಲಾಗಿದೆ. ಭೂ ಕಂದಾಯ ವ್ಯವಸ್ಥೆ 1792 ರಿಂದ 1855 ರ ಕಾಲದಲ್ಲಿ, ಇದರಲ್ಲಿ ಮದ್ರಾಸ್ ಪ್ರಾಂತ್ಯ, ಮಲಬಾರ್, ಸೌತ್ ಕೆನರ, ಪೂರ್ವ ಕರಾವಳಿ, ಹೈದರಬಾದ್ ಮತ್ತು ಮೈಸೂರು ರಾಜ್ಯಗಳಿಗೆ ಸಂಬಂಧಿಸಿದಂತೆ ವಿಶ್ಲೇಷಿಸಲಾಗಿದೆ. ಇದರಲ್ಲಿ ಕೃಷಿ ಬೆಳೆಗಳು, ಕೂಲಿ, ಗೇಣಿ, ಗೇಣಿಯ ಪರಿಸ್ಥಿತಿ. 1855 ರ ನಂತರದಲ್ಲಿ 1947 ರವರೆಗೆ ಸಾಕಷ್ಟು ಬದಲಾದ ಪರಿಸ್ಥಿತಿಯನ್ನು ಕೃಷಿ ಕ್ಷೇತ್ರದಲ್ಲಿ ಗುರುತಿಸಲಾಗಿದೆ. ಸರ್ಕಾರದ ನೀತಿಗಳ ಬದಲಾವಣೆಯಿಂದಾಗಿ, ಶ್ರೀಮಂತ ಭೂ ಮಾಲೀಕರು, ರೈತರು, ಕೃಷಿ ಕಾರ್ಮಿಕರ ಭವಿಷ್ಯದ ಬದಲಾವಣೆ ಹೇಳಲಾಗಿದೆ ಮತ್ತು ಭೂ ಮಾಲೀಕರ ಬಗ್ಗೆ ಅವರ ಭೂ ಒಡೆತನ ಬೆಳೆದು ಬಂದ ಬಗೆ, ರೈತರು, ಕೃಷಿ ಕಾರ್ಮಿಕರ ಸ್ಥಿತಿಗತಿಯನ್ನು ಸಮಗ್ರವಾಗಿ ಚರ್ಚಿಸಲು ಪಯತ್ನಿಸಲಾಗಿದೆ. 1757–1800 ರವರೆಗಿನ ಭೂ ಹಿಡುವಳಿಯ ರಚನೆಯನ್ನು, ಸರ್ಕಾರದ ನೀತಿ ಬದಲಾದಂತೆ 1792–1855 ರಲ್ಲಿ ಭೂ ಹಿಡುವಳಿಯ ರಚನೆ. ಭೂ ಹಿಡುವಳಿಯಲ್ಲಿ ಕಂಡುಬಂದ ಬದಲಾವಣೆ, ಪರಿಣಾಮಗಳು, ಜಮೀನ್ದಾರಿ ಪದ್ಧತಿ, ರಯತ್ವಾರಿ ಪದ್ಧತಿಯ

ಪುನರ್ ಜಾರಿ, ಪಶ್ಚಿಮ ಕರಾವಳಿ 1792–1855, ಮೈಸೂರು ಮತ್ತು ಹೈದರಬಾದ್ ಪ್ರದೇಶದಲ್ಲಿ ಭೂ ಹಿಡುವಳಿ ಪದ್ಧತಿಗಳು ವ್ಯತ್ಯಾಸಗಳು. ಮೈಸೂರು ರಾಜ್ಯದಲ್ಲಿ ರೈಯತ್ವಾರಿ ಪದ್ಧತಿಯ ಅಳವಡಿಕೆ, ಭೂ ವಿಧಗಳು, ಮಳೆ ಆಶ್ರಿತ ಭೂಮಿಯ ಕಂದಾಯ ಪ್ರಮಾಣ ಎರಡನೆ ಒಂದು ಭಾಗ, ಕೆರೆ ನೀರಾವರಿ ಭೂಮಿಯ ಕಂದಾಯ ಐದನೇ ಎರಡು ಭಾಗ, ಒಣ ಭೂಮಿಯ ಕಂದಾಯ ನಾಲ್ಕನೇ ಒಂದು ಭಾಗ ನಿಗದಿ, ಜಮೀನ್ದಾರರ ಕಾರ್ಯಗಳು (ತೆರಿಗೆ ವಸೂಲಾತಿ, ನ್ಯಾಯಿಕ, ಆಡಳಿತಾತ್ಮಕ, ಶಾಂತಿ–ಸುವ್ಯವಸ್ಥೆ ಮುಂತಾದವು). ಮೈಸೂರು ಭಾಗದಲ್ಲಿ ಹೆಚ್ಚಿನ ಕೃಷಿ ಭೂಮಿ ಕಂದಾಯಮ್ ಪದ್ಧತಿ ಜಾರಿಯಲ್ಲಿತ್ತು. ಎಕರೆಗೆ ಇಷ್ಟು ಎಂದು ಕಂದಾಯ ಹಣದ ರೂಪದಲ್ಲಿ ನಿಗದಿ, ಕಂದಾಯ ವಸೂಲಿ ಅಧಿಕಾರಿಗಳ ಅಧಿಕಾರ ವಂಶಪಾರಂಪರ್ಯವಾಗಿತ್ತು. ಹೈದರ್–ಟಿಪ್ಪು ಕಾಲದ ಕಂದಾಯ ಪದ್ಧತಿ, ದೀವಾನ್ ಪೂರ್ಣಯ್ಯನವರ ಕಂದಾಯ ಪದ್ಧತಿ ಚರ್ಚಿಸಲಾಗಿದೆ. ಭೂದಾನದ ಭೂಮಿಯಲ್ಲಿ ಮೂರನೇ ಒಂದು ಭಾಗ ಕಂದಾಯ ನಿಗದಿ, ಪೂರ್ಣಯ್ಯ ನಂತರದಲ್ಲಿ ಕಂದಾಯ ಪದ್ಧತಿ, ಪರಿಣಾಮಗಳನ್ನು ಚರ್ಚಿಸಲಾಗಿದೆ. ಬ್ರಿಟಿಷ್ ನೇರ ಆಳ್ವಿಕೆಯಲ್ಲಿ ಮೈಸೂರು ರಾಜ್ಯದಲ್ಲಿ ಪ್ರಾರಂಭದಲ್ಲಿ ಪೂರ್ಣಯ್ಯನವರ ಕಂದಾಯ ಪದ್ಧತಿಯನ್ನು ಅನುಸರಿಸಲಾಯಿತು. 1855 ರಿಂದ 1947 ರ ಆಧುನಿಕ ಅವಧಿಯಲ್ಲಿನ ಇನಾಂ ಭೂಮಿಗಳ ವಿವರ, ಇನಾಂ ಕಮೀಷನಿನ ನೇಮಕ 1869 ರಲ್ಲಿ, ಜಮೀನ್ದಾರಿ ಪದ್ಧತಿ ಮತ್ತು ರೈಯತ್ವಾರಿ ಪದ್ಧತಿಗಳ ವ್ಯವಸ್ಥೆಯಲ್ಲಿ ಕಂದಾಯ ವಸೂಲಾತಿ, ಕಂದಾಯದ ಪ್ರಮಾಣ, ಬೆಳೆಗಳು, ಜಮೀನ್ದಾರಿ ಮತ್ತು ರೈಯತ್ವಾರಿ ಪದ್ಧತಿಗೆ ಒಳಪಟ್ಟ ಭೂಮಿಯ ಪ್ರಮಾಣದ ಅಂಕಿ–ಅಂಶಗಳ ವಿವರ, 1876–78 ರಲ್ಲಿನ ಕ್ಷಾಮ, ಸಾವು–ನೋವುಗಳು, ಸಣ್ಣ ರೈತರು, ಕೃಷಿ ಕಾರ್ಮಿಕರ ಬವಣೆಗಳು, ಬರಗಾಲದ ನಂತರದಲ್ಲಿ ಅಂದರೆ 1880 ರ ವೇಳೆಯಲ್ಲಿ ಕಂಡುಬಂದ ಪ್ರಗತಿ, ಒಂದನೇ ಹಾಗೂ ಎರಡನೇ ಮಹಾಯುದ್ಧಗಳ ಕಾಲದಲ್ಲಿ ಕೃಷಿ ಪರಿಸ್ಥಿತಿ, ಕೃಷಿ ವಾಣಿಜ್ಯೀಕರಣ, ಭೂಮಾಲೀಕತ್ವದಲ್ಲಿ ಅಸಮಾನತೆ, ಗೇಣಿದಾರನಿಂದ ವಸೂಲಿ ಮಾಡಿದ ಕಂದಾಯ ಪ್ರಮಾಣ, ಗೇಣಿದಾರನ ಸಮಸ್ಯೆಗಳನ್ನು ವಿಶ್ಲೇಷಿಸಿದ್ದಾರೆ. ಬ್ಯಾಂಕಿಂಗ್ ವ್ಯವಸ್ಥೆ, ಸಾರಿಗೆ, ಮಾರುಕಟ್ಟೆ ವೃದ್ಧಿ, ನಗರೀಕರಣದ ಅವನತಿ, 1769–70 ರ ಕ್ಷಾಮದಿಂದ ಕಂಡುಬಂದ ಸಮಸ್ಯೆಗಳ ಅಂಕಿ–ಅಂಶ, ರಾಷ್ಟ್ರೀಯ ಆದಾಯ, ಆದಾಯ ಲೆಕ್ಕ ಹಾಕುವಿಕೆ, ರೈಲ್ವೆ, ಅಂಚೆ, ಟೆಲಿಗ್ರಾಫ್ ಬೆಳವಣಿಗೆ, ಸ್ವಾತಂತ್ರ್ಯ ನಂತರದ ಆರ್ಥಿಕ ಪರಿಸ್ಥಿತಿ, ಬೆಳವಣಿಗೆಗೆ ಕೃಷಿ, ಕೃಷಿಯೇತರ ಕ್ಷೇತ್ರಗಳಲ್ಲಿ ಚರ್ಚಿಸಲಾಗಿದೆ. ಈ ಗ್ರಂಥವು ಭಾರತದ ಆರ್ಥಿಕತೆಯ ಕ್ರಿ.ಶ. 1757 ರಿಂದ ಕ್ರಿ.ಶ. 1970 ರ ಕಾಲದ ಸಂಪೂರ್ಣ ಮಾಹಿತಿಯನ್ನು ಒಳಗೊಂಡಿದೆ.

ಕೆ. ಕೆ. ಎನ್. ಕುರುಪ್, *ದ ರೋಲ್ ಆಫ್ ಪೂರ್ ಪೀಸೆಂಟರಿ ಇನ್ ದಿ ಅಗ್ರೇರಿಯನ್ ಸ್ರಗಲ್ಸ್ ಇನ್ ಕೇರಳ 1946–1948.* (ಸಾರಂಶ)ಪುಟ ಸಂಖ್ಯೆ 598, ಇಂಡಿಯನ್ ಹಿಸ್ಟರಿ ಕಾಂಗ್ರೆಸ್ಸ್,

ಪ್ರೊಸಿಡಿಂಗ್ಸ್ ಆಫ್ ದ 48 ಸೆಶನ್, ಗೋವ ಯುನಿವರ್ಸಿಟಿ, ಬಾಮ್‌ಲಿನ್, 1987 ಕೇರಳ ಪ್ರಾಂತ್ಯದಲ್ಲಿ 1946–1948 ರ ಅವಧಿಯಲ್ಲಿ ಬಡ ಕೃಷಿಕ ಮತ್ತು ಕೃಷಿ ಕಾರ್ಮಿಕ ವರ್ಗಗಳ ಸಂಘ ಭಾವನಾತ್ಮಕವಾಗಿ ಒಂದುಗೂಡಿ ಶ್ರೀಮಂತ ಭೂ ಒಡೆಯರ ವಿರುದ್ಧ ನಡೆಸಿದ ಹೋರಾಟವನ್ನು ವಿಶ್ಲೇಷಿಸಿದ್ದಾರೆ. ಶ್ರೀಮಂತ ಭೂ ಒಡೆಯರಿಂದ ಬಡ ಕೃಷಿಕರಿಗೆ ಆದಂತಹ ದಬ್ಬಾಳಿಕೆ ವಿರುದ್ದ ಹಾಗೂ ಅವರ ಬಡತನದ ಸ್ಥಿತಿಗತಿಗಳಿಂದ ಅನುಭವಿಸದ ಸಮಸ್ಯೆಗಳಾದ ಬಡತನ, ಮರಣ, ವ್ಯಥೆ, ಮಾನಸಿಕ ಒತ್ತಡ, ಆಹಾರ ಧಾನ್ಯಗಳ ಕೊರತೆ, ಪೌಸ್ಟಿಕಾಂಶವುಳ್ಳ ಆಹಾರದ ಕೊರತೆ ಈ ಎಲ್ಲಾ ಅಂಶಗಳು ಹೋರಾಟಕ್ಕೆ ಕಾರಣಗಳಾದವು. 1935–1942 ರ ಅವಧಿಯಲ್ಲಿ ಕಿಸನ್ ಸಂಘದ ಮೂಲಕ ಒಂದು ಗೂಡಿದ ರೈತಾಪಿ ವರ್ಗ ಬ್ರಿಟಿಷ್ ವಿರುದ್ಧದ ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ತನ್ನ ಹೋರಾಟವನ್ನು ತಾತ್ಕಾಲಿಕವಾಗಿ ನಿಲ್ಲಿಸಬೇಕಾಯಿತು. ಸಾಮಾನ್ಯ ಬಡ ರೈತಾಪಿ ವರ್ಗದವರು ಹೋರಾಟದ ಮೂಲಕ ತಮ್ಮ ಹಕ್ಕುಗಳನ್ನು ಪಡೆಯಲು ಮಾಡಿದ ಪ್ರಯತ್ನಗಳನ್ನು ವಿಶ್ಲೇಷಿಸಿದ್ದಾರೆ.

ರಾಜ್ ಕುಮಾರ್ ಹನ್ಸ್, *ಕೊಲೋನಿಯಲ್ಸ್ ಆ್ಯಂಡ್ ಅಗ್ರಿಕಲ್ಚರಲ್ ಇನ್ ದ ಫಸ್ಟ್ ಹಾಫ್ ಆಫ್ ದ ನೈನ್ಟೀಂತ್ ಸೆಂಚುರಿ: ಎ ಕೇಸ್ ಸ್ಟಡಿ ಆಫ್ ಬ್ರೋಚ್ ಡಿಸ್ಟ್ರಿಕ್ಟ್ ಆಫ್ ಗುಜರಾತ್,* ಇಂಡಿಯನ್ ಹಿಸ್ಟರಿ ಕಾಂಗ್ರೆಸ್ಸ್, ಪ್ರೊಸಿಡಿಂಗ್ಸ್ ಆಫ್ ದ 48 ಸೆಶನ್, ಗೋವ ಯುನಿವರ್ಸಿಟಿ, ಬಾಮ್‌ಲಿನ್, 1987, ವಸಾಹತು ಆಳ್ವಿಕೆಯಲ್ಲಿ ಒರಿಸ್ಸಾ ರಾಜ್ಯದಲ್ಲಿ ಹೊಸ ಬಗೆಯ ಭೂ ಹಿಡುವಳಿ ಪದ್ಧತಿ ಸ್ಥಾಪನೆಯನ್ನು ವಿಶ್ಲೇಷಿಸಿದ್ದಾರೆ. ಅತೀ ಹೆಚ್ಚಿನ ತೆರಿಗೆ ವಸೂಲಿ, ಆಶ್ರಿತ ವರ್ಗಗಳು. ಬ್ರಿಟಿಷ್ ಭೂ ಹಿಡುವಳಿಯಿಂದಾಗಿ ಹತ್ತೊಂಬತ್ತನೆ ಶತಮಾನದಲ್ಲಿ ಹೆಚ್ಚಿನ ಭೂಮಿ ಜಮೀನ್ದಾರರು ಮತ್ತು ಶ್ರೀಮಂತ ಭೂ ಮಾಲೀಕರುಗಳ ಒಡೆತನಕ್ಕೆ ಒಳಪಟ್ಟಿತ್ತು, ಅವರಲ್ಲಿ ಹೆಚ್ಚಿನವರು ಹೊಸ ಜಮೀನ್ದಾರರು. ಮಧ್ಯವರ್ತಿಗಳ ನೇಮಕ ಹಾವಳಿಗಳಿಂದಾಗಿ ನಿಜವಾದ ರೈತರು ಕಡುಬಡತನಕ್ಕೆ ತಳ್ಳಲ್ಪಟ್ಟರು. ಸಂಪ್ರಾದಾಯಿಕ ಬೆಳೆಗಳಿಗೆ ಹೊರತಾದ ವಾಣಿಜ್ಯ ಬೆಳೆಗಳನ್ನು ಬೆಳೆಯಲು ಒತ್ತಾಯ, ನೀರಾವರಿ ವ್ಯವಸ್ಥೆಯ ಕೊರತೆ, ಭೂ ರಹಿತ ಕಾರ್ಮಿಕರಾಗಿ ಪರಿವರ್ತನೆ, ಕೃಷಿ ವಾಣಿಜ್ಯೀಕರಣದಿಂದಾಗಿ ಬಡ ರೈತರ ಸಮಸ್ಯೆಗಳ ಹೆಚ್ಚಳ, ಪಟ್ವಾರಿ ಪದ್ಧತಿಯ ರದ್ಧತಿ, ರೈತರು ಸಾಲಗಾರರಾಗಿ, ಜಮೀನ್ದಾರರು, ಶ್ರೀಮಂತ ಭೂ ಮಾಲೀಕರು ಹಾಗೂ ಸಾಲಿಗರಿಂದ ಕ್ರೂರವಾದ ಹಿಂಸೆಗೆ ಒಳಗಾಗಿದ್ದನ್ನು ವಿಶ್ಲೇಷಿಸಿದ್ದಾರೆ.

ಸುಮಿತ್ ಗುಹ, *ದಿ ಅಗ್ರೇರಿಯನ್ ಎಕಾನಮಿ ಆಫ್ ದಿ ಬಾಂಬೆ, ಡೆಕ್ಕನ್ 1818–1941, ಆಕ್ಸ್‌ಫರ್ಡ್ ಪ್ರೆಸ್ಸ್, (ಡೆಲ್ಲಿ 1985),* ತಮ್ಮ ಗ್ರಂಥದಲ್ಲಿ ಕೃಷಿ ಆಹಾರ ಧಾನ್ಯಗಳ ಬೆಲೆ ಹೆಚ್ಚಳ, ಕೃಷಿಯ ವಿಸ್ತರಣೆ, ರೈಲ್ವೆ ಸಾರಿಗೆ, ಕೃಷಿ ವಿಸ್ತರಣೆಯ ಮೇಲೆ ರೈಲ್ವೆ ಸಾರಿಗೆಯ ಪರಿಣಾಮ, ಹತ್ತಿ ಬೆಳೆಯ ವಿಸ್ತರಣೆ, ಭೂ ಕಂದಾಯ, ಮಣ್ಣಿನ ಸವಕಳಿ (ಹುಲ್ಲು ಗಾವಲು, ಅರಣ್ಯ ನಾಶ), ಕೃಷಿ ಕಾರ್ಮಿಕರ

ಹೆಚ್ಚಳ, ಎತ್ತಿನ ಗಾಡಿ ಬಳಕೆಯಿಂದ ಹಣಕಾಸಿನ ಸ್ಥಿತಿ ಉತ್ತಮ ಹಾಗೂ ಮಾರುಕಟ್ಟೆಗಾಗಿ ಬೆಳೆದ ಆಹಾರ ಧಾನ್ಯಗಳ ಸಾಗಾಣೆ ಮುಂತಾದ ಅಂಶಗಳನ್ನು ಚರ್ಚಿಸಿದ್ದಾರೆ.

ರಾಮೇಂದ್ರನಾಥ್ ನಂದಿ, *ಸ್ಟೇಟ್ ಫಾರ್ಮೇಷನ್, ಅಗ್ರೇರಿಯನ್ ಗ್ರೋಥ್ ಆಂಡ್ ಸೋಷಿಯಲ್ ಚೇಂಜ್ ಇನ್ ಪ್ಯೂಡಲ್ ಸೌತ್ ಇಂಡಿಯಾ, (ಕ್ರಿ.ಶ.600–1200)* ಮನೋಹರ ಪಬ್ಲಿಕೇಷನ್, (ಡೆಲ್ಲಿ, 2000). ಈ ಗ್ರಂಥದಲ್ಲಿ ಫ್ಯೂಡಾಲಿಸಂ ಬೆಳವಣಿಗೆ, ಭೂದಾನ (ಮಿಲಿಟರಿ ಅಧಿಕಾರಿಗಳಿಗೆ, ಬ್ರಾಹ್ಮಣರಿಗೆ, ದೇವಾಲಯಗಳಿಗೆ), ಕರಾರಿನ ಸೇವೆ, ಗುಲಾಮಗಿರಿತನ, ಕೃಷಿಯ ವಿಸ್ತರಣೆ, ಮಾರುಕಟ್ಟೆ ಬೆಳವಣಿಗೆ, ಉಂಬಳಿ ಭೂಮಿಯ ವಿಸ್ತರಣೆ, ಕಂದಾಯ ರಹಿತ ಭೂ ಹೆಚ್ಚಳ, ಜನಸಂಖ್ಯಾ ಬೆಳವಣಿಗೆ, ದೇವದಾನದ ಪ್ರಭಾವಗಳ ಬಗ್ಗೆ ವಿಶ್ಲೇಷಿಸಿದ್ದಾರೆ. ಖಾಸಗಿ ಭೂ ಹಿಡುವಳಿ, ಕೃಷಿ ಕಾರ್ಮಿಕರು, ಕೃಷಿ ತಂತ್ರಗಳು, ಕಾಲುವೆ ವ್ಯವಸ್ಥೆ, ಕೃಷಿ ಬೆಳೆ, ಬೇಳೆಕಾಳುಗಳ ಬಗ್ಗೆ ಚರ್ಚಿಸಿದ್ದಾರೆ. ಅಷ್ಟೇ ಅಲ್ಲದೆ ಸಾಮಾಜಿಕ ತಕರಾರುಗಳು, ಉಪಜಾತಿಗಳ ರಚನೆ, ಬ್ರಾಹ್ಮಣರ ಮತ್ತು ರೈತರ ನಡುವಿನ ಘರ್ಷಣೆ, ಸಾಮಂತ ಮತ್ತು ಬ್ರಾಹ್ಮಣರ ನಡುವಿನ ತಿಕ್ಕಾಟ, ಬಲವಂತದ ಗೇಣಿ ವಸೂಲಿ, ಬ್ರಾಹ್ಮಣರಲ್ಲಿ ಉಪಜಾತಿಗಳ ರಚನೆ, ಉದ್ಯೋಗ/ಕಸುಬು ಅಧಾರಿತ ಜಾತಿ ವ್ಯವಸ್ಥೆ, ಮಹಿಳೆಯರ ಸ್ಥಿತಿ ಈ ಎಲ್ಲಾ ಅಂಶಗಳನ್ನು ಉಳಿಗಮಾನ್ಯ ವ್ಯವಸ್ಥೆಯ ಹಿನ್ನಲೆಯಲ್ಲಿ ವಿಶ್ಲೇಷಿಸಿದ್ದಾರೆ.

ಬಿಪಿನ್ ಚಂದ್ರ, *ಎಸ್ಸೆ ಆನ್ ಕಾಲೋನಿಯಲಿಸಮ್, ರಿ ಇಂಟರ್‌ಪ್ರಿಟೇಷನ್ ಆಫ್ ನೈನ್ಟಿಂತ್ ಸೆಂಚುರಿ ಇಂಡಿಯನ್ ಎಕನಾಮಿಕ್ ಹಿಸ್ಟರಿ, ಓರಿಯಂಟ್ ಬ್ಲಾಕ್‌ಸ್ವನ್ ಪ್ರ.ಲಿ. (ಹೈದರಬಾದ್ 1999, 2000, 2006),* ಇದರಲ್ಲಿ ಕೃಷಿ ವಿಸ್ತರಣೆ ಕೃಷಿ ಉತ್ಪಾದನೆ, ಗ್ರಾಮೀಣ ಪ್ರದೇಶದಲ್ಲಿ ಹಣ ಉಳಿತಾಯ ಮತ್ತು ಬಂಡವಾಳ ತೊಡಗಿಸುವಿಕೆ, ಇದರ ಸಮಸ್ಯೆಗಳು, ಸಾಲಿಗರು, ಜಮೀನ್ದಾರರ ಪಾತ್ರ, ಉಳುಮೆ ಸಾಧನೆಗಳಲ್ಲಿ ಬದಲಾವಣೆಗಳ ಕೊರತೆ, ರಸಾಯನಿಕ ಗೊಬ್ಬರ, ಉತ್ತಮ ತಳಿ ಬಿತ್ತನೆ ಬೀಜ, ಕೃಷಿ ಕಾಲೇಜುಗಳ ಸಂಖ್ಯೆ 1916 (5), ವಿದ್ಯಾರ್ಥಿ ಸಂಖ್ಯೆ 445, ನೀರಾವರಿ ವ್ಯವಸ್ಥೆ. ಒಟ್ಟಾರೆ ತಮ್ಮ ಈ ಗ್ರಂಥದಲ್ಲಿ ಕೃಷಿ ಉತ್ಪಾದನೆ ಹಾಗೂ ವಿಸ್ತರಣೆಯನ್ನು ಚರ್ಚಿಸಿದ್ದಾರೆ.

ಇರ್ಫಾನ್ ಹಬೀಬ್, *ಎಸ್ಸೆ ಇನ್ ಇಂಡಿಯನ್ ಹಿಸ್ಟರಿ, ತುಲಿಕ ಬುಕ್ಸ್ ಪಬ್ಲಿಷರ್ಸ್ (ನ್ಯೂ ಡೆಲ್ಲಿ, 1995....2007), ದಿ ಪೀಸೆಂಟ್ ಇನ್ ಇಂಡಿಯನ್ ಹಿಸ್ಟರಿಯಲ್ಲಿ* ಕೃಷಿಯ ಮೂಲ, ಸಿಂಧೂ ನಾಗರಿಕತೆಯಿಂದ ಗಂಗಾನದಿ ಮುಖಜ ಭೂಮಿಯವರೆಗೆ ಕೃಷಿಯ ಬೆಳವಣಿಗೆ, ಕೃಷಿಕರಲ್ಲಿ ಜಾತಿ ವ್ಯವಸ್ಥೆಯ ಬೆಳವಣಿಗೆ, ದಕ್ಷಿಣ ಭಾರತದ ರೈತರು, ಗ್ರಾಮೀಣ ಜನಾಂಗ ಮತ್ತು ಉಳಿಗಮಾನ್ಯ ವ್ಯವಸ್ಥೆ,

ಮಧ್ಯಭಾರತದಲ್ಲಿ ಕೃಷಿ, ರೈತರ ದಂಗೆಗಳು, ಕಾರಣ ಪರಿಣಾಮಗಳು ಮುಂತಾದ ಅಂಶಗಳ ಪ್ರಮುಖ ಅಂಶಗಳ ಬಗ್ಗೆ ವಿಶ್ಲೇಷಿಸಿದ್ದಾರೆ.

ನೀಲ್ ಚಾರ್ಲ್ಸ್‌ವರ್ತ್, *ಪೀಸೆಂಟ್ ಅಂಡ್ ಇಂಪೀರಿಯಲ್ ರೂಲ್, (ಅಗ್ರಿಕಲ್ಚರ್ ಅಂಡ್ ಅಗ್ರೇರಿಯನ್ ಸೊಸೈಟಿ ಇನ್ ದಿ ಬಾಂಬೆ ಪ್ರಸಿಡೆನ್ಸಿ, 1850–1935)* ಕೇಂಬ್ರಿಡ್ಜ್ ಯುನಿವರ್ಸಿಟಿ ಪ್ರೆಸ್ (ಕೇಂಬ್ರಿಡ್ಜ್, 1985), ಇದರಲ್ಲಿ ಕಂದಾಯ ನೀತಿ, ಬಾಂಬೆ ಸರಕಾರದ ನೀತಿಗಳು ಕೃಷಿಗೆ ಸಂಬಂಧಿಸಿದಂತೆ, ರೈತವಾರಿ ಪದ್ಧತಿ, ಕುಂಬಿ (ಪ್ರಬಲವಾದ ಕೃಷಿಕ ವರ್ಗ), ಗ್ರಾಮ ಸಮುದಾಯಗಳು ಅವರ ಸಂಸ್ಕೃತಿ ಆರ್ಥಿಕತೆ, ಗ್ರಾಮದ ಆರ್ಥಿಕತೆ, ಜನಸಂಖ್ಯೆ ಹೆಚ್ಚಳ, ಕೃಷಿ ಭೂಮಿ ಮೇಲಿನ ಒತ್ತಡ, ಕೃಷಿ ತಂತ್ರಜ್ಞಾನದ ಅನಾಭಿವೃದ್ಧಿ, ಬಡವ–ಶ್ರೀಮಂತರ ನಡುವಿನ ವ್ಯತ್ಯಾಸ, ಕೃಷಿ ಬೆಳೆಯ ಕುಂಠಿತ, ರೈತರ ದಂಗೆ ಕಾರಣ ಪರಿಣಾಮ, ಮಾರ್ವಾರಿ ಮತ್ತು ಗುಜರಾತಿ ಬನಿಯಾಸ್ (ಸಾಲಿಗರು) ಗಳ ಪಾತ್ರ ಮುಂತಾದ ಅಂಶಗಳನ್ನು ವಿಶ್ಲೇಷಿಸಿದ್ದಾರೆ.

ಇರ್ಫಾನ್ ಹಬೀಬ್ ಮತ್ತು ವಿವೇಕಾನಂದ ಜಾ, *ಮೌರ್ಯನ್ ಇಂಡಿಯಾ, ಆಲಿಘರ್ ಹಿಸ್ಟಾರಿಯನ್ ಸೊಸೈಟಿ, (ನ್ಯೂಡೆಲ್ಲಿ 2004),* ಮೌರ್ಯರ ಕಾಲದಲ್ಲಿ ಕೃಷಿಗೆ ನೀಡಿದ ಪ್ರೋತ್ಸಾಹ, ಕೃಷಿ ಭೂಮಿ ವಿಸ್ತರಣೆ, ಕೃಷಿ ಆಧಾರಿತ ಗುಲಾಮರ ಜೀವನ, ಮುಖ್ಯವಾಗಿ ಶೂದ್ರ, ಕರ್ಶಕರು ಅಥವಾ ಕೃಷಿ ಗುಲಾಮರು, ಕೃಷಿ ಸಾಲ, ಕಾರಣಗಳು ಪರಿಣಾಮಗಳು, ಕೃಷಿ ಉಪಕರಣಗಳು (ಕರ್ಶನ ಯಂತ್ರ), ನೀರಾವರಿ ವ್ಯವಸ್ಥೆ, ಬಳಕೆ, ಕೃಷಿ ಕಾಲಗಳು, ಕಾರಿಫ್ ಮತ್ತು ರಬಿ ಬೆಳೆಗಳು, ವಾಣಿಜ್ಯ ಬೆಳೆ ಮುಖ್ಯವಾಗಿ ಹತ್ತಿ, ಭೂದಾನ, ಕಂದಾಯ ರಹಿತ ಭೂಮಿ, ಬ್ರಹ್ಮದೇಯ, ದೇವಾದಾಯ, ಅಧಿಕಾರಿಗಳಿಗೆ ಪ್ರಾದೇಶಿಕ ಆಡಳಿತಗಾರಿಗೆ ನೀಡಿದ ಭೂಮಿ, ಕಾರಣ ಪರಿಣಾಮಗಳ ಬಗ್ಗೆ ವಿಶ್ಲೇಷಿಸಿದ್ದಾರೆ.

ಶ್ಯಾಮ್ ಸುಂದರ್ ನಿಗಮ್, *ಎಕಾನಾಮಿಕ್ ಆರ್ಗನೈಷೇಶನ್ ಇನ್ ಏನ್ಷಿಯಂಟ್ ಇಂಡಿಯ (200 ಕ್ರಿ.ಪೂ. 200ಕ್ರಿ.ಶ.)* ಮುನ್ಷಿರಾಮ್ ಮನೋಹರಲಾಲ್ ಪಬ್ಲೀಷರ್ ಪ್ರ.ಲಿ. 1975 ನ್ಯೂಡೆಲ್ಲಿ, ಇದರಲ್ಲಿ ರೈತರು ಭೂರಹಿತ ಕಾರ್ಮಿಕರು, ಸಿಲ ಮತ್ತು ಉಚ್ಛ ಪದ್ಧತಿ, ಜಾತಿ ಆಧಾರಿತ ಉದ್ಯೋಗಗಳು, ಭೂ ವಿಧಗಳು, ಭೂ ಒಡೆತನದ ವಿಧಗಳು, ಖಾಸಗಿ ಭೂಮಿ, ಅರಸರ ಭೂಮಿ, ಪ್ರಾದೇಶಿಕ ಮುಖಂಡರ ಭೂಮಿ, ಭೂ ವ್ಯಾಪ್ತಿ ನಿಗದಿ, ಭೂ ವಿವಾದಗಳು, ಭೂ ದಾಖಲೆಗಳು, ಭೂ ಮೋಜಣಿ, ಭೂ ನಿರ್ವಹಣೆ, ಗೇಣಿ ಪದ್ಧತಿ, ಗೇಣಿ ಅವಧಿ ಪ್ರಾಚೀನಕಾಲದ ಕಾನೂನು, ಕೃಷಿ ತಂತ್ರಗಳು, ಕೃಷಿ ಉಪಕರಣಗಳು, ಧಾನ್ಯಗಳು, ಮಣ್ಣು, ಕಂದಾಯ ಪದ್ಧತಿ, ನಿಗದಿ, ಕಂದಾಯ ವಸೂಲಿ, ಭಾಗ, ನೀರಾವರಿ, ತೆರಿಗೆ (ಬಲಿ, ಕರ) ಮುಂತಾದ ವಿವರಗಳನ್ನು ಒಳಗೊಂಡಿದೆ.

ಶುಕ್ಲದಾಸ್, *ಸೋಷಿಯೋ–ಎಕಾನಾಮಿಕ್ ಲೈಫ್ ಆಫ್ ನಾರ್ಥರನ್ ಇಂಡಿಯಾ (ಕ್ರಿ.ಶ.550 ಕ್ರಿ.ಶ650) ಅಭಿನವ ಪಬ್ಲಿಕೇಷನ್ (ನ್ಯೂಡೆಲ್ಲಿ, 1980),* ಇದರಲ್ಲಿ ಸಾಮಾಜಿಕ ಸಂಘಟನೆ, ಜಾತಿ ಪದ್ಧತಿ, ಮಹಿಳೆಯರ ಸ್ಥಾನಮಾನ, ಶಿಕ್ಷಣ, ಆಹಾರ ಪದ್ಧತಿ, ಉಡುಗೆ–ತೊಡುಗೆ, ಭೂ ಸಂಪತ್ತು, ಕೃಷಿ ಬೆಳೆಗಳು, ಕೃಷಿಕರ ಸಮಸ್ಯೆಗಳು, ಇತರೇ ವರ್ಗಗಳೊಡನೆ ಸಂಬಂಧ (ಕಮ್ಮರ, ಬಡಗಿ)ಇತ್ಯಾದಿ, ನೀರಾವರಿ ಬಳಕೆ(ಮೂಲಗಳು) ಬಾವಿ ಕಾಲುವೆ ಮುಂತಾದ ಅಂಶಗಳ ಬಗ್ಗೆ ಚರ್ಚಿಸಿದ್ದಾರೆ.

ಧರ್ಮಕುಮಾರ್, *ಲ್ಯಾಂಡ್ ಅಂಡ್ ಕ್ಯಾಸ್ಟ್ ಇನ್ ಸೌತ್ ಇಂಡಿಯಾ, (ಕೇಂಬ್ರಿಡ್ಜ್, 1965)* ಈ ಗ್ರಂಥವು 19ನೇ ಶತಮಾನದಲ್ಲಿ ಮದ್ರಾಸ್ ಪ್ರಸಿಡೇನ್ಸಿಯಲ್ಲಿನ ಕೃಷಿ ಕಾರ್ಯಗಳ ಬಗ್ಗೆ ಬೆಳಕು ಚೆಲ್ಲುತ್ತದೆ. ಮುಖ್ಯವಾಗಿ ಕೃಷಿ ಕಾರ್ಮಿಕರು, ಕೃಷಿ ಕಾರ್ಮಿಕರ ಆರ್ಥಿಕ ಸಾಮಾಜಿಕ ಅಂತಸ್ತಿನ ಬಗ್ಗೆ ಚರ್ಚಿಸಿದ್ದಾರೆ. ಜೊತೆಗೆ ಆರ್ಥಿಕ ಅಂಶಗಳು ಹೇಗೆ ಭೂ ರಹಿತ ಕಾರ್ಮಿಕರನ್ನು ಸೃಷ್ಟಿಸಿತು, ಹಾಗೂ ಕೃಷಿ ನಿರತ ಜನಸಂಖ್ಯೆಯ ಬೆಳವಣಿಗೆ ಹೇಗೆ ಕೃಷಿ ಭೂಮಿಯ ಮೇಲೆ ಹೆಚ್ಚಿನ ಒತ್ತಡವನ್ನುಂಟುಮಾಡಿತು ಮುಂತಾದ ಅಂಶಗಳನ್ನು ಚರ್ಚಿಸಲಾಗಿದೆ.

ಮೋರ್ ಲ್ಯಾಂಡ್ ಬಿ.ಹೆಚ್. *ದಿ ಅಗ್ರೇರಿಯನ್ ಸಿಸ್ಟಮ್ ಆಫ್ ಮುಸ್ಲಿಂ ಇಂಡಿಯಾ ಕೇಂಬ್ರಿಡ್ಜ್ ಪ್ರೆಸ್ (ದೆಹಲಿ 1929,1968), ಇದರಲ್ಲಿ 1868 ರಿಂದ 1938* ರವರೆಗಿನ ಕೃಷಿ ವಿಧಾನಗಳ ಬಗ್ಗೆ ಚರ್ಚಿಸಿದ್ದಾರೆ. ಸಂಯುಕ್ತ ಪ್ರಾಂತ್ಯದಲ್ಲಿ ಕೃಷಿ ಪದ್ಧತಿ, ಕಂದಾಯ ಆಡಳಿತ ಇದರಲ್ಲಿ ಹೆಚ್ಚಿನ ಬದಲಾವಣೆಗಳು ಪ್ರಾರಂಭದಲ್ಲಿ ಕಂಡು ಬರುವುದಿಲ್ಲ ಹಿಂದಿನ ಕಾಲದಲ್ಲಿ ಅಂದರೆ ಮುಸ್ಲಿಮರು ಭಾರತ ಬರುವುದಕ್ಕಿಂತ ಮುಂಚಿತವಾಗಿ ಇದ್ದ ಪದ್ಧತಿಯೇ ಮುಂದುವರಿಯಿತು ಎಂಬುದನ್ನು ಗುರುತಿಸಿದ್ದಾರೆ. ಆ ನಂತರದಲ್ಲಿ ಆದ ಬದಲಾವಣೆಗಳನ್ನು ವಿಮರ್ಶಿಸಿದ್ದಾರೆ. ಬ್ರಿಟಿಷರ ಕಾಲದಲ್ಲಿ ಆದ ಆರ್ಥಿಕ ಬದಲಾವಣೆಗಳು ಮುಖ್ಯವಾಗಿ ಕೃಷಿ ಉತ್ಪಾದನೆ ಮತ್ತು ವ್ಯಾಪಾರ, ಅವುಗಳು ಹೇಗೆ ಅವನತಿ ಹಾದಿ ಹಿಡಿದವು ಎಂಬುದನ್ನು ವಿಶ್ಲೇಷಿಸಿದ್ದಾರೆ. ಭಾರತದ ಕೆಳವರ್ಗದ ಜನರು ಅತ್ಯಂತ ಕಡಿಮೆ ಕೂಲಿ ಹಾಗೂ ಬಲವಂತದ ದುಡಿಮೆಗೆ ಒಳಗಾದ ಬಗ್ಗೆ ಚರ್ಚಿಸಿದ್ದಾರೆ. ಬ್ರಿಟಿಷರ ಆಳ್ವಿಕೆಯು ಹೇಗೆ ಮಧ್ಯಕಾಲೀನ ಮುಸ್ಲಿಂ ಆಡಳಿತದಲ್ಲಿ ಕೃಷಿ ಸಮಸ್ಯೆಗಳಿಂದ ಅವನತಿ ಹಾದಿ ಹಿಡಿದಿದ್ದ ಕೃಷಿಯನ್ನು ಹೇಗೆ ರಕ್ಷಿಸಿದರು ಎಂಬುದನ್ನು ಚರ್ಚಿಸಿದ್ದಾರೆ.

ಫ್ರಾನ್ಸಿಸ್ ಬುಖಾನನ್, *ಜರ್ನಿ ಫ್ರಮ್ ಮದರಾಸ್ ಥ್ರೂ ಕಂಟ್ರೀಸ್ ಆಫ್ ಮೈಸೂರು, ಕೆನರ ಅಂಡ್ ಮಲಬಾರ್,* ಏಷಿಯನ್ ಪಬ್ಲಿಕೇಷನ್, ಮದ್ರಾಸ್. ಬ್ರಿಟನ್ ದೇಶದ ಫ್ರಾನ್ಸಿಸ್ ಬುಕಾನನ್ ಕ್ರಿ.ಶ. 1800ರಲ್ಲಿ ಫೋರ್ಟ್ ಮಿಲಿಯಂನ ಗವರ್ನರ್ ಜನರಲ್ ಆಗಿದ್ದ ಮಾರ್ಕಸ್ ವೆಲ್ಲೆಸ್ಲಿಯ

ನಿರ್ದೇಶನದಂತೆ ದಕ್ಷಿಣ ಭಾರತದ ವಿಶೇಷವಾಗಿ ಟಿಪ್ಪು ಸುಲ್ತಾನನ ಕಾಲದ ಆರ್ಥಿಕ ವ್ಯವಸ್ಥೆಯ ಮೂಲಗಳು, ಜನರ ಜೀವನ ಮಟ್ಟ ಮತ್ತು ರಾಜ್ಯದ ಆರ್ಥಿಕತೆಯ ಮುಖ್ಯ ಮೂಲವಾದ ಕೃಷಿ ಪದ್ಧತಿ ಹಾಗೂ ಕೃಷಿ ಉತ್ಪನ್ನಗಳ ಸಮಗ್ರಮಾಹಿತಿಯನ್ನು ಸಂಗ್ರಹಿಸಿವ ಕಾರ್ಯಕ್ಕಾಗಿ ನೇಮಿಸಲ್ಪಟ್ಟನು. 1801ರಿಂದ ಪ್ರಯಾಣ ಆರಂಭಿಸಿ ಮೈಸೂರು, ಕೆನರ, ಮತ್ತು ಮಲಬಾರ್ ಪ್ರದೇಶಗಳಲ್ಲಿ ಸಂಚರಿಸಿ ಸಿದ್ಧಪಡಿಸಿದ ಸುಧೀರ್ಘವಾದ ಸರ್ವೇಕ್ಷಣ ವರದಿಯನ್ನು ಮೂರು ಸಂಪುಟಗಳಲ್ಲಿ 1807ರಲ್ಲಿ ಲಂಡನ್‌ನಲ್ಲಿ ಮುದ್ರಣಗೊಂಡಿದೆ. 19ನೇ ಶತಮಾನದಲ್ಲಿನ ರಾಜ್ಯದ ಆರ್ಥಿಕ ಇತಿಹಾಸವನ್ನು ಅರಿಯಲು ಅತ್ಯುತ್ತಮವಾದ ಐತಿಹಾಸಿಕ ಆಕರವಾಗಿದೆ. ಈ ಕೃತಿಯ ಮೂಲಕ 18 ಮತ್ತು 19ನೇ ಶತಮಾನದಲ್ಲಿನ ಬಯಲು ಸೀಮೆ, ಮಲೆನಾಡು ಮತ್ತು ಕರಾವಳಿಯ ಭೌಗೋಳಿಕ ಪರಿಚಯ, ಹವಾಮಾನ, ಜನಜೀವನ, ಪ್ರಮುಖ ಉದ್ಯೋಗವಾದ ಕೃಷಿ, ಕೃಷಿ ಪದ್ಧತಿ, ನೀರಾವರಿ, ಬೆಳೆಗಳು, ಕೃಷಿಉಪಕರಣಗಳು, ವಿವಿಧ ಧಾನ್ಯಗಳು, ಕೃಷಿ ವರ್ಗಗಳು, ವೇತನ, ಭೂ ಕಂದಾಯ, ಆಹಾರ ಧಾನ್ಯಗಳ ಬೆಲೆ, ಮುಂತಾದ ವಿಷಯಗಳ ಬಗ್ಗೆ ವಿವರವಾದ ಮಾಹಿತಿ ಲಭ್ಯವಿದೆ. ಜಿಲ್ಲೆಗೆ ಸೇರಿದ ಕೆಲವು ಪ್ರದೇಶಗಳಿಗೆ ಭೇಟಿ ನೀಡಿದ್ದು ಅವುಗಳೆಂದರೆ ತರೀಕೆರೆ, ಕಡೂರು, ಯಗಟಿ ಮತ್ತು ಈ ಹಿಂದೆ ಜಿಲ್ಲೆಯ ವ್ಯಾಪ್ತಿಯಲ್ಲಿದ್ದ ಬಾಣವರ, ಬೇಲೂರು, ಹಳೇಬೀಡು ಇಲ್ಲಿನ ಕೃಷಿ ಬೆಳೆಗಳು, ಕೃಷಿ ವಿಧಾನ ಮುಂತಾದ ಮಾಹಿತಿಯನ್ನು ಒಳಗೊಂಡಿದೆ. ನೆರೆಯ ಜಿಲ್ಲೆಯಾದ ಶಿವಮೊಗ್ಗ ಮಲೆನಾಡು ಪ್ರದೇಶವಾಗಿದ್ದು ಜಿಲ್ಲೆಯ ಕೆಲವು ತಾಲ್ಲೂಕುಗಳು ಮಲೆನಾಡಾಗಿದ್ದು ಇಲ್ಲಿಯ ಕೃಷಿ, ಹವಾಮಾನ, ಜನಜೀವನ, ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಅಂಶಗಳು ಸಾಮ್ಯತೆ ಇರುವುದರಿಂದ ಬುಕಾನನ ವರದಿಯಲ್ಲಿರುವ ಅಂಶಗಳನ್ನು ಜಿಲ್ಲೆಗೆ ಹೋಲಿಕೆ ಮಾಡಬಹುದಾಗಿದೆ. ಇದರಿಂದಾಗಿ ಜಿಲ್ಲೆಯ ಕೃಷಿ ಪದ್ಧತಿಯನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗಿದೆ.

ಕೆ.ರಾಮು, *ಮಧ್ಯಯುಗೀನ ಭಾರತದ ಆರ್ಥಿಕ ಇತಿಹಾಸ, ಲಕ್ಷ್ಮಿ ಪ್ರಿಂಟಿಗ್ ಅಂಡ್ ಪಬ್ಲಿಷಿಂಗ್ ಹೌಸ್ (ಮೈಸೂರು , 2012)* ಇದರಲ್ಲಿ ರೈತರ ಭೌತಿಕ ಸ್ಥಿತಿ, ಜಹಗೀರುಗಳು, ಕಂದಾಯ ಆಡಳಿತ, ದತ್ತಿಗಳು, ತೆರಿಗೆ ಪದ್ಧತಿ, ಗ್ರಾಮ ಸಮುದಾಯ, ಪಟ್ಟಣ ಕೇಂದ್ರಗಳ ಬೆಳವಣಿಗೆ, ಉತ್ತರ ಮತ್ತು ದಕ್ಷಿಣ ಭಾರತದ ಭೂ ಹಿಡುವಳಿಗಳು. ದೆಹಲಿ ಸುಲ್ತಾನರು, ಮೊಘಲರು, ವಿಜಯನಗರ ಸಾಮ್ರಾಜ್ಯ, ಬಹುಮನಿ ಸಾಮ್ರಾಜ್ಯಗಳ ಕಾಲಗಳಿಗೆ ಸಂಬಂಧಿಸಿದಂತೆ ವಿಶ್ಲೇಷಿಸಲಾಗಿದೆ.

ಕೆ.ರಾಮು, *ಆಧುನಿಕ ಭಾರತದ ಆರ್ಥಿಕ ಇತಿಹಾಸ, ಚೇತನ ಬುಕ್ ಹೌಸ್, ಮೈಸೂರು, 1999)* ಬ್ರಿಟಿಷ್ ಆಳ್ವಿಕೆ ಪೂರ್ವದಲ್ಲಿ ಆರ್ಥಿಕ ವ್ಯವಸ್ಥೆಯ ಮುಖ್ಯಲಕ್ಷಣಗಳು ಖಾಯಂ ಜಮೀನ್ದಾರಿ ಪದ್ಧತಿ,

ಮಹಲ್ವಾರಿ ಪದ್ಧತಿ, ರೈತವಾರಿ ಪದ್ಧತಿ, ಕ್ಷಾಮ, ಪರಿಹಾರ, ರೈಲ್ವೇ ಪ್ರಗತಿ, ಮೈಸೂರು ರೈತರ ದಂಗೆಗಳು, ನೀಲಿ ಬೆಳೆಗಾರ ಚಳುವಳಿ ಈ ಅಂಶಗಳನ್ನು ವಿವರಿಸಿದ್ದಾರೆ.

ರೊಮಿಲಾ ಥಾಪರ್, *ಅರ್ಲಿ ಇಂಡಿಯಾ, ಫ್ರಮ್ ದಿ ಆರಿಜನ್ ಟು ಕ್ರಿ.ಶ.1300,* ಆ್ಯಲೆನ್ ಲೇನ್, ಪೆಂಗ್ವಿನ್ ಬುಕ್ಸ್, (ಲಂಡನ್ 2002) ರಲ್ಲಿ ಮೌರ್ಯರ ಕಾಲದಲ್ಲಿ ಭೂದಾನ, (ಅಧಿಕಾರಿಗಳಿಗೆ, ಸೈನಾಧಿಕಾರಿಗಳಿಗೆ, ಪ್ರಾದೇಶಿಕರಿಗೆ, ಬ್ರಾಹ್ಮಣರಿಗೆ, ದೇವಾಲಯಗಳಿಗೆ), ಗ್ರಾಮಾಡಳಿತ, ಜಮೀನ್ದಾರರ ಮತ್ತು ರೈತರ ಸಂಬಂಧ, ಕೃಷಿಕಾರ್ಮಿಕರ ಸ್ಥಿತಿಗತಿ, ತೆರಿಗೆ ಪದ್ಧತಿಗಳನ್ನು ಚರ್ಚಿಸಿದ್ದಾರೆ.

ಸುವಿರ ಜಯಸ್ವಾಲ್, *ಇಮೇಜಿಂಗ್ ದಿ ಫಾಸ್ಟ್, ಇಂಡಿಯನ್ ಹಿಸ್ಟರಿ ಫ್ರಮ್ ಹರಪ್ಪನ್ ಟೈಮ್ಸ್ ಟು ದಿ ಪ್ರಸೆಂಟ್, ಆಕಾರ್ ಬುಕ್ಸ್ (ದೆಹಲಿ, 2013),* ಎಸ್ಸೆ: ಜಂಡರ್, ಕ್ಲಾಸ್ ಅಂಡ್ ಕ್ಯಾಸ್ಟ್ ಇನ್ ಅಗ್ರಿಕಲ್ಚರಲ್ ಪ್ರೊಡಕ್ಷನ್, ಎ ರಿವ್ಯೂ ಆಫ್ ಅರ್ಲಿ ನಾರ್ಥ್ ಇಂಡಿಯನ್ ಸೋರ್ಸ್. ಇದರಲ್ಲಿ ಕೃಷಿ ಕ್ಷೇತ್ರದಲ್ಲಿ ಮಹಿಳೆಯರ ಪಾತ್ರ, ಪುರುಷರ ಪಾತ್ರ, ಕೃಷಿಯಲ್ಲಿ ಜಾತಿ ಪದ್ಧತಿಯ ಬೆಳವಣಿಗೆ, ಗುಲಾಮಗಿರಿ ಪ್ರಾರಂಭ ಮತ್ತು ಬೆಳವಣಿಗೆ, ಗಹಪತಿ, ಖಟ್ಟಿಯಾಸ್, ದಿಘ, ನಿಕಾಯ, ಕರ್, ಸಕ, ಅಸ್ಪೃಷ್ಯತೆ ಮುಂತಾದ ಅಂಶಗಳನ್ನು ವಿಶ್ಲೇಷಿಸಿದ್ದಾರೆ.

ಭಾರತೀಯ ಜನತೆಯ ಇತಿಹಾಸ ಮತ್ತು ಸಂಸ್ಕೃತಿ : ಸಂಪುಟ 4, ಸಮ್ರಾಜ್ಯ ಏಕತಾ ಯುಗ (ಭಾಗ– 2), ಭಾರತೀಯ ವಿದ್ಯಾಭವನ, (ಬೆಂಗಳೂರು, 1998), ಇದರಲ್ಲಿ ಮೌರ್ಯರ ಕಾಲದ ಕೃಷಿ, ಭೂಮಿ ವಿಧಗಳು, ವೈಯಕ್ತಿಕ ಹಿಡುವಳಿ, ದೊಡ್ಡ ಪ್ರಮಾಣದ ಭೂ ಹಿಡುವಳಿ, ಬ್ರಾಹ್ಮಣರ ನಿಯಂತ್ರಣ, ಭೂಮಿಯ ವಿಧಗಳು (ಕೃಷ್ಟ, ಅಕೃಷ್ಟ, ಸ್ಥಲ, ಕೇದಾರ, ಆರಾಮ, ಷಂಡ, ಮೂಲ– ವಾಪ, ವಾಟ, ವನ, ವಿವೀತ) ವಿಧಗಳಾಗಿ ವಿಂಗಡಿಸಿರುವ ಮಾಹಿತಿ ವಿಮರ್ಶಿಸಲಾಗಿದೆ. ಮೌರ್ಯರ ಕಾಲದಲ್ಲಿ ಕೃಷಿ ಬೆಳೆಗಳು, ಪ್ರಾಣಿಗಳ ಮೇಲೆ ಕೃಷಿಯ ಅವಲಂಬನೆ, ಗ್ರಾಮೀಣ ಸಮುದಾಯಗಳು, ತೆರಿಗೆ ಪದ್ಧತಿ, ತೆರಿಗೆ ಪ್ರಮಾಣಗಳ ವಿವರಗಳಿವೆ.

ಕೆ.ಅಂತೋನವ, ಜಿ.ಕತೋವ್ಸ್ಕಿ, *ಭಾರತದ ಇತಿಹಾಸ,* ಅನುವಾದ ಕೆ.ಎಲ್.ಗೋಪಾಲಕೃಷ್ಣ, ಪ್ರಗತಿ ಪ್ರಕಾಶನ, (ಬೆಂಗಳೂರು, 1988), ಇದರಲ್ಲಿ 19ನೇ ಶತಮಾನದಲ್ಲಿ ಮೊದಲಾರ್ಧದಲ್ಲಿ ಭಾರತದ ಆರ್ಥಿಕ ಬೆಳವಣಿಗೆ, ಭಾರತದಲ್ಲಿ ಪ್ಲಾಂಟೇಶನ್ ವಿಕಾಸ, ಇಂಡಿಗೋ ಪ್ಲಾಂಟರ್‌ಗಳು, ರೈತರ ಶೋಷಣೆ, ರೈತರು ಸಾಲಗಾರರಾಗಿ ಪರಿವರ್ತನೆ, ಬಲವಂತದ/ಒತ್ತಾಯದ ದುಡಿಮೆ, ಇಂಡಿಗೋ ದಂಗೆಗಳು, ಬಿಹಾರದಲ್ಲಿ ಕಬ್ಬು ಬೆಳೆಗೆ ಉತ್ತೇಜನ, ಮೈಸೂರಿನಲ್ಲಿ ಕಾಫಿ, ಹೊಗೆ ಸೊಪ್ಪು ಬೆಳೆಯಲು ಉತ್ತೇಜನ, ಬಿರಾರ್‌ನಲ್ಲಿ ಉದ್ದ ಎಳೆಯ ಹತ್ತಿ ಬೆಳೆಯಲು ಉತ್ತೇಜನ, ಗೇಣಿದಾರರ ಹೆಚ್ಚಳ,

ಮದ್ರಾಸ್ ಬಾಂಬೆ ಪ್ರೆಸಿಡೆನ್ಸಿಯಲ್ಲಿ ಕ್ಷಾಮ ಅದರ ಪರಿಣಾಮಗಳು ಮುಂತಾದ ಅಂಶಗಳನ್ನು ಚರ್ಚಿಸಿದ್ದಾರೆ.

ಚಿಕ್ಕಮಗಳೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, (ಮೈಸೂರು 2009), ಗ್ರಂಥದಲ್ಲಿರುವ ಸಂಶೋಧನಾ ಲೇಖನಗಳು:

1. ಪ್ರೊ. ಶಕುಂತಲಾ ಸಿಂಧೂರ, *ಚಿಕ್ಕಮಗಳೂರು ಜಿಲ್ಲೆಯ ಕೃಷಿ ಪದ್ಧತಿ,* ಇದರಲ್ಲಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಸ್ವಾತಂತ್ರ್ಯ ನಂತರದ ಕೃಷಿಯ ಪದ್ಧತಿಯ ಬಗ್ಗೆ ಮಾಹಿತಿ ನೀಡಿದ್ದಾರೆ. ಕೃಷಿ ಬೆಳೆಗಳು 1971ರಲ್ಲಿ ಕೃಷಿ ನಿರತ ಜನರ ಅಂಕಿ ಅಂಶಗಳು, ಭೂ ಹಿಡುವಳಿ ಗಾತ್ರ, ಭೂ ಬಳಕೆ, ಜಿಲ್ಲೆಯಲ್ಲಿ ಕಂಡುಬರುವ ಮಣ್ಣಿನ ವಿಧಗಳು, ಅದರಲ್ಲಿ ಬೆಳೆಯುವ ಪ್ರಮುಖ ಬೆಳೆಗಳು, ಭೂ ಸಾರ ಸಂರಕ್ಷಣೆ, ಸಂಶೋಧನೆ, ಕೃಷಿಯ ಋತುಗಳು, ಬೆಳೆಗಳ ಮಾದರಿ, ಗೊಬ್ಬರ ವಿಧಗಳು, ಕೃಷಿ ಉಪಕರಣಗಳು, ಕೃಷಿ ಯೋಜನೆಗಳು ಮುಂತಾದ ವಿಷಯಗಳನ್ನು ಚರ್ಚಿಸಿದ್ದಾರೆ.

2. ಡಾ. ಬಿ.ವಿ.ನಾಗರಾಜ್, *ಚಿಕ್ಕಮಗಳೂರು ಜಿಲ್ಲೆಯ ನೀರಾವರಿ ವ್ಯವಸ್ಥೆ, ಒಂದು ಚಾರಿತ್ರಿಕ ವಿಶ್ಲೇಷನೆ.* ಈ ಸಂಶೋಧನಾ ಲೇಖನದಲ್ಲಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಹುಟ್ಟುವ ಪ್ರಮುಖ ನದಿಗಳು, ವಿವಿಧ ಅರಸರುಗಳ ಆಳ್ವಿಕೆ ಕಾಲದಲ್ಲಿ ನಿರ್ಮಾಣವಾದ ಕೆರೆ ಕಾಲುವೆಗಳ ವಿವರಣೆ ಲಭ್ಯವಿದೆ.

3. ಡಾ.ಎಸ್.ಜಿ.ರಾಮದಾಸ ರೆಡ್ಡಿ, *ಚಿಕ್ಕಮಗಳೂರು ಜಿಲ್ಲೆಯಲ್ಲಿ ಹುಟ್ಟುವ ನದಿಗಳು,* ಈ ಸಂಶೋಧನಾ ಲೇಖನದಲ್ಲಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಹುಟ್ಟುವ ನದಿಗಳು, ಹಳ್ಳಗಳು, ವಿವಿಧ ಶಾಸನಗಳಲ್ಲಿ ಉಲ್ಲೇಖಿಸಿರುವಂತೆ ವಿಶ್ಲೇಷಿಸಿದ್ದಾರೆ.

4. ಡಾ. ಸೂರ್ಯನಾಥ ಕಾಮತ್, ಚಿಕ್ಕಮಗಳೂರು ಜಿಲ್ಲೆಯಲ್ಲಿ ಸ್ವಾತಂತ್ರ್ಯ ಹೋರಾಟ, ಈ ಲೇಖನದಲ್ಲಿ ಚಿಕ್ಕಮಗಳೂರು ಜಿಲ್ಲೆಯ ಸ್ವಾತಂತ್ರ ಹೊರಾಟ, ಹೋರಾಟಗಾರರು ಮತ್ತು ಅವರ ಪಾತ್ರದ ಬಗ್ಗೆ ಮಾಹಿತಿ ನೀಡಿದ್ದಾರೆ.

ವ್ಯವಸಾಯಿಕ ಕೈಪಿಡಿ, (ಪ್ರಸಾರಾಂಗ, ಮೈಸೂರು), ಪ್ರಭುಶಂಕರ (ನಿರ್ದೇಶಕರು/ಪ್ರಕಾಶಕರು). ಇತ್ತೀಚಿನ ಕಾಲದ ಕೃಷಿಯ ಹಲವು ಮುಖಗಳನ್ನು ಪರಿಚಯಿಸುವ ಗ್ರಂಥವಾಗಿದ್ದು, ಮಣ್ಣಿನ ಗುಣಲಕ್ಷಣ, ನೀರಾವರಿ ಸ್ವರೂಪ ಮಳೆಯ ಅನುಕೂಲ–ಅನಾನುಕೂಲಗಳು, ಗೊಬ್ಬರ,–ಉಳುಮೆ ಕೃಷಿ ಸಲಕರಣೆಗಳು, ಮತ್ತು ಚಿಕ್ಕಮಗಳೂರು ಜಿಲ್ಲೆಗೆ ಸಂಬಂಧಿಸಿದ ಮಾಹಿತಿಗಳನ್ನು ಒಳಗೊಂಡಿದ್ದು ಜಿಲ್ಲೆಯ

ಹವಾಮಾನ, ಜಿಲ್ಲೆಯ 2 ವಿಭಾಗಗಳು 1) ಪಶ್ಚಿಮ ಘಟ್ಟಗಳು, 2) ಬಯಲು ಸೀಮ (ಕಡಿಮೆ ಮಳೆ), ಮಣ್ಣಿನ ವಿಧಗಳು, ಮಣ್ಣಿನ ಗುಣ, ಸ್ಥಳ, ಬೆಳೆಗಳು ತೋಟಗಾರಿಕೆ ಬೆಳೆಗಳು. ಆಹಾರ ಧಾನ್ಯಗಳು ಮುಂತಾದ ಅಂಶಗಳು ಒಳಗೊಂಡಿದ್ದು ಕೃಷಿಯ ಬಗೆಗೆ ವಿವರವಾದ ಮಾಹಿತಿ ಒಳಗೊಂಡಿದೆ.

ಬೆನಯ್ ಚೌಧರಿ, *ಗ್ರೋಥ್ ಆಫ್ ಕಮರ್ಷಿಯಲ್ ಅಗ್ರೀಕಲ್ಚರ್ ಇನ್ ಬೆಂಗಾಲ್ (1757–1900),* ಇಂಡಿಯನ್ ಸ್ಟಡೀಸ್ ಫಾಸ್ಟ್ ಆ್ಯಂಡ್ ಪ್ರೆಸೆಂಟ್ ಸಂಪುಟ –4 ಮತ್ತು 5, 1962–1964, ಇನ್ಸ್ಟಿಟ್ಯೂಟ್ ಆಫ್ ಹಿಸ್ಟಾರಿಕಲ್ ರಿಸರ್ಚ್ 9, ನ್ಯೂ ಮರಿನ್ ಲೈನ್ಸ್, ಬಾಂಬೆ, ಈ ಸಂಶೋಧನಾ ಲೇಖನದಲ್ಲಿ ಇಂಡಿಗೋ ಬೆಳೆ, ಬೆಳೆಯ ವಿಧಾನಗಳು, ತೋಟಗಳ ಬೆಳವಣಿಗೆ, ತೋಟ ಮಾಲೀಕರ ಬೆಳವಣಿಗೆ ಮತ್ತು ವಿಸ್ತರಣೆ, ಜಮೀನ್ದಾರ ಮತ್ತು ಕೃಷಿಕರ ಸಂಬಂಧ, ಶೋಷಣೆ, ಇಂಡಿಗೋ ಬೆಳೆಯ ಅವನತಿ, ಕಾರಣ ಪರಿಣಾಮಗಳು, ಕೃಷಿ ಕಾರ್ಮಿಕರು, ರೈತರು ಮತ್ತು ಇಂಡಿಗೊ ಬೆಳೆಗಾರರು (ಪ್ಲಾಂಟರ್ಸ್) ನಡುವಿನ ಸಂಬಂಧ, ಹೋರಾಟಗಳು (ಚಂಪಾರಣ್ಯ 1868) ನೀಲಿ ಬೆಳೆಯ ಬಗ್ಗೆ ಸರ್ಕಾರದ ನೀತಿಗಳು ಮುಂತಾದ ಅಂಶಗಳ ಬಗ್ಗೆ ಚರ್ಚಿಸಿದ್ದಾರೆ.

ದೇವರಾಜ್ ಚನ್ನನ, *ಡೇಟಾ ಆನ್ ಅಗ್ರಿಕಲ್ಚರ್ ಇನ್ ದಿ ದಿಘ ನಿಕಾಯ,* ಸಂಪುಟ 7, ಅಕ್ಟೋಬರ್ 1965 ನಿಂದ ಸೆಪ್ಟೆಂಬರ್ 1966, ಇಂಡಿಯನ್ ಸ್ಟಡೀಸ್ ಫಾಸ್ಟ್ ಆ್ಯಂಡ್ ಪ್ರೆಸೆಂಟ್. ಈ ಸಂಶೋಧನಾ ಲೇಖನದಲ್ಲಿ ಕ್ರಿ.ಪೂ. ಆರನೇ ಶತಮಾನದಲ್ಲಿ ಗ್ರಾಮ, ಕೃಷಿಕ ಸಮಾಜ, ಕೃಷಿ ಪದ್ಧತಿ, ಬೆಳೆಗಳು, ಕೃಷಿ ಪರಿಕರಗಳು, ಭೂ ಉಳುಮೆಗೆ ಪ್ರಾಣಿಗಳ ಬಳಕೆ ಮುಂತಾದ ಅಂಶಗಳನ್ನು ವಿಶ್ಲೇಷಿಸಿದ್ದಾರೆ.

ಕ್ರಿಸ್ಟೋಫರ್ ಬೇಕರ್, *ಆ್ಯನ್ ಇಂಡಿಯನ್ ರೂರಲ್ ಎಕಾನಾಮಿ 1880–1955, ದಿ ತಮಿಳುನಾಡು ಕಂಟ್ರಿಸೈಡ್,* ಇಂಡಿಯಾ ಪಾಸ್ಟ್ ಆ್ಯಂಡ್ ಪ್ರೆಸೆಂಟ್ ಸಂಪುಟ–2 1985 ನವೆಂಬರ್ 1. ಈ ಸಂಶೋಧನಾ ಲೇಖನದಲ್ಲಿ ತಮಿಳುನಾಡಿಗೆ ಸಂಬಂಧಿಸಿದಂತೆ ಕೃಷಿ ವ್ಯವಸ್ಥೆ, ಕೃಷಿಗೆ ಸಂಬಂಧಿಸಿದಂತೆ ಬ್ರಿಟಿಷರ ನೀತಿ, ರೈತರ ಗ್ರಾಮೀಣ ಸಮಾಜ, ನಗರ ಪಟ್ಟಣಗಳ ಬೆಳವಣಿಗೆಯ ಮೇಲೆ ಕೃಷಿಯ ಪ್ರಭಾವ, ಸಾರಿಗೆ–ಸಂಪರ್ಕಗಳ ಬೆಳವಣಿಗೆಗಳನ್ನು ವಿಶ್ಲೇಷಿಸಿದ್ದಾರೆ.

ಎಸ್.ಎನ್.ಪಾಂಡೆ, *ಎಕಾನಾಮಿಕ್ ಹಿಸ್ಟರಿ ಆಫ್ ಮಾಡರ್ನ್ ಇಂಡಿಯಾ (1757–1994),* ರೀಡ್‌ವರ್ಥಿ ಪಬ್ಲಿಕೇಷನ್ ಪ್ರ.ಲಿ. (ನ್ಯೂ ಡೆಲ್ಲಿ–1936), ಇದರಲ್ಲಿ ಬ್ರಿಟೀಷ್ ಆಳ್ವಿಕೆ ಕಾಲದ ಭೂಹಿಡುವಳಿ ಪದ್ಧತಿ, ಮಹಲ್ದಾರಿ ಪದ್ಧತಿಗಳನ್ನು ಚರ್ಚಿಸಿದ್ದಾರೆ ಕೃಷಿ ಪರಿಸ್ಥಿತಿ, ಕೃಷಿ ಭೂಮಿಯ ಮೇಲಿನ ಪ್ರಭುತ್ವ, ಸಾಂಪ್ರದಾಯಿಕ ಕೃಷಿ ಉಪಕರಣಗಳ ಬಳಕೆ, ಜಮೀನಿನ ಮಾರಾಟ, ಮರಾಠರ

ಆಕ್ರಮಣ (1740–51) ಕ್ಷಾಮ (1769–70), ಕೃಷಿ ವರ್ಗೀಕರಣ, ಕಾರ್ಮಿಕರ ಪೂರೈಕೆಯಲ್ಲಿನ ಕೊರತೆ, ಟೀ ತೋಟಗಳ ನಿರ್ವಹಣೆ ಸಮಸ್ಯೆ, ಅಫೀಮು ಬೆಳೆಯ ಬೆಲೆ ಹೆಚ್ಚಳ, ಇಂಡಿಗೊ ಬೆಳೆಗೆ ಉತ್ತೇಜನ, ಇಂಡಿಗೋ ಕೃಷಿ, ಕಬ್ಬು ಉತ್ಪಾದನೆ, ಬೇರೆ ಪ್ರದೇಶಗಳಲ್ಲಿ ವಾಣಿಜ್ಯ ಬೆಳೆಗಳು ಮುಂತಾದ ಅಂಶಗಳನ್ನು ವಿಶ್ಲೆಷಿಸಿದ್ದಾರೆ. ಬ್ರಿಟಿಷರ ಆಳ್ವಿಕೆಯಲ್ಲಿ ಕೃಷಿಯ ವಿಸ್ತರಣೆ ಆರ್ಥಿಕತೆ ಮೇಲೆ ಬ್ರಿಟಿಷ್ ಆಳ್ವಿಕೆಯ ಪರಿಣಾಮಗಳಲ್ಲಿ ಕೃಷಿಕನನ್ನು ಕಡು ಬಡವನಾಗಿ ಪರಿವರ್ತಿಸಿದ್ದು, ಸಾಲಿಗರ ಸ್ವಾರ್ಥ ಬುದ್ಧಿಯಿಂದ ಕೃಷಿಕರ ಮೇಲಿನ ದಬ್ಬಾಳಿಕೆ, ಕೃಷಿಯ ವಾಣಿಜ್ಯೀಕರಣ, ಕೈಗಾರಿಕೆ, ಕೈಗಾರಿಕೆಯ ಆಧುನಿಕರಣದ ಅಗತ್ಯತೆ, ಕ್ಷಾಮ ಮತ್ತು ಬಡತನ ವ್ಯಾಪಾರ ಮತ್ತು ವಾಣಿಜ್ಯದ ಮೇಲೆ ಉಂಟುಮಾಡಿದ ಪರಿಣಾಮಗಳನ್ನು ಚರ್ಚಿಸಲಾಗಿದೆ.

ಎಚ್.ಎನ್. ನಕ್ವಿ, ಹಿಸ್ಟರಿ ಆಫ್ ಮೊಘಲ್ ಗವರ್ನಮೆಂಟ್ ಅಂಡ್ ಆಡ್ಮಿನಿಸ್ಟ್ರೇಷನ್, ಕಾನಿಷ್ಕ ಪಬ್ಲಿಷಿಂಗ್ ಹೌಸ್. (ದೆಹಲಿ–1990) ಇದರಲ್ಲಿ ಶೇರ್‌ಷಹ ಸೂರಿ ಮತ್ತು ಮೊಗಲ ಕಾಲದ ಕೃಷಿ ಆಡಳಿತವನ್ನು ಚರ್ಚಿಸಿದ್ದು, ಮೊಗಲರು ಕೃಷಿಗೆ ನೀಡಿದ ಪ್ರಾಮುಖ್ಯತೆ, ಕಾರಣ, ಪರಿಣಾಮಗಳು, ಕೃಷಿಯ ಅಭಿವೃದ್ಧಿಗೆ ಕೈಗೊಂಡ ಕ್ರಮಗಳು, ಕೃಷಿ ಭೂಮಿಯ ವಿಂಗಡಣೆ (ಉಷಿರಿ, ಖರಜ್) ಗಳನ್ನು ವಿಶ್ಲೇಷಿಸಿದ್ದಾರೆ. ಮೊಗಲರ ಕಾಲದ ಕಂದಾಯ ಪದ್ಧತಿ, ಕಂದಾಯ ಅಧಿಕಾರಿಗಳು, ಆಹಾರ ಧಾನ್ಯಗಳು, ವ್ಯಾಪಾರ, ರೈತರ ಸ್ಥಿತಿಗತಿ, ಜೀವನ ವಿಧಾನ, ಕೃಷಿ ಭೂಮಿಯ ಮೇಲೆ ಕೃಷಿಕರ ಪ್ರಭಾವ ಕೃಷಿಕನ ಜೀವನ ವಿಧಾನ ವಿಶ್ಲೇಷಿಸಿದ್ದಾರೆ.

ಕೆ.ಎಸ್.ಎಸ್. ಸೆಶನ್, *ಪರ್ಮನೆಂಟ್ ಸೆಟಲ್‌ಮೆಂಟ್: ಮದ್ರಾಸ್ ವೇ,* ಪ್ರೊಸಿಡಿಂಗ್ಸ್ ಆಫ್ ದಿ ಇಂಡಿಯನ್ ಕಾಂಗ್ರೇಸ್, 49 ಸೆಷನ್, (ಡೆಲ್ಲಿ, 1988), ಈ ಸಂಶೋಧನ ಲೇಖನದಲ್ಲಿ ಬಂಗಾಳ ಪ್ರಾಂತ್ಯದಲ್ಲಿ ಲಾರ್ಡ್‌ಕಾರ್ನ್‌ವಾಲೀಸನು ಜಾರಿಗೆ ತಂದ ಭೂ ಹಿಡುವಳಿ ಪದ್ಧತಿಯಾದ ಖಾಯಂ ಜಮೀನ್ದಾರಿ ಪದ್ಧತಿಯನ್ನು ಚರ್ಚಿಸಿದ್ದಾರೆ. ಮದ್ರಾಸ್ ಪ್ರಾಂತ್ಯಕ್ಕೆ ಸಂಬಂಧಿಸಿದಂತೆ ಬಂಗಾಳ ಹಾಗೂ ಮದ್ರಾಸ್ ಪ್ರಾಂತ್ಯಗಳ ಗವರ್ನರ್ ಜನರಲ್‌ಗಳ ನಡುವೆ ಭೂ ಹಿಡುವಳಿ ಪದ್ಧತಿ ಜಾರಿಗೆ ಸಂಬಂಧಿಸಿದ ಪತ್ರ ವ್ಯವಹಾರ, ರೆವಿನ್ಯೂ ಮಂಡಳಿಯ ಅಧ್ಯಯನ ಮತ್ತು ಶಿಫಾರಸ್ಸುಗಳು, ವಿಶೇಷ ಆಯೋಗದ ಶಿಫಾರಸ್ಸುಗಳು 1803 ಮದ್ರಾಸ್ ಗವರ್ನರ್ ಜನರಲ್ ಥಾಮಸ್ ಮನ್ರೊ ರೈತವಾರಿ ಪದ್ಧತಿಯ ಜಾರಿಗೆ ಸಂಬಂಧಿಸಿದಂತೆ ಅವನ ವಾದಗಳನ್ನು ಚರ್ಚಿಸಲಾಗಿದೆ. ರೈಯತವಾರಿ ಪದ್ಧತಿ ಜಾರಿಗೆ ಬಂದ ನಂತರವೂ ಜಮೀನ್ದಾರಿ ಪದ್ಧತಿಯ ಮುಂದುವರಿಕೆ ಚರ್ಚಿಸಲಾಗಿದೆ. ಅಂತಿಮವಾಗಿ 1948 ರಲ್ಲಿ ಜಮೀನ್ದಾರಿ ಪದ್ಧತಿ ರದ್ಧತಿ ಕಾನೂನು ಜಾರಿ ಮೂಲಕ ಜಮೀನ್ದಾರಿ ಪದ್ಧತಿಯ ನಿರ್ಮೂಲನೆಯನ್ನು ವಿಶ್ಲೇಷಿಸಿದ್ದಾರೆ.

ಎಸ್.ಸಿ.ರಾಯ್ ಚೌದರಿ, *ಸೋಷಿಯಲ್, ಕಲ್ಚುರಲ್ ಅಂಡ್ ಎಕಾನಾಮಿಕ್ ಹಿಸ್ಟರಿ ಆಫ್ ಇಂಡಿಯ,* ಸುರ್ಜಿತ್ ಪಬ್ಲಿಕೇಷನ್ (ಮಾಡರ್ನ್ ಟೈಮ್ಸ್), ಸಂಪುಟ-2, (ಡೆಲ್ಲಿ 1980), ಈ ಗ್ರಂಥದ 3ನೇ ಅಧ್ಯಾಯದಲ್ಲಿ ಆಧುನಿಕ ಭಾರತದ ಆರ್ಥಿಕತೆಯನ್ನು ವಿಶ್ಲೇಷಿಸಿದ್ದಾರೆ. ವ್ಯವಸ್ಥಿತವಾದ ಆರ್ಥಿಕ ಸಂಘಟನೆ, ಬ್ರಿಟಿಷ್ ಭೂ ಹಿಡುವಳಿ ಪದ್ಧತಿ, ಈ ಪದ್ಧತಿ ರೈತರ ಮೇಲೆ ಉಂಟು ಮಾಡಿದ ದುಷ್ಪರಿಣಾಮಗಳು, ವಿಲಿಯಂ ಬೆಂಟಿಂಗ್‌ನ ಕಾಲದ ಕಂದಾಯ ನಿಗದಿ, ಅಮಾನವೀಯ ಕಂದಾಯ ನೀತಿ (ಹೆಚ್ಚು ತೆರಿಗೆ ವಸೂಲಿ), ಅಮಾನವೀಯ ಆಡಳಿತ ಚರ್ಚಿಸಿದ್ದಾರೆ. ನೀರಾವರಿ ಮತ್ತು ನೀರಾವರಿ ಇಲಾಖೆಯ ಆರಂಭ, 1919 ರ ಭಾರತ ಸರ್ಕಾರ ಕಾಯ್ದೆಯಂತೆ ನೀರಾವರಿ ವ್ಯವಸ್ಥೆಗೆ ಪ್ರಾಮುಖ್ಯತೆ, ಕಾಲುವೆ, ಬಾವಿ, ಕೆರೆ-ಕಟ್ಟೆ ನಿರ್ಮಾಣ, ಕೊಳವೆ ಬಾವಿ ನಿರ್ಮಾಣ, ಕ್ಷಾಮ ಪರಿಹಾರ, ಲಾರ್ಡ್ ಕರ್ಜನ್ ಕಾಲ 1898 ರಲ್ಲಿ ಹೊಸ ವೈಜ್ಞಾನಿಕ ತಂತ್ರಗಳ ಬಳಕೆ, ಕೃಷಿ ಉಪಕರಣಗಳ ಸಂಶೋಧನೆ, ರಸಾಯನಿಕ ಗೊಬ್ಬರ, ಸುಧಾರಿತ ಬೀಜಗಳ ಬಳಕೆ, ಆದರೆ ಎಲ್ಲಾ ವರ್ಗದ ರೈತರಿಗೂ ಈ ಸೌಲಭ್ಯಗಳು ಲಭಿಸದೆ ಹೋದುದು. ಕ್ಷಾಮ ಕರ್ಮೀಷನ್ 1880, 1898, 1900 ಗಳು ಕೃಷಿ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಸಂಶೋಧನೆಗೆ ಶಿಫಾರಸ್ಸುಗಳು, ಕೃಷಿ ಇಲಾಖೆಯ ಪುನರ್ ನಿರ್ಮಾಣ, ಕೃಷಿ ಸಂಶೋಧನಾ ಕೇಂದ್ರ ಬಿಹಾರದ ದರ್ಬಾಂಗ ಜಿಲ್ಲೆಯ ಪುಸದಲ್ಲಿ 1903 ರಲ್ಲಿ ಸ್ಥಾಪನೆ, ಕೃಷಿ ಕಾಲೇಜು 1908 ರಲ್ಲಿ ಸ್ಥಾಪನೆ ಮುಂತಾದ ಅಂಶಗಳನ್ನು ವಿಶ್ಲೇಷಿಸಿದ್ದಾರೆ. ವಾಣಿಜ್ಯ ಕೃಷಿ ಅಭಿವೃದ್ಧಿಗೆ ಬೆಳೆ ಸಮಿತಿ ರಚನೆ, 1921 ರಲ್ಲಿ ದಿ ಇಂಡಿಯನ್ ಸೆಂಟ್ರಲ್ ಕಾಟನ್ ಕಮಿಟಿ ಸ್ಥಾಪನೆ, ಸೆಣಬು ಸಮಿತಿ 1936 ರಲ್ಲಿ ಸ್ಥಾಪನೆ ಮುಂತಾದ ಅಂಶಗಳನ್ನು ಚರ್ಚಿಸಲಾಗಿದೆ. ಕೃಷಿ ಉತ್ಪನ್ನಗಳ ಅಂಕಿ-ಅಂಶಗಳನ್ನು ನೀಡಲಾಗಿದೆ. ಈ ಗ್ರಂಥವು ಕೃಷಿಗೆ ಸಂಬಂಧಿಸಿದಂತೆ ಆಧುನಿಕ ಬೆಳವಣಿಗೆಯ ಕುರಿತು ಸಮಗ್ರ ಮಾಹಿತಿಯನ್ನು ಒಳಗೊಂಡಿದೆ.

ನೀಲಮನಿ ಮುಖರ್ಜಿ, *ದಿ ರೈಯತ್ವರಿ ಸಿಸ್ಟಮ್ ಅಂಡ್ ಅಗ್ರೀಕಲ್ಚುರಲ್ ಸೆರ್ಫ್‌ಡಮ್ ಇನ್ ಮದ್ರಾಸ್ 1792-1827,* ಎಸ್ಸೆ್ಯ ಇನ್ ಮಾಡರ್ನ್ ಇಂಡಿಯನ್ ಎಕನಾಮಿಕ್ ಹಿಸ್ಟರಿ, ಇಂಡಿಯನ್ ಹಿಸ್ಟರಿ ಕಾಂಗ್ರೆಸ್, ಡೆಲ್ಲಿ 1987, 24ನೇ ಸೆಷನ್ ಪುಟ ಸಂಖ್ಯೆ. 20 ಈ ಸಂಶೋಧನಾ ಲೇಖನದಲ್ಲಿ 1819 ರಲ್ಲಿ ಮದ್ರಾಸ್ ಪ್ರಾಂತ್ಯದ ವಿವಿಧ ಜಿಲ್ಲೆಗಳಲ್ಲಿ ಕೃಷಿ ಕ್ಷೇತ್ರದಲ್ಲಿದ್ದ ಗುಲಾಮಗಿರಿತನವನ್ನು ವಿಶ್ಲೇಷಿಸಿದ್ದಾರೆ. ಗುಲಾಮರ ಮರಾಟ ಮತ್ತು ಅವರ ಬೆಲೆಯ ಗರಿಷ್ಟ ಪ್ರಮಾಣ (ರೂ: 50). ಕೃಷಿ ಗುಲಾಮರ ಕುಟುಂಬದಲ್ಲಿ ಜನಿಸಿದ ಮಗು ಹುಟ್ಟು ಗುಲಾಮತನ ಪಡೆಯುತ್ತಿದ್ದ. ಮಾಲಿಕನು ಗುಲಾಮರ ಕುಟುಂಬದ ಮೇಲೆ ಹಾಗೂ ಅವನ ಆಸ್ತಿಯ ಮೇಲೆ ಅಧಿಕಾರ ಹೊಂದಿರುತ್ತಿದ್ದ. ಮಾಲೀಕನ ಸಾಕಿದ ದನ-ಕರುಗಳನ್ನು ಮೇಯಿಸಬೇಕಿತ್ತು. ಬೇರೆಯವರಿಗೆ ಮಾರಾಟ ಮಾಡುವ ಅದನ್ನು ಒಪ್ಪಿಕೊಳ್ಳುವ

ನಿರ್ಣಯ ಗುಲಾಮ ಮಾಡಬಹುದಿತ್ತು. ಮಧುರ ಮತ್ತು ದಿಂಡಿಗಲ್‌ಗಳಲ್ಲಿ ಗುಲಾಮಗಿರಿ ಕಂಡುಬರುತ್ತದೆ. ಬ್ರಾಹ್ಮಣರು ಗುಲಾಮರನ್ನು ಆಯ್ಕೆ ಮಾಡುವಾಗ ಅವರ ಜಾತಿಯನ್ನು ಪರಿಗಣನೆಗೆ ತೆಗೆದುಕೊಳ್ಳುತ್ತಿದ್ದರು. ಒಂದೊಂದು ಭಾಗದಲ್ಲೂ ಒಂದೊಂದು ರೀತಿಯ ಗುಲಾಮಗಿರಿ ಪದ್ಧತಿ ಇತ್ತು. ಅದರಲ್ಲಿ ಅಲ್ಪ ಸ್ವಲ್ಪ ಬದಲಾವಣೆಗಳಿದ್ದವು. ಅವರ ದುಡಿಮೆಗೆ ಅತ್ಯಂತ ಕಡಿಮೆ ಪ್ರಮಾಣದ ಕೂಲಿ ನೀಡಲಾಗುತ್ತಿತ್ತು. ಕೃಷಿ ಕಾಲದಲ್ಲಿ ದುಡಿಮೆಗೆ ಪ್ರತಿಯಾಗಿ ಒಂದು ದಿನದ ಎರಡು ಹೊತ್ತಿನ ಊಟಕ್ಕೆ ಮಾತ್ರ ಭತ್ತ ನೀಡಲಾಗುತ್ತಿತ್ತು. ಉಳಿದ ಕಾಲದಲ್ಲಿ ದುಡಿಮೆಗೆ ಬೇರೆಯವರನ್ನು ಆಶ್ರಯಿಸಬೇಕಿತ್ತು. ಗುಲಾಮರ ಕುಟುಂಬದಲ್ಲಿ ಸಾವು ಸಂಭವಿಸಿದಾಗ ಮಾತ್ರ ಮಾಲೀಕರಿಂದ ಸ್ವಲ್ಪ ಹಣದ ಸಹಾಯ ಲಭಿಸುತ್ತಿತ್ತು. ಮದುವೆ, ಹಬ್ಬ, ಹುಟ್ಟುಹಬ್ಬದ ಸಂದರ್ಭದಲ್ಲಿ ಯಾವುದೇ ರೀತಿಯ ಸಹಾಯ ಮಾಲೀಕರಿಂದ ಲಭಿಸುತ್ತಿರಲಿಲ್ಲ. ದಕ್ಷಿಣ ಆರ್ಕಾಟ್ ಪ್ರದೇಶದಲ್ಲಿ ಪುಲ್ಲ ಮತ್ತು ಪರಿಯಾರ್ ಜಾತಿಯ ಗುಲಾಮರು ಕಂಡುಬರುತ್ತಾರೆ. ಕೃಷಿಯನ್ನು ಅವರು ಪೂಜಿಸುತ್ತಿದ್ದರು. ಆಗಿನ ಅವರ ಜನಸಂಖ್ಯಾ ಪ್ರಮಾಣ 17,000 ಆಗಿತ್ತು. ಅವರ ಮದುವೆ ವಿಧಾನ, ಅದರ ಮೇಲೆ ಮಾಲೀಕರ ಹಿಡಿತ ಚರ್ಚಿಸಿದ್ದಾರೆ. ಉತ್ತರ ಭಾರತದ ಗುಲಾಮರಿಗೆ ಹೋಲಿಸಿದರೆ ದಕ್ಷಿಣ ಭಾರತದಲ್ಲಿನ ಗುಲಾಮರು ಸ್ವಲ್ಪಮಟ್ಟಿನ ಸ್ವಾತಂತ್ರ್ಯ ಹೊಂದಿದ್ದರು. ತಿರುಚನಾಪಲ್ಲಿ ಭಾಗದ ಗುಲಾಮರ ಜೀವನ, ಮಾಲೀಕರೊಡನೆ ಅವರ ಸಂಬಂಧ ಚರ್ಚಿಸಲಾಗಿದೆ. ಕೆಲವು ಸಂದರ್ಭಗಳಲ್ಲಿ ತಮ್ಮ ಮಾಲೀಕರಿಂದ ಸ್ವತಂತ್ರ್ಯರಾಗುವ ಸಂದರ್ಭಗಳನ್ನು ಚರ್ಚಿಸಿದ್ದಾರೆ. 19ನೇ ಶತಮಾನದ ಕೊನೆ ಹಾಗೂ 20ನೇ ಶತಮಾನದ ಪ್ರಾರಂಭದಲ್ಲಿ ಬ್ರಿಟಿಷ್ ಸರ್ಕಾರ ಗುಲಾಮಿ ಪದ್ಧತಿಯ ರದ್ಧತಿಗೆ ಮಾಡಿದ ಪ್ರಯತ್ನಗಳನ್ನು ವಿಶ್ಲೇಷಿಸಿದ್ದಾರೆ.

ಕೆ.ಎಸ್. ಶಿವಣ್ಣ, *ಫಾರ್ಮ್-ಲೇಬರರ್ಸ್ ಆಫ್ ಕರ್ನಾಟಕ (ಏನ್ಷ್ಯಿಯೆಂಟ್ ಅಂಡ್ ಮಿಡೀವಲ್ ಪಿರಿಯಡ್),* ಪುಟ ಸಂಖ್ಯೆ 83, ದಿ ಎಸ್ಸೆಲ್ಸ ಇನ್ ಏನ್ಷ್ಯಿಯೆಂಟ್ ಇಂಡಿಯನ್ ಎಕಾನಾಮಿಕ್ ಹಿಟ್ಟರಿ, ಇಂಡಿಯನ್ ಹಿಸ್ಟರಿ ಕಾಂಗ್ರೆಸ್, (ಡೆಲ್ಲಿ, 1987). ಈ ಸಂಶೋಧನಾ ಲೇಖನದಲ್ಲಿ ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದಲ್ಲಿ ಕೃಷಿ ಕಾರ್ಮಿಕರ ಹೆಚ್ಚಳ ಮತ್ತು ಕೃಷಿ ಹೊರತಾದ ಕಾರ್ಮಿಕರ ಹೆಚ್ಚಳದ ಬಗ್ಗೆ ವಿಶ್ಲೇಷಿಸಿದ್ದಾರೆ. ಭೂ ಕಂದಾಯ ರಹಿತ ಜಮೀನಿನ ಹೆಚ್ಚಳ, ಭೂದಾನದ ಪ್ರಮಾಣದಲ್ಲಿ ಹೆಚ್ಚಳ, ಹಳ್ಳಿಯ ಸಾಂಪ್ರದಾಯಿಕ ಮುಖ್ಯಸ್ಥರುಗಳಾದ ಗೌಡ (ಮುಖ್ಯಸ್ಥ), ಶಾನುಬೋಗ (ಲೆಕ್ಕಿಗ), ತಳವಾರ (ಕಾವಲುಗಾರ), ಅಗ್ರಹಾರಗಳಲ್ಲಿ ಬ್ರಾಹ್ಮಣವಾಸ, ಹೀಗೆ ಕೃಷಿಕರಲ್ಲದ ಸಮುದಾಯಗಳು ರಾಜರಿಂದ ಭೂದಾನದ ಮೂಲಕ ಭೂಮಿಯ ಒಡೆತನವನ್ನು ಪಡೆದು ನಿಜವಾದ ಕೃಷಿಕ ಭೂ ರಹಿತ ಕೃಷಿ ಕಾರ್ಮಿಕನಾಗಿ ಪರಿವರ್ತನೆ ಹೊಂದಿದ ಅಂಶಗಳನ್ನು ಚರ್ಚಿಸಿದ್ದಾರೆ. ಕೃಷಿ ಕಾರ್ಮಿಕರಲ್ಲಿನ ವಿಧಗಳು 1) ಬಾಡಿಗೆ ಕಾರ್ಮಿಕರು 2) ಗುಲಾಮರು. (ಪ್ರಾಚೀನ ಕಾಲದಲ್ಲಿ ಕಮ್ಮಟ), ಕೃಷಿ ಕಾರ್ಮಿಕರು, ಬ್ರಾಹ್ಮಣ

ಭೂ ಮಾಲೀಕರಿಂದ ನೇಮಕ, ಕರ್ನಾಟಕ ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಕೃಷಿ ಕಾರ್ಮಿಕರು, ಅವರನ್ನು ಕರೆಯುತ್ತಿದ್ದ ಸಾಂಪ್ರದಾಯಿಕ ಹೆಸರುಗಳನ್ನು ಮೂಲ ಆಧಾರವಾಗಿಟ್ಟುಕೊಂಡು, ಭೂ ಮಾಲೀಕರಿಂದ ತಾವು ಬೆಳೆದ ಉತ್ಪತ್ತಿಯಲ್ಲಿ ಪಡೆಯುತ್ತಿದ್ದ ಪಾಲಿನ ಪ್ರಮಾಣ, ಕೃಷಿ ನಿರತ ಶೂದ್ರವರ್ಗ ಮತ್ತು ಭೂ ಮಾಲೀಕರೊಡನೆ ಸಂಬಂಧ, ಶೂದ್ರವರ್ಗ ಮತ್ತು ಭೂಮಿ ನಡುವಿನ ಸಂಬಂಧ, ಜೀತ ಕೃಷಿಕವರ್ಗಗಳಲ್ಲಿ ಕೆಲವು ಕೊಲಿಕಾಸ್, ಹೊಲೆಯ, ಮುಂಡಾಲು ಕರ್ನಾಟಕದಲ್ಲಿ ಕಂಡುಬರುತ್ತಾರೆ. ಕ್ರಿ.ಶ. 1403 ರ ಕರ್ನಾಟಕದ ಬೇರೆ ಬೇರೆ ಜಿಲ್ಲೆಯ ತಾಲ್ಲೂಕುಗಳಲ್ಲಿನ ಕೃಷಿ ನಿರತ ಜೀತದಾಳುಗಳ ಅಂಕಿ–ಅಂಶಗಳನ್ನು ನೀಡಲಾಗಿದೆ. ಮಲೆನಾಡು ಭಾಗಗಳು ಕೊಪ್ಪ, ಶೃಂಗೇರಿ ತಾಲ್ಲೂಕುಗಳಲ್ಲಿ ಮುಖ್ಯವಾಗಿ ಅವರಲ್ಲಿ 2 ವರ್ಗಗಳಿದ್ದು 1) ಹುಟ್ಟಲು, 2) ಮನ್ನಲು, ಈ ವರ್ಗದವರು ಹುಟ್ಟು ಜೀತದಾಳಾಗಿದ್ದು ತಮ್ಮ ಭೂ ಮಾಲೀಕರ ಸೇವೆಗಳನ್ನು ಮಾಡಬೇಕಿತ್ತು. ಇದು ವಂಶಪಾರಂಪರ್ಯ ಜೀತಪದ್ಧತಿಯಾಗಿತ್ತು. ಭೂ ಮಾಲೀಕ ತನ್ನ ಜಮೀನನ್ನು ಮಾರಾಟ ಮಾಡಿದಲ್ಲಿ, ತನ್ನ ಅಧೀನದಲ್ಲಿದ್ದ ಜೀತ ಕುಟುಂಬವನ್ನು ವಾರದಲ್ಲಿ ನಡೆಯುವ ಸಂತೆಯಲ್ಲಿ ಮಾರಾಟ ಮಾಡುತ್ತಿದ್ದನು. 5ನೇ ಶತಮಾನ, 12ನೇ ಶತಮಾನ, 18ನೇ ಶತಮಾನದಲ್ಲಿ ಜೀತಪದ್ಧತಿ ಆಚರಣೆಯಲ್ಲಿತ್ತು. ಬುಕನನ್ ಪ್ರಕಾರ ಕೆನರದಲ್ಲಿ ಜೀತ ಪದ್ಧತಿ ಆಚರಣೆ ಇದ್ದಿತು. ಜೀತದ ಪುರುಷ ಮತ್ತು ಮಹಿಳೆ ಒಂದು ದಿನಕ್ಕೆ ಪಡೆಯುತ್ತಿದ್ದ ಅಕ್ಕಿಯ ಪ್ರಮಾಣ, ದಕ್ಷಿಣ ಭಾರತದ ಇತರ ರಾಜ್ಯದಲ್ಲಿನ ಕೃಷಿ ಗುಲಾಮರ ಚರ್ಚೆ ಮಾಡಲಾಗಿದೆ. ಈ ಸಂಶೋಧನೆಯ ಕೊನೆಯಲ್ಲಿ ಯುರೋಪಿನ ಜೀತ ಪದ್ಧತಿಗೂ ಭಾರತದಲ್ಲಿನ ಜೀತ ಪದ್ಧತಿಗೂ ಇರುವ ವ್ಯತ್ಯಾಸ, ಕರ್ನಾಟಕದಲ್ಲಿ ಆ ನಂತರದ ಅವಧಿಯಲ್ಲಿ ಕೈಗಾರಿಕಾ ಕ್ರಾಂತಿ (ಬ್ರಿಟನ್)ಯ ನಂತರ ಕೃಷಿ ಜೀತ ಮತ್ತು ಕೃಷಿ ಕಾರ್ಮಿಕರ ಪ್ರಮಾಣ ಕಡಿಮೆಯಾಗಿ ಕೃಷಿಯೇತರ ಕಾರ್ಮಿಕರ ಸಂಖ್ಯೆಯ ಹೆಚ್ಚಳವನ್ನು ವಿಶ್ಲೇಷಿಸಿದ್ದಾರೆ.

ಬಿ.ಆರ್. ಗ್ರೋವರ್, *ಕ್ಲಾಸಿಫಿಕೇಷನ್ ಆಫ್ ಅಗ್ರೇರಿಯನ್ ಲ್ಯಾಂಡ್ ಅಂಡರ್ ಅಕ್ಬರ್,* ಪುಟ ಸಂಖ್ಯೆ 24, ಎಸ್ಸೆಟ ಇನ್ ಮಿಡಿವಲ್ ಇಂಡಿಯನ್ ಎಕಾನಾಮಿಕ್ ಹಿಸ್ಟರಿ, ಇಂಡಿಯನ್ ಹಿಸ್ಟರಿ ಕಾಂಗ್ರೆಸ್, (ಡೆಲ್ಲಿ, 1987), ಈ ಸಂಶೋಧನಾ ಲೇಖನದಲ್ಲಿ ಮೊಘಲರ ಕಾಲದ ಕೃಷಿ ಭೂಮಿಯ ಸ್ವರೂಪವು ಷೇರ್ ಷಾ ನ ಆಡಳಿತಾವಧಿಯಲ್ಲಿದ್ದ ಸ್ವರೂಪದ ಹೆಚ್ಚಿನ ಅಂಶಗಳನ್ನು ಹೊಂದಿದ್ದರೂ ಅರಬ್ಬರ ಕಾಲದಲ್ಲಿ ಮುಖ್ಯವಾಗಿ ಮಾರ್ಪಾಡುಗಳನ್ನು ಚರ್ಚಿಸಿದ್ದಾರೆ. ಹಾಗೂ ಷಹ–ಜಹಾನ್ ಮತ್ತು ಔರಂಗಜೇಬನ ಕಾಲದಲ್ಲಿ ಸ್ವಲ್ಪ ಬದಲಾವಣೆಯನ್ನು ಗುರುತಿಸಿದ್ದಾರೆ. ಕೃಷಿ ಭೂಮಿಯ ವಿಧವನ್ನು ಮಣ್ಣಿನ ಆಧಾರ ಅಥವಾ ಭೂಮಿಯು ಕೃಷಿಗೆ ಒಳಗಾದ ಪ್ರಮಾಣವನ್ನಾಧರಿಸಿ ಅಥವಾ ಇತರೆ ಅಂಶಗಳನ್ನು ಆಧರಿಸಿ ವಿಂಗಡಿಸಲಾಗಿದೆ. ಅವುಗಳಲ್ಲಿ ಪೊಲಜ್, ಪರೌತಿ, ಚಾಚರ್ ಮತ್ತು ಬಂಜರ್.

ಇವುಗಳನ್ನು ವಿವರವಾಗಿ ಚರ್ಚಿಸಲಾಗಿದೆ. ನೀರಾವರಿ ಸೌಲಭ್ಯ ಹೊಂದಿದ ಕೃಷಿ ಭೂಮಿ ನೀರಾವರಿ ಹೊಂದಿರದ ಭೂಮಿಯ ಬಗ್ಗೆ ವಿಶ್ಲೇಷಿಸಲಾಗಿದೆ.

ಬಾರ್ಕೂರು ಉದಯ, *ಸಮಾಜ ಸಂಸ್ಕೃತಿ ಪ್ರಭುತ್ವ, ಪ್ರಾಚೀನ ಭಾರತದ ಚರಿತ್ರೆಯ ಇಣುಕುನೋಟ*, ಪ್ರೊ-ಡಿಗಿ ಪ್ರಿಂಟಿಂಗ್, ಉಡುಪಿ, 2019. ಈ ಗ್ರಂಥದಲ್ಲಿ ಪ್ರಾಚೀನ ಉತ್ತರ ಮತ್ತು ದಕ್ಷಿಣ ಭಾರತದ ಚರಿತ್ರೆಯ ಸಂಕ್ಷಿಪ್ತ ಚಿತ್ರಣವನ್ನು ನೀಡಲಾಗಿದೆ. ಹರಪ್ಪ ಕಾಲದಿಂದ ಗುಪ್ತರ ಸಾಮ್ರಾಜ್ಯದವರೆಗಿನ ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ವ್ಯಾಖ್ಯಾನಿಸುವ ಪ್ರಯತ್ನ ಮಾಡಲಾಗಿದೆ. ದಕ್ಷಿಣ ಭಾರತಕ್ಕೆ ಸಂಬಂಧಿಸಿದಂತೆ ಶಾತವಾಹನರು ಮತ್ತು ಸಂಗಂ ಸಾಹಿತ್ಯವನ್ನು ಶೋಧಿಸುವ ಮೂಲಕ ಆ ಕಾಲದ ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಇತಿಹಾಸವನ್ನು ತಿಳಿಯಲು ಸಹಾಯಕವಾಗಿದೆ. ಪ್ರಾಚೀನ ಭಾರತದಲ್ಲಿ ಕೃಷಿಯ ಆರಂಭ, ಬೆಳವಣಿಗೆ ಮತ್ತು ಕೃಷಿ ಬೆಳೆಗಳು, ಕೃಷಿ ಪದ್ಧತಿ ಮತ್ತು ಭೂ ಕಂದಾಯಗಳ ಬಗ್ಗೆ ಬೆಳಕು ಚೆಲ್ಲುತ್ತದೆ. ಅಷ್ಟೆ ಅಲ್ಲದೆ ಭಾರತ ಮತ್ತು ರೋಮ್ ದೇಶಗಳ ನಡುವಿನ ವ್ಯಾಪಾರ ಸಂಬಂಧಗಳ ಬಗ್ಗೆ ಮಾಹಿತಿ ನೀಡುತ್ತದೆ. ಪ್ರಾಚೀನ ಕಾಲದಲ್ಲಿ ರಫ್ತು ಮತ್ತು ಆಮದು ವಸ್ತುಗಳ ವಿವರ, ಆಂತರಿಕ ಹಾಗೂ ವಿದೇಶಿ ವ್ಯಾಪಾರದಿಂದ ಗಳಿಸುತ್ತಿದ್ದ ಲಾಭ, ವ್ಯಾಪಾರದಲ್ಲಿ ವಸ್ತು ವಿನಿಮಯ ಪದ್ಧತಿ ಮುಂತಾದ ಅಂಶಗಳ ಬಗ್ಗೆ ಮಾಹಿತಿ ಲಭ್ಯವಿದ್ದು, ಆ ಕಾಲದ ಜನ ಜೀವನ ಶಾಂತಿ, ಸುಖ, ಸಂತೋಷಗಳಿಂದ ಕೂಡಿದ್ದ ಬಗ್ಗೆ ತಿಳಿಯುತ್ತದೆ. ಈ ಮೂಲಕ ನನ್ನ ಅಧ್ಯಯನ ಅವಧಿಯ ಜನ ಜೀನವವನ್ನು ಹೋಲಿಸುವ ಜೊತೆಗೆ ಆರ್ಥಿಕ ಮತ್ತು ಸಾಮಾಜಿಕ ಜೀವನದಲ್ಲಿನ ವ್ಯತ್ಯಾಸವನ್ನು ಗುರುತಿಸುವುದಕ್ಕೆ ಸಹಾಯವಾಗಿದೆ.

ಎಮ್. ಶಾಮ ರಾವ್, *ಮಾಡರ್ನ್ ಮೈಸೂರ್, ಫ್ರಮ್ ದಿ ಬಿಗನಿಂಗ್ ಟು 1868,* ಹಿಗ್ಗಿನ್ ಬಾಥಮ್, ಸೌತ್ ಪೆರಡ್, ಬೆಂಗಳೂರು 1936. ಈ ಮಹಾನ್ ಗ್ರಂಥವು ಕರ್ನಾಟಕವನ್ನಾಳಿದ ಒಡೆಯರ ಮನೆತನದ ರಾಜಕೀಯ, ಆರ್ಥಿಕ, ಸಾಮಾಜಿಕ ಇತಿಹಾಸದ ಬಗೆಗೆ 1399ರಿಂದ 1869ರ ವರೆಗಿನ ವಿವರವಾದ ಮಾಹಿತಿಯನ್ನು ಒದಗಿಸುತ್ತದೆ. ಮೊದಲ ಅಧ್ಯಯದಲ್ಲಿ 1399–1761ರ ವರೆಗಿನ ಕರ್ನಾಟಕದಲ್ಲಿ ಯಾದವ ರಾಜಕುಮಾರರಿಂದ ಒಡೆಯರ ಆಳ್ವಿಕೆಯ ಸ್ಥಾಪನೆ, ಪ್ರಮುಖ ರಾಜರುಗಳು, ರಾಜ್ಯ ವಿಸ್ತರಣೆಯನ್ನು ತಿಳಿಸುತ್ತದೆ. ಚಿಕ್ಕದೇವರಾಜ ಒಡೆಯರ ಆಳ್ವಿಕೆಯ ಕೊನೆಯ ವೇಳೆಗೆ ಮೈಸೂರು ರಾಜ್ಯ ಪಶ್ಚಿಮದಲ್ಲಿ ಹಾಸನ ಮತ್ತು ಕಡೂರು ಜಿಲ್ಲೆಯವರೆಗೆ ವಿಸ್ತರಿಸಿದ್ದ ಬಗ್ಗೆ ಮಾಹಿತಿ ಹೊಂದಿದೆ. ದೊಡ್ಡ ಕೃಷ್ಣರಾಜ ಒಡೆಯರು ಅಧಿಕಾರ ವಹಿಸಿಕೊಂಡಾಗ ಅವರಿಗೆ ಇನ್ನೂ 12 ವರ್ಷದ ಬಾಲಕರಾಗಿದ್ದು, ಮಂತ್ರಿಗಳಾದ ದೇವರಾಜಯ್ಯ ಮತ್ತು ನಂಜರಾಜಯ್ಯರ ಮೇಲ್ವಿಚಾರಣೆಯಲ್ಲಿ ರಾಜ್ಯಭಾರ ವಹಿಸಿಕೊಂಡಿದ್ದರು. ಈ ಸಂದರ್ಭದಲ್ಲಿ ಹೈದರಾಲಿ ಮತ್ತು ಅವನ ಮಗ ಟಿಪ್ಪು ದೊರಕಿದ

ಅವಕಾಶವನ್ನು ಉಪಯೋಗಿಸಿಕೊಂಡು ಮೈಸೂರು ಸಂಸ್ಥಾನದ ಸಮಗ್ರ ಅಧಿಕಾರವನ್ನು ತಮ್ಮ ಕೈಗೆ ತೆಗೆದುಕೊಂಡು ಸಂಸ್ಥಾನದ ಎಲ್ಲೆಯನ್ನು ವಿಸ್ತರಿಸಿದರು, ಮತ್ತು ಆಡಳಿತದಲ್ಲಿ ಅನೇಕ ಬದಲಾವಣೆಯನ್ನು ಮಾಡಿದರು. ಅದರಲ್ಲಿ ಭೂ ಕಂದಾಯ ನೀತಿಯಲ್ಲಿನ ಬದಲಾವಣೆಯ ವಿವರ ಈ ಗ್ರಂಥ ಒಳಗೊಂಡಿದೆ. 1799ರಲ್ಲಿ ಟಿಪ್ಪುವಿನ ಅವನತಿ ಮತ್ತು ಬ್ರಿಟಿಷರಿಂದ ಹಿಂದಿನ ಒಡೆಯರಿಗೆ ರಾಜ್ಯದ ಹಸ್ತಾಂತರ ಮತ್ತು ಇವರಿಬ್ಬರ ನಡುವಿನ ಒಪ್ಪಂದ, ಷರತ್ತುಗಳು, ಮುಮ್ಮಡಿ ಕೃಷ್ಣ ರಾಜ ಒಡೆಯರ ಸ್ಥಾಪನೆ, ಪೂರ್ಣಯ್ಯನ ಆಡಳಿತ, ಮುಮ್ಮಡಿ ಕೃಷ್ಣರಾಜ ಒಡೆಯರು ನೇರ ಆಳ್ವಿಕೆ, ಆಡಳಿತ ವ್ಯವಸ್ಥೆ, ನಗರದಂಗೆ, ಬ್ರಿಟಿಷ್ ಕಮಿಷನ್ನರ ಆಡಳಿತದಲ್ಲಿ ಮಾಡಿದ ಸುಧಾರಣೆಗಳ ಬಗ್ಗೆ ವಿವರವಾದ ಮಾಹಿತಿ ಒಳಗೊಂಡಿದೆ. ಕೃಷಿ ಕಂದಾಯ ವ್ಯವಸ್ಥೆಯಲ್ಲಿ ಸುಧಾರಣೆಗಳು, ಭೂ ಹಿಡುವಳಿಗಳು, ಇನಾಂ ಭೂಮಿ, ಬಾರಬಲೂತಿ ವ್ಯವಸ್ಥೆ, ಕೊಡಗಿ ಇನಾಂ, ಕಂದಾಯ ಅಧಿಕಾರಿಗಳು ಅವರ ಕಾರ್ಯ, ಬಟಾಯಿ ಹಿಡುವಳಿ, ಕಾಫಿ ತೋಟಗಳು, ಏಲಕ್ಕಿ ಕೃಷಿಗೆ ನೀಡಿದ ಉತ್ತೇಜನ, ಇನಾಂ ಸೆಟ್ಲ್‌ಮೆಂಟ್, ಸಾರಿಗೆ-ಸಂಪರ್ಕದಲ್ಲಿನ ಸುಧಾರಣೆಗಳು, ಯರೋಪಿನ ಆಧುನಿಕ ಔಷದಿಗಳ ಬಳಕೆಗೆ ತಂದಿದ್ದು, ಶಿಕ್ಷಣ ಪದ್ಧತಿಯಲ್ಲಿನ ಸುಧಾರಣೆಗಳು ಮುಂತಾದವುಗಳ ಬಗ್ಗೆ ವಿಫುಲವಾದ ಮಾಹಿತಿಗಳನ್ನು ಈ ಐತಿಹಾಸಿಕ ಗ್ರಂಥವು ಒಳಗೊಂಡಿದೆ.

****